ಬಸವರಾಜ ಬಳಿಗಾರ ಸಂಪಾದಕತ್ವದಲ್ಲಿ

KARKAN/2021/27600

# ಕರುನಾಡ ಕಂದ

ಪಾಕ್ಷಿಕ

ಸಂಪುಟ–1 । ಸಂಚಿಕೆ–6 । ದಿನಾಂಕ: 16–01–2022 ಪುಟಗಳು: 20

ಬೆಲೆ: 20/-



## ಗಾಂಧಿವಾದದ ಅಗತ್ಯವನ್ನು ಮನಗಾಣಿಸುತ್ತಿರುವ ಕೊರೋನಾ



## ಸಾವಿರ ಅನಾಥ ಮಕ್ಕಳ ತಾಯಿ ಸಿಂಧೂತಾಯಿ ಸಪ್ಕಾಲ್




## ನಕ್ಷತ್ರಾಕಾರದ–ಮಂಜ್ರಾಬಾದ್–ಕೋಟೆ



## ಮಾನವೀಯತೆ ಮೆರೆದ ಜಾಫರ್ ಹಾಗೂ ಪೋಲಿಸ್ ಅಧಿಕಾರಿಗಳು



## ಸ್ವರಾಜ್ಯ ಜನನಿ ಜೀಜಾಮಾತ





## ಆಸಕ್ತಿ ಇದ್ದರೆ ಕಲಿಯಲು ಎಲ್ಲಾ ವಿಷಯವೂ ಸುಲಭ

## ಕರೆಂಟ್ ಯಾವಾಗ ಬರುತ್ತೆ...? ಅದೇ ಚಿಂತೆ

## ಮುಗಿಲುಮುಟ್ಟಿದ ರೈತರ ಸಂಕಷ್ಟ

ಕರುನಾಡ ಕಂದ
ಸಂಪುಟ–1 | ಸಂಚಿಕೆ–5
ದಿನಾಂಕ: 01–01–2022 | ಪುಟಗಳು: 20

# ಕರೆಂಟ್ ಯಾವಾಗ ಬರುತ್ತೆ...? ಅದೇ ಚಿಂತೆ



ಪಾವಗಡ ತಾಲೂಕಿನ ವೈ.ಎನ್. ಹೊಸಕೋಟೆ ಹೋಬಳಿಯ ನಾಡ ಕಛೇರಿ ಮುಂದೆ ಕಾದುಕುಳಿತಿರುವ ಜನ ಇಲ್ಲಿ ಯಾವಾಗ ಕರಂಟ್ ಬರುತ್ತದೆಯೋ ಆಗ ಮಾತ್ರ ಕೆಲಸ ಅಗುವುದು ಕರೆಂಟ್ ಬಂದಿಲ್ಲ ಅಂದ್ರೆ ಅವತ್ತು ದಿನವಿಡೀ ಕಾದು ಅವತ್ತು ಇವರ ಸರದಿ ಬರುವಷ್ಟರಲ್ಲಿ ಕಛೇರಿ ಬಾಗಿಲು ಹಾಕುತ್ತಾರೆ ಮತ್ತೆ ಮತ್ತೊಂದು ದಿನ ಬರಬೇಕು ಹೀಗೆ ಸಾರ್ವಜನಿಕರು ಒಂದು ಆಧಾರ್ ಗಾಗಿ ಮೂರು ಅಥವಾ ನಾಲ್ಕು ದಿನ ಕಾದು ತೆಗೆಸುವ ಪರಿಸ್ಥಿತಿ ಇಲ್ಲಿನ ಅವ್ಯವಸ್ಥೆ ಬಗ್ಗೆ ಇಲ್ಲಿನ ಸಿಬ್ಬಂದಿಯನ್ನು ಕೇಳಿದರೆ ನಮಗೆ(ಣಠಿ) ವ್ಯವಸ್ಥೆ ಮಾಡಿಲ್ಲ ನಾವು ಏನು ಮಾಡೋದು ಎಂದು ಉಡಾಪೆ ಉತ್ತರ ನೀಡುತ್ತಾರೆ ಮತ್ತು ಕರೆಂಟ್ ಬಂದರೆ ಅವರ ದಳ್ಳಾಳಿಗಳ ಕೆಲಸ ಆಗುವವರೆಗೂ ಜನ ಸಾಮನ್ಯರ ಕೆಲಸ ಅಗುವುದುಲ್ಲ ಎಂದು ನಾಡ ಕಚೇರಿ ಮುಂದೆ ಕೂತು ಅಧಿಕಾರಗಳನ್ನು ಹಿಡಿಶಾಪ ಹಾಕಿ ಹೋಗುತ್ತಿದ್ದಾರೆ ಅದರೂ ಸಹ ತಾಲ್ಲೂಕು ಆಡಳಿತ ಎಚ್ಚೆತ್ತುಕೊಂಡು(ಣಠಿ) ವ್ಯವಸ್ಥೆ ಮಾಡದೆ ಸಾರ್ವಜನಿಕ ಬದುಕಿನ ಜೊತೆ ಆಟವಾಡುತ್ತಿದೆ ಇದೇ ಸಂದರ್ಭದಲ್ಲಿ ಬಿ.ಹೊಸಹಳ್ಳಿ ಗ್ರಾಮದ ಚನ್ನರಾಯಪ್ಪನವರು ಮಾತನಾಡುತ್ತಾ ತನ್ನ ಹೆಂಡತಿಯ ಆಧಾರ್ ಕಾರ್ಡ್ ತೆಗಿಸಲು 3ದಿನಗಳಿಂದ ಬರುತ್ತಿದ್ದೇನೆ ಆದರೂ ಅಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು ಆದ್ದರಿಂದ ತಾಲ್ಲೂಕು ಆಡಳಿತ ನಿದ್ರೆಯಿಂದ ಎದ್ದು ಮೊದಲು ಈ ಅವ್ಯವಸ್ಥೆಯನ್ನು ಸರಿಪಡಿಸಿ ಮತ್ತು ಇಲ್ಲಿ ನಡೆಯುತ್ತಿರುವ ಅವ್ಯವಸ್ಥೆ, ಅಕ್ರಮಗಳಿಗೆ ಕಡಿವಾಣ ಹಾಕಬೇಕಾಗಿದೆ ಎನ್ನುವುದು ಸಾರ್ವಜನಿಕರ ಆಗ್ರಹವಾಗಿದೆ.

# ಯಲಗಟ್ಟ ಚರಂಡಿಯ ಹೂಳೆತ್ತಲು ಒತ್ತಾಯ



ಲಿಂಗಸಗೂರು ತಾಲೂಕಿನ ಚಿನ್ನದ ಗಣಿ ಸಮೀಪದ ರೋಡಲಬಂಡಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಯಲಗಟ್ಟ ಗ್ರಾಮದ ವಾರ್ಡಗಳ ಚರಂಡಿಗಳು ಹೂಳು ತುಂಬಿದ್ದು ಗ್ರಾಮ ಪಂಚಾಯತಿಯ ವಾರ್ಡ್ ಸದಸ್ಯರು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ನಿವಾಸಿಗಳು ದೂರಿದ್ದಾರೆ.

ಅವೈಜ್ಞಾನಿಕವಾಗಿ ಸಿಸಿ ರಸ್ತೆ ನಿರ್ಮಾಣದಿಂದ ಕೊಳಚೆ ನೀರು ರಸ್ತೆಗೆ ಹರಿಯುತ್ತಿದೆ ಸುಮಾರು ಎರಡು ವರ್ಷಗಳಿಂದ ಚರಂಡಿಯಲ್ಲಿ ಹೂಳು ತೆರೆವುಗೊಳಿಸಿಲ್ಲ .ಹೀಗಾಗಿ ಮೂಗು ಮುಚ್ಚಿಕೊಂಡು ತಿರುಗಾಡುವಾಂತಗಿದೆ .

ಸಂಜೆ ಆದಂತೆ ಸೊಳ್ಳೆಗಳ ಕಾಟ ಹೆಚ್ಚಾಗಿದೆ ನಾನಾರೀತಿಯ ರೋಗಗಳು ಬರುತ್ತಿವ್ರ್. ವಾರ್ಡ್ ಗಳ ಸದಸ್ಯರು ಈ ಬಗ್ಗೆ ಗಮನ ಹರಿಸಿ ಸರಿ ಪಡಿಸುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ನಿನ್ನೊಲುಮೆಯ ಹುಡುಗಿ

ನಿನ್ನೊಲುಮೆಯ ಹುಡುಗಿಯ
ಹೊಸ ವರುಷದ ಹೊಸ ಆಸೆಯ
ಕೇಳು ನಲ್ಲ.

ಹಳೇ ವರುಷದ ಹಳೇ ನೆನಪಿನ
ಹಳಸಲು ಕಥೆ
ನಾ ಹೇಳುವುದಿಲ್ಲ.

ಹೃದಯದಾಳದ ಪ್ರೇಮ ಗಾನದ
ಮನಸಿನ ಅರ್ಥ ಅರಿಯದಿರೆ
ಅದು ಸ್ನೇಹವಲ್ಲ.

ಸ್ನೇಹ ಸಂಪದವ ಮೋಹದ ಮಧುವ
ಕೂಡಿ ನಾ ನೀಡುವೆ
ಈ ಮಾತೊಳು ಹುಸಿಯಿಲ್ಲ.

ಹಣದ ಆಮಿಷಕೆ ಗೆಳೆಯ..
ನೀ ಬಲಿಯಾಗಬೇಡ
ಗುಣವಂತಳ ಕೈ ಹಿಡಿಯಲು
ಹಿಂಜರಿಯಬೇಡ.

ಪ್ರೀತಿ ಪ್ರೇಮ ತುಂಬಲಿ
ಮನ –ಮನೆಯಲ್ಲ
ಈ ಹೃದಯಗಳು ಅರಿಯಲಿ
ಬಾಳು ಎಂಬುದು ಬೇವು ಬೆಲ್ಲ.

ಹೊಸ ವರ್ಷದ
ಹೊಸ ಕನಸು ನನಸಾಗಲಿ
ಪ್ರೀತಿಯ ಬೆಸುಗೆ ಬೆಸೆಯಲಿ
ಭರವಸೆಯ ಬದುಕು ನಮ್ಮದಾಗಲಿ.

– ಜೆ.ಎನ್.ಬಸವರಾಜಪ್ಪ.
ಸಾಹಿತಿಗಳು ಭದ್ರಾವತಿ

## ಕುಲ ಯಾವುದು?

ಕುಲ ಕುಲ ಕುಲ ವೆಂದು
ಬಡಿದಾಡುವ ಕುಲಗೆಟ್ಟ
ಮತಿಹೀನ ಮನುಜರೇ
ಬಿಟ್ಟು ಬನ್ನಿರಣ್ಣ ನಿಮ್ಮ ಕುಲವನು,
ತೊಲಗಿಸೋಣ ಈ ಜಾಡ್ಯವನು,
ಕಟ್ಟೋಣ ನಾವು
ಸುಂದರ ಸಮಾಜವನು.
ಆಗುವುದು ಬೇಡ
ಕೇವಲ. ಕುಲಬಾಂಧವರು.
ಆಗೋಣ ನಾವು
ಭಾವ್ಯಕ್ಯ ದ ಬಾಂಧವರು.
ನೀವೂ ಬರುವಿರೇನು?

– ಶಿವಪ್ರಸಾದ್ ಹಾದಿಮನಿ. ಕೊಪ್ಪಳ.

# ಕರುನಾಡ ಕಂದ ವರದಿಯ ಫಲಶೃತಿ



ಪಾವಗಡ ತಾಲ್ಲೂಕು ಮರಿದಾಸಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಹಳ್ಳಿಗಳಲ್ಲಿ ಗ್ರಾಮ ಸಭೆ ನಡೆಸುವ ಮೂಲಕ ಹಳ್ಳಗಳಲ್ಲಿನ ಕುಂದುಕೊರತೆಗಳನ್ನು ಅಲ್ಲಿನ ಆಯಾ ಸ್ಥಳೀಯ ಪ್ರತಿನಿಧಿಗಳ ಅದ್ಯಕ್ಷತೆಯಲ್ಲಿ ಗ್ರಾಮ ಪಂಚಾಯತಿ ಪಿಡಿಓ ಗಳಾದ ಮುದ್ದಣ್ಣನರು ಸಭೆ ನಡೆಸುವುದರ ಮೂಲಕ ಸ್ಥಳಿಯ ನಿವಾಸಿಗಳ ಜೊತೆ ಅಲ್ಲಿ ಅವ್ಯವಸ್ಥೆಗಳ ಬಗ್ಗೆ ಚರ್ಚಿಸಿ ಜನರ ಬೇಡಿಕೆಯಂತೆ ಯಾವ ಯಾವ ಸಮಸ್ಯಗಳಿವೆ ಎಂದು ಪಟ್ಟಿಮಾಡಿ ಅವುಗಳನ್ನು ಕಾರ್ಯರೂಪಕ್ಕೆ ತರುವುದು ಎಂದು ಹೇಳಿದರು ಇದೇ ಸಮಯದಲ್ಲಿ ಕೆಂದ್ರ ಸರ್ಕಾರದ ಯೋಜನೆಯಾದ ನರೇಗಾ ಯೋಜನೆ ಬಗ್ಗೆ ಮತ್ತು ಅದರ ಉಪಯೋಗ ಮತ್ತು ಈ ಯೋಜನೆ ಬಗ್ಗೆ ಆಯಾ ಗ್ರಾಮಗಳಲ್ಲಿ ನರೇಗಾ ಯೋಜನೆಯ ಆಡಿಯಲ್ಲಿ ಮಾಡಬೇಕಾದ ಕಾಮಗಾರಿಗಳ ಕ್ರಿಯಾ ಯೋಜನೆ ಮಾಡಲು ಸಾರ್ವಜನಿಕರಿಂದ ಅರ್ಜಿಗಳನ್ನು ಪಡೆದುಕೊಂಡರು. ಈ ಬಗ್ಗೆ ನಮ್ಮ ಕರುನಾಡಕಂದ ಪತ್ರಿಕೆಯ ಹಿಂದಿನ ಸಂಚಿಕೆಯಲ್ಲಿ ಈ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳ ಅವ್ಯವಸ್ಥೆ ಬಗ್ಗೆ ವರದಿ ಬೆನ್ನಲ್ಲೆ ಹೆಚ್ಚೆತ್ತ ಅಧಿಕಾರಿಗಳು ಇವತ್ತು ಹಳ್ಳಿಗಳಿಗೆ ಬೇಟಿ ನೀಡಿದರು ಈ ಸಮಯದಲ್ಲಿ ಪಂಚಾಯ್ತಿ ಪಿಡಿಓ ಮುದ್ದಣ್ಣ ಮತ್ತು ಪಂಚಾಯತಿ ಉಪಾಧ್ಯಕ್ಷರಾದ ಮಹಿತ, ಸದಸ್ಯರಾದ ಶಿವಲಿಂಗಪ್ಪ ,ಕರವಸುಲಿಗಾರರದ ಪಾಲಯ್ಯ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು .

–ಪೃಥ್ವಿರಾಜ್

# ಗ್ರಾಮ ಪಂಚಾಯಿತಿ ಸದಸ್ಯರಿಗೆ ತರಬೇತಿ



ಹಟ್ಟಿ ಚಿನ್ನದ ಗಣಿ ಸಮೀಪದ ರೋಡಲಬಂಡ ತವಗ ಗ್ರಾಮ ಪಂಚಾಯತಿನಲ್ಲಿ ಸದಸ್ಯರು ಮಹಿಳಾ ಒಕ್ಕೂಟ ಸಂಘ ತರಬೇತಿ ಶಿಬಿರ ಈ ಸಂದರ್ಭದಲ್ಲಿ ಸದಸ್ಯರು ಅವಧಿಗೆ ಜನರ ಸ್ಪಂದನೆ ಹೇಗೆ ಕಳಿಸಬಹುದು ಸದಸ್ಯರ ಜವಾಬ್ದಾರಿ ಏನಿರುತ್ತದೆ.ಉದ್ಯೋಗ ಸೌಲಭ್ಯ ಒದಗಿಸುವುದು ಮುಖ್ಯ ಪಾತ್ರವಾಗಿದ್ದು ಅದೇ ರೀತಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಜನ–ರಿಗೆ ಕೆಲಸ ಕೊಡಿಸುವುದು ಜನರು ಅರ್ಜಿ ಕೊಟ್ಟ 14 ದಿನದೊಳಗೆ ಕೆಲಸ ಕೊಡುವುದು ಒಂದು ವೇಳೆ ಕೆಲಸ ಕೊಡದಿದ್ದಲ್ಲಿ ಉದ್ಯೋಗ ಭತ್ತ ರೂಪದಲ್ಲಿ ಕೊಡುವುದು ಅದೇ ರೀತಿ ಮಿಷನ್ ಅಂತ್ಯೋದಯ ಕಾಮಗಾರಿ ಬಗ್ಗೆ ಸ್ಪಷ್ಟನೆ ಮಾಹಿತಿ ನೀಡಿದರು. ಹಾಗೂ ಸಾಮಾನ್ಯ ಸಭೆ ತಿಂಗಳಿಗೊಮ್ಮೆ ಕರೆಯಬೇಕು ಅದರಲ್ಲಿ ಕಾಮಗಾರಿಗಳ ಚರ್ಚೆ ಮಾಡಿ ಮುಂದಿನ ಕಾಮಗಾ–ರಿಗಳನ್ನು ಮಾಡಲು ಯೋಜನೆಗಳನ್ನು ರೂಪಿಸಬೇಕು ಸಭೆಯಲ್ಲಿ ಚರ್ಚಿಸಿದ ಕಾಮಗಾರಿಯನ್ನು ನಡೆಸಬೇಕು ತಾಲೂಕು ಪಂಚಾಯಿತಿ ವತಿಯಿಂದ ಬಂದಂತ ತರಬೇತಿ ಅಧಿಕಾರಿ ಬಸವರಾಜ್ ಮಾತನಾಡಿ ಸ್ಪಷ್ಟ ಮಾಹಿತಿ ನೀಡಿದರು

ಈ ತರಬೇತಿಯಲ್ಲಿ ಪಾಲ್ಗೊಂಡ ಪಂಚಾಯತಿಯ ಕಾರ್ಯದರ್ಶಿ ಮಾನಪ್ಪ ಮತ್ತು ಅಧ್ಯಕ್ಷರಾದ ಶ್ರೀಮತಿ ಯಂಕಮ್ಮ ಸದಸ್ಯರು ಸಿದ್ದಪ್ಪ ಸಹದೇವ್ ರಮೇಶ್ ಸೋಮಶೇಖರ್ ರಾಘವೇಂದ್ರ ರೇಣುಕಾ ಬಸವರಾಜ್ ಹಾಗೂ ಮಹಿಳಾ ಒಕ್ಕೂಟದ ಅಧ್ಯಕ್ಷರು ಉಪಾಧ್ಯಕ್ಷರು ಪದಾಧಿಕಾರಿಗಳು ಈ ಸಭೆಯಲ್ಲಿ ಹಾಜರಿದ್ದರು

ಕರುನಾಡ ಕಂದ
ಸಂಪುಟ–1 । ಸಂಚಿಕೆ–6
ದಿನಾಂಕ: 16–01–2022 । ಪುಟಗಳು: 20

# ದಿನದಿಂದ ದಿನಕ್ಕೆ ಹೆಚ್ಚಾಗಿರುತ್ತಿರುವ ಕೋವಿಡ್ 3ನೇ ಅಲೆ



ಕೋವಿಡ್ 3ನೇ ಅಲೆ ದಿನದಿಂದ ದಿನಕ್ಕೆ ಹೆಚ್ಚಾಗಿರುತ್ತಿರುವದರಿಂದ ಜನರು ಸ್ವ–ಪ್ರೇರಣೆಯಿಂದ ಎಚ್ಚರಿಕೆ ವಹಿಸಬೇಕೆಂದು ಜಲ ಸಂಪನ್ಮೂಲ ಸಚಿವರಾದ ಗೋವಿಂದ ಕಾರಜೋಳ ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು. ನವನಗರದ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿರುವ ಎ.ಎನ್.ಎಂ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಜಿಲ್ಲ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಕೋವಿಡ್ ಬೂಸ್ಟರ್ ಡೋಜ್ ವಿತರಣೆಗೆ ಚಾಲನೆ ನೀಡಿ ಮಾತನಾಡಿದ ಅವರು ಆರೋಗ್ಯ ಕಾರ್ಯಕರ್ತರು ಪ್ರಂಟಲೈನ್ ವಾರಿಯರ್ಸ್ ಹಾಗೂ 60 ವರ್ಷ ಮೆಲ್ಪಟ್ಟವರಿಗೆ ಬೂಸ್ಟರ್ ಡೋಜ್ ವಿತರಣೆಗೆ ಸಾಂಕೇತಿಕವಾಗಿ ಚಾಲನೆ ನೀಡಲಾಗಿದೆ ಎಂದರು .ಕರೋನಾ ಬರುವ 2019ರ ನವೆಂಬರ ಪೂರ್ವದಲ್ಲಿ ದೇಶದಲ್ಲಿ 6.25 ಕೋಟಿ ಲಸಿಕೆ ಮಾತ್ರ ಉತ್ಪಾದನೆ ಆಗುತ್ತಿತ್ತು,

ಇಂದು 250 ಕೋಟಿ ಜನರಿಗೆ ಲಸಿಕೆ ವ್ಯವಸ್ಥೆ ಮಾಡಲಾಗಿದೆ ಇದರಿಂದ ಭಾರತದೇಶ ಜಾಗತಿ ಮಟ್ಟದಲ್ಲಿ ಹೆಸರು ಮಾಡಿದರು. ಎಲ್ಲರಿಗೂ ಉಚಿತವಾಗಿ ಕೋವಿಡ್ ಲಸಿಕೆ ನೀಡಲಾಗುತ್ತಿದ್ದು, ದೇಶದ ಅನೇಕ ಆಸ್ಪತ್ರೆಗಳಲ್ಲಿ ಐಸಿಯು, ಆಕ್ಸಿಜನ್, ವೆಂಟಿಲೇಟರ್ ಸೇ–ರಿದಂತೆ ಇತರೆ ಸೌಲಭ್ಯ, ವೈದ್ಯರು ಹಾಗೂ ಸಿಬ್ಬಂದಿಗಳ ಕೊರತೆಯನ್ನು ಕಳೆದ 2 ವರ್ಷದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ನೀಗಿಸಿವೆ ಎಂದರು.ರಾಜ್ಯ ಸರಕಾರವು ಕೋವಿಡ್ ನಿರ್ವಹಣೆಯಲ್ಲಿ ದೇಶದಲ್ಲಿ 2ನೇ ಸ್ಥಾನದಲ್ಲಿದೆ. ಕೊರೊನಾ ಪ್ರಾರಂಭವಾದಾಗ ರಾಜ್ಯದಲ್ಲಿ ಒಂದೇ ಒಂದು ಪ್ರಯೋಗಾಲಯ ಬೆಂಗಳೂರಿನಲ್ಲಿ ಇತ್ತು. ಈಗ 182 ಕೋವಿಡ್ ಪರೀಕ್ಷೆಯ ಪ್ರಯೋಗಾಲಯ ಪ್ರಾರಂಭಿಸಲಾಗಿದೆ. ಎಲ್ಲ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ. ಈ ಮೊದಲು ಕೊರೊನಾ ಪರೀಕ್ಷೆಯ ನಂತರ ಫಲಿತಾಂಶಕ್ಕಾಗಿ 15 ದಿನಗಳ ವರೆಗೆ ಕಾಯಬೇಕಾಗಿತ್ತು. ಇವತ್ತು ಆ ತೊಂದರೆ ಇಲ್ಲ. ಬಾಗಲಕೋಟೆ ಸಹ ಪ್ರಥ–'ಮ ಸ್ಥಾನದಲ್ಲಿದೆ. ಮೊದಲನೆ ಡೋಜ್‌ನಲ್ಲಿ 14,62,172 ಗುರಿಗೆ ನೂರರಷ್ಟು ಸಾಧನೆ ಮಾಡಲಾಗಿದೆ. ಎರಡನೇ ಡೋಜ್‌ನಲ್ಲಿ 11,36,154 ಲಸಿಕೆ ನೀಡಿ ಶೇ.78 ರಷ್ಟು ಸಾಧನೆ ಮಾಡಲಾಗಿದೆ ಎಂದರು ಮಕ್ಕಳಿಗಾಗಿ ಲಸಿಕೆ ನೀಡಲು ಪ್ರಾರಂಭವಾಗಿದ್ದು, 63,571 ಮಕ್ಕಳಿಗೆ ಲಸಿಕೆ ನೀಡಲಾಗಿದೆ.

ಇನ್ನುಳಿದ ಮಕ್ಕಳು ಕೂಡಾ ಲಸಿಕೆ ಹಾಕಿಸಿಕೊಳ್ಳಬೇಕು. ಅವರ ಪಾಲಕರು ಕೂಡಾ ಭಯ ಪಡದೇ ಮಕ್ಕಳಿಗೆ ಲಸಿಕೆ ಹಾಕಿಸಲು ಮುಂದಾಗಬೇಕು. ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಮಕ್ಕಳು ಸೇರಿ ಒಟ್ಟು 2598325 ಜನರಿಗೆ ಲಸಿಕೆ ಹಾಕುವ ಕೆಲಸ ಜಿಲ್ಲೆಯಲ್ಲಿ ಮಾಡಲಾಗಿದೆ ಎಂದರು. ರಾಜ್ಯದ ಸರಾಸ–ರಿಯಲ್ಲಿ ಟಾಪ್ ಸ್ಥಾನದಲ್ಲಿರುವುದಾಗಿ ತಿಳಿಸಿದರು. ರೋಗ ಉಲ್ಬಣವಾಗದಂತೆ ಸಾರ್ವಜನಿಕರು ಎಚ್ಚರ ವಹಿಸುವಂತೆ ತಿಳಿಸಿದರು. ಶಾಸಕ ವೀರಣ್ಣ ಚರಂತಿಮಠ ಮಾತನಾಡಿ ಲಸಿಕೆ ವಿತರಣೆಯಲ್ಲಿ ಜಿಲ್ಲೆಯಲ್ಲಿ ಉತ್ತಮ ಸಾಧನೆ ಮಾಡಲಾಗಿದೆ. 1 ರಿಂದ 14 ವರ್ಷದವರಿಗೆ ಲಸಿಕೆ ನೀಡಲು ಪ್ರಾರಂಭವಾಗಿಲ್ಲ. ಆದರೆ 15 ರಿಂದ 18 ವರ್ಷದ ಮಕ್ಕಳಿಗೆ ಲಸಿಕೆ ನೀಡಲು ಪ್ರಾರಂಭಿಸಲಾಗಿದ್ದು, ಪಾಲಕರು ತಮ್ಮ ಮಕ್ಕಳಿಗೆ ಲಸಿಕೆ ಹಾಕಿಸಿಕೊಳ್ಳಲು ಭಯ ಪಡಬಾರದು ಎಂದರು. ಇದೇ ಸಂದರ್ಭದಲ್ಲಿ ಶಾಸಕ ವೀರಣ್ಣ ಚರಂತಿಮಠ ಸೇರಿದಂತೆ ಇತರರು ಕೋವಿಡ್ ಬೂಸ್ಟರ್ ಡೋಸ್ ಪಡೆದುಕೊಂಡರು.

ಬುಡಾ ಅಧ್ಯಕ್ಷ ಬಸವಲಿಂಗಪ್ಪ ನಾವಲಗಿ, ನಗರಸಭೆ ಅಧ್ಯಕ್ಷೆ ಜ್ಯೋತಿ ಭಜಂತ್ರಿ, ಜಿಲ್ಲಾಧಿಕಾರಿ ಕ್ಯಾಪ್ಟನ್ ಡಾ.ಕೆ. ರಾಜೇಂದ್ರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲೋಕೇಶ ಜಗಲಾಸರ, ಜಿ.ಪಂ ಸಿಇಓ ಟಿ.ಭೂಬಾಲನ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎ.ಎನ್.ದೇಸಾಯಿ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಪ್ರಕಾಶ ಬಿರಾದಾರ, ಕುಟುಂಬ ಕಲ್ಯಾಣಾಧಿಕಾರಿ ಡಾ.ಅರವಿಂದ ಪಟ್ಟಣಶೆಟ್ಟಿ, 50 ಹಾಸಿಗೆ ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿ ಡಾ.ಜಯಶ್ರೀ ಎಮ್ಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವರದಿ :ಶಿವಾನಂದ ಸಿದ್ಲಿಂಗಪ್ಪನವರ್

## ತುಸು ಸಂಜೆಯಾಗಲಿ ಬಿಡು.....

ತುಸು ಸಂಜೆಯಾಗಲಿ ಬಿಡು...
ನೀಲಿ ಮುಗಿಲಲಿ ತುಸು ಕೆಂಪೇ ರಲಿ ಬಿಡು
ಭಾನು ಬಾನಿನಾಚೆ ಮರೆಯಾಗಲು ಬಿಡು
ಒಂಚೂರು...
ಹಕ್ಕಿ ಗೂಡಿಗೆ ಮರಳಿ ಬರಲಿ ಬಿಡು............
ನಿನ್ನ ಸೇರುವ ತವಕ ನನ್ನಲ್ಲೋ ಅಡಗಿದೆ.......
ತುಸು ಸಂಜೆಯಾಗಲಿ ಬಿಡು....

ಕಾತುರವ ಬಿಡು....
ಕಾದಿರುವೆ ಕನಸಿನೂರಿನ...
ಕಡಲ ತಡಿಯಲಿ....
ಹೊಂಗೆ ಮರದಡಿಯಲಿ....
ತುಸು ಸಂಜೆಯಾಗಲಿ ಬಿಡು

ಕಾವ್ಯರಸ ನೆತ್ತಿಗೇರಿ......
ಮದವೇರಲು ಬಿಡು.....
ಕನಸಿನೂರಿನ ಕಾವ್ಯ ಕನ್ನಿಕೆ....
ಬೆಳದಿಂಗಳು ಸಮೀಪಿಸಿ....
ನಿನ್ನ ಕೆನ್ನೆ ತುಸು ರಂಗೇರಿ.....
ಹೊಸ ನಾದ ಹೊಮ್ಮಲಿ ಬಿಡು..

ತುಸು ಸಂಜೆಯಾಗಿಲಿ ಬಿಡು....
ಭಾನು ಸರಿದು ಬಾನು ಕೆಂಪೇರಿದೆ ಬಿಡು
–ಮಂಜುನಾಥ್ ರಾಥೋಡ್ ಆಂಗ್ಲ ಭಾಷಾ ಶಿಕ್ಷಕರು, ವಿಜಯಪುರ

# ಹೃದಯವಂತ ಸಾಮಾಜಿಕ ಹರಿಕಾರ–ಸುರೇಶ ಕೋಣ್ಣೂರ



ತಿಕೋಟಾ: ಪಟ್ಟಣದ ಸುರೇಶ ಶಂಕರಪ್ಪಾ ಕೋಣ್ಣೂರ ಸಮಾಜ ಸೇವೆಯಲ್ಲಿ ಹೆಸರು ಮಾಡಿದವರು.ಇವರು ಕಳೆದ 8 ವರ್ಷದಿಂದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 2013 ರಲ್ಲಿ ಆರ್ ಎಸ್ ಎಸ್ ಗೆ ಸೇರ್ಪಡೆಯಾದ ಇವರು 2015 ರಲ್ಲಿ ಧಾರವಾಡ ಜಿಲ್ಲೆಯ ಗರಗದಲ್ಲಿ ವಿಶೇಷ ಪ್ರಾಥಮಿಕ ಶಿಕ್ಷಾವರ್ಗ ಪೂರ್ಣಗೊಳಿಸಿದರು.ಅವರು ತಮ್ಮ ಸಾಮಾಜಿಕ ಸೇವೆ ಮುಂದುವರೆಸುತ್ತಾ, ಸಮಾಜದ ದೀನದಲಿತರ,ನಿರ್ಗತಿಕರ,ಬಡವರ ಸೇವೆಗೈಯುವಲ್ಲಿ ಮುಂಚೂಣಿಯಲ್ಲಿದ್ದಾರೆ. ಇವರ ಸಾಮಾಜಿಕ ಸೇವೆಯನ್ನು ಪರಿಗಣಿಸಿ,ಕರ್ನಾಟಕ ರಾಜ್ಯ ಕಲಾವಿದರ ರಕ್ಷಣಾ ವೇದಿಕೆ (ರಿ)ಬೆಂಗಳೂರು ಇವರು 30/06/2019 ರಂದು ಕರ್ನಾಟಕ ಸಮಾಜ ಸೇವಾ ರತ್ನ ಎಂಬ ಪ್ರಶಸ್ತಿ ನೀಡಿ ಗೌರವಿಸಿದೆ. ಪತಂಜಲಿ ಯೋಗ ಮತ್ತು ಪ್ರಕೃತಿ ಸಂಸ್ಥೆ(ರಿ) ಶಿವಮೊಗ್ಗ ಇವರು 01–09–2019 ರಂದು ರಾಜ್ಯಮಟ್ಟದ ಕನಕಶ್ರೀ ಚೇತನಾ ಪತಂಜಲಿ ರತ್ನ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.ಇವರಿಗೆ ಶ್ರೀ ಪವಾಡ ಪುರುಷ ಮಾಯದ ಮಗ ಮಾದಣ್ಣ ದೇವಸ್ಥಾನ ಸುಕ್ಷೇತ್ರ ಕುಂಚನೂರ ಇವರಿಂದ 29/01/2021 ರಂದು ಸಿದ್ದಶ್ರೀ ಪ್ರಶಸ್ತಿ ದೊರಕಿದೆ. ಇವರು ತಮ್ಮ 28 ನೇ ಹುಟ್ಟುಹಬ್ಬದ ನಿಮಿತ್ಯ 150 ಮಕ್ಕಳಿಗೆ ನೋಟ್ ಬುಕ್ ವಿತರಣೆ ಮಾಡಿ,ಶೈಕ್ಷಣಿಕ ಕಾಳಜಿ ಮೆರೆದಿದ್ದಾರೆ. ಹಲವು ದೇವಸ್ಥಾನಗಳು ಮತ್ತು ಗ್ರಂಥಾಲಯಗಳ ಸ್ವಚ್ಚತೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. 30 ವರ್ಷಗಳ ಹಿಂದೆ ಮುಚ್ಚಿ ಹೋಗಿದ್ದ ದತ್ತ ಮಂದಿರ ಪುನರುಜ್ಜೀವನವನ್ನು ಗೆಳೆಯರೊಡನೆ ಮಾಡಿ,ಜನಮನ್ನಣೆ ಗಳಿಸಿದ್ದಾರೆ. ಸಾರ್ವಜನಿಕರ ರೇಷನ್ ಕಾರ್ಡ್, ಆಧಾರ ಕಾರ್ಡ್, ಓಟರ್ ಐಡಿ ಮಾಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.ಅವರಿಗೆ ನ್ಯಾಯಯುತವಾಗಿ ಸರ್ಕಾರದ ಸೌಲಭ್ಯಗಳನ್ನು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. 30 ವರ್ಷಗಳಿಂದ ಮೂಲ ಸೌಲಭ್ಯದಿಂದ ವಂಚಿತವಾಗಿದ್ದ ತಿಕೋಟಾ ಪಟ್ಟಣದ ಶ್ರೀರಾಮ ಕಾಲನಿಯ ಜನತೆಗೆ ಬೋರವೆಲ್ ರಿಪೇರಿ ಮಾಡಿಸಿ ನೀರಿನ ವ್ಯವಸ್ಥೆ, ಬೀದಿ ಬೀದಿಗಳಲ್ಲಿ ದೀಪದ ವ್ಯವಸ್ಥೆ ಮಾಡಿಸಿ ಹಿರಿಯರ ಯುವಕರ ಆಶಾಕಿರಣವಾಗಿದ್ದಾರೆ. ಕೊರೊನ ಸಂದರ್ಭದಲ್ಲಿ ಕಾಲನಿಯ ಜನರಿಗೆ ಒಂದು ಸಾವಿರ ಮಾಸ್ಕ ವಿತರಣೆ ಮಾಡಿ ಆರೋಗ್ಯ ಸೇವೆಗೂ ಸಿದ್ದ ಎಂದು ಸಾಬೀತುಪಡಿಸಿದ್ದಾರೆ.ಬೇಸಿಗೆ ಸಂದರ್ಭದಲ್ಲಿ ಗಿಡಗಳಿಗೆ ನೀರು ಹಾಕಿ,ಗಿಡಮರಗಳು ಹಾಳಾಗದಂತೆ ಎಚ್ಚರವಹಿಸಿ ಪರಿಸರ ಪ್ರಜ್ಞೆ ಮೆರೆದವರು ಇವರಾಗಿದ್ದಾರೆ. ಜೊತೆಗೆ ಪಕ್ಷಿಗಳಿಗೆ ಆಹಾರ ಮತ್ತು ನೀರಿನ ವ್ಯವಸ್ಥೆಯನ್ನು ಮಾಡಿದ್ದು ಶ್ಲಾಘನೀಯ. ತಮ್ಮ 29 ನೇ ಹುಟ್ಟು ಹಬ್ಬದ ದಿನದಂದು ತಿಕೋಟಾ ಪಟ್ಟಣದ ಸರಕಾರಿ ಕನ್ನಡ ಕಿರಿಯ ಪ್ರಾಥಮಿಕ ಶಾಲೆಗೆ ಸುಣ್ಣ ಬಣ್ಣ ಪೇಂಟಿಂಗ್ ಮಾಡಿಸಿ, ಇಡೀ ರಾಜ್ಯಕ್ಕೆ ಮಾದರಿಯಾಗಿದ್ದಾರೆ. ಇವರು ಒಂದೇ ಸಮುದಾಯಕ್ಕೆ ಸೀಮಿತ ಆಗದೇ, ಸರ್ವ ಜನಾಂಗದ ಶಾಂತಿಯ ತೋಟ ಎಂಬ ಕವಿ ಕುವೆಂಪು ಅವರ ಕವಿವಾಣಿಯನ್ನು ನಂಬಿ ಸಮಾಜದ ಸರ್ವರ ಏಳ್ಗೆಗೆ ಶ್ರಮಿಸುತ್ತಿದ್ದಾರೆ. ಇವರ ಕಾರ್ಯ ಸಂಘಟನೆ ಚತುರತೆಯನ್ನು ಕಂಡು ಭಾರತೀಯ ಜನತಾ ಪಾರ್ಟಿ ಬಬಲೇಶ್ವರ ಮಂಡಲದ ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ 11/08/2020ರಂದು ನೇಮಕ ಮಾಡಿದ್ದಾರೆ. ಇವರು ಪ್ರತಿದಿನ ಸಂಗಮ್ (ಪಾಕೇಟ್)ಹಾಲು ಮಾರುತ್ತಾ,ಜೀವನ ಸಾಗಿಸುತ್ತಿದ್ದಾರೆ.ಅವರ ಸೇವೆ ಹೀಗೆಯೇ ಮುಂದುವರೆಯಲಿ ಎಂದು ಆಶಿಸುತ್ತೇವೆ.

– ಭೀರು ಗಾಡವೆ

# ಮಾಸಿಕ ಗೌರವಧನ ಬಿ.ವಿ.ಗಿರೀಶ್ ಕುಟುಂಬಕ್ಕೆ :ಮಾದರಿಯಾದ ನಗರಸಭಾ ಸದಸ್ಯ ಬಿ.ಕೆ.ಮೋಹನ್



ಭದ್ರಾವತಿ: ನಗರಸಭೆ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಬಿ.ಕೆ.ಮೋಹನ್ ರವರು ಶಾಸಕ ಬಿ.ಕೆ.ಸಂಗಮೇಶ್ವರ್ ರವರ ಆದೇಶದಂತೆ

ತಮಗೆ ಬರುವ ಪ್ರತಿ ತಿಂಗಳ ಮಾಸಿಕ ಗೌರವಧನ 4.000(ನಾಲ್ಕು ಸಾವಿರ) ರೂ.ಗಳನ್ನು ಅಕಾಲಿಕ ಮರಣ ಹೊಂದಿದ ತಿಮ್ಲಾಪುರದ ದಲಿತ ಯುವಕ ಬಿ.ವಿ.ಗಿರೀಶ್ ತಂದೆಯವರಿಗೆ ನೀಡುವ ಮೂಲಕ ಮತ್ತೊಮ್ಮೆ ಮಾದರಿಯಾಗಿದ್ದಾರೆ.

ಈ ಸಂದರ್ಭದಲ್ಲಿ ಪ್ರಮುಖರಾದ ಅರುಣ್ ಕುಮಾರ್, ಮಂಜುನಾಥ್, ಮಾನವ ಹಕ್ಕುಗಳ ಹೋರಾಟ ಸಮಿತಿ ಅಧ್ಯಕ್ಷ ಬಿ.ಎನ್.ರಾಜು ಮುಂತಾದವರು ಉಪಸ್ಥಿತರಿದ್ದರು.

**ಕರುನಾಡ ಕಂದ**

ಸಂಪುಟ-1 । ಸಂಚಿಕೆ-5

ದಿನಾಂಕ: 01-01-2022 । ಪುಟಗಳು: 20

# ಭದ್ರಾವತಿ ಬಿಳಿಕಿ ಗ್ರಾಮ ಪಂಚಾಯಿತಿ ಪಿಡಿಓ ಕೇಶವಮೂರ್ತಿ ಎಸಿಬಿ ಬಲೆಗೆ




ಭದ್ರಾವತಿ: ಲಂಚ ಸ್ವೀಕರಿಸುತ್ತಿದ್ದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ಪಿಡಿಓ) ಯೊಬ್ಬರು ಭ್ರಷ್ಟಾಚಾರ ನಿಗ್ರಹ ದಳ ಪೊಲೀಸರ ಬಲೆಗೆ ಸಿಕ್ಕಿಬಿದ್ದಿರುವ ಘಟನೆ ತಾಲ್ಲೂಕಿನ ಬಿಳಕಿ ಗ್ರಾಮ ಪಂಚಾಯತಿಯಲ್ಲಿ ಮಂಗಳವಾರ ನಡೆದಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಡಿ.ಕೇಶವಮೂರ್ತಿ ಎಸಿಬಿ ಬಲೆಗೆ ಬಿದ್ದಿದ್ದು, ಜಮೀನಿಗೆ ಸಂಬಂಧಿಸಿದಂತೆ ಎನ್‌ಓಸಿ ನೀಡಲು ರೂ. 1ಲಕ್ಷ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ಈ ಹಿಂದೆ ರೂ. 5 ಸಾವಿರ ಲಂಚ ಪಡೆದುಕೊಂಡಿದ್ದು, ಉಳಿದಂತೆ ರೂ. 70 ಸಾವಿರ ಲಂಚ ಸ್ವೀಕರಿಸುವಾಗ ಶಿವಮೊಗ್ಗ ಡಿವೈಎಸ್ಪಿ ಲೋಕೇಶ್ ನೇತೃತ್ವದ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಕೇಶವಮೂರ್ತಿಯನ್ನು ಬಂಧಿಸಿ ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿದೆ.ದಾಳಿಯಲ್ಲಿ ಇನ್ಸ್‌ಪೆಕ್ಟರ್ ವಸಂತ್ ಕುಮಾರ್,ಪಿಎಸ್ಐ ಇಮ್ರಾನ್ ಬೇಗ್ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

# ಯಶಸ್ವಿಯಾಗಿ ಜರುಗಿದ ಕೊರೋನಾ ಲಸಿಕೆ ಕಾರ್ಯಕ್ರಮ



ಬಿ ಮಟಕೆರೆ ಪಂಚಾಯತ್ ಆವರಣದಲ್ಲಿ ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು ಮೈಸೂರು ವತಿಯಿಂದ ಕೊರೋನಾ ಲಸಿಕೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ರೂಪ ಮಲ್ಲೇಶ್ ನಾಯ್ಕರವರು ಉಪಾಧ್ಯಕ್ಷರಾದ ದೇವದಾಸರವರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಅಬ್ದುಲ್ ಪಾಜ್ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾಕ್ಟರ್ ಚಂದ್ರಶೇಖರ್ ಪಂಚಾಯತ್ ಕಾರ್ಯದರ್ಶಿಗಳಾದ ಮಂಜುನಾಥ್ ರವರು ಪ್ರಾಥಮಿಕ ಆರೋಗ್ಯ ಕೇಂದ್ರ ಸಿಬ್ಬಂದಿ ವರ್ಗ ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗ ಹಾಗೂ ಪಂಚಾಯಿತಿಯ ಸರ್ವ ಸದಸ್ಯರುಗಳು ಮಹಿಳಾ ಸಹಾಯ ಸಂಘದವರು ಗ್ರಾಮಸ್ಥರು ಯುವ ಮಿತ್ರರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

# ಪಿರಿಯಾಪಟ್ಟಣದ ರಾವಂದೂರು ಮಳಲಿ ಮಾರ್ಗ ಹಾಳಾಗಿರುವ ರಸ್ತೆ



ಪಿರಿಯಾಪಟ್ಟಣದ ರಾವಂದೂರು ಮಳಲಿ ಮಾರ್ಗವಾಗಿ ಕೆ.ಆರ್ ನಗರ ಮುಖ್ಯ ರಸ್ತೆಯಾಗಿದ್ದು ಈ ರಸ್ತೆಯ ಹಲವು ವರ್ಷಗಳಿಂದ ಹಾಳಾಗಿದ್ದು ಇಲ್ಲಿ ನಿತ್ಯ ನೂರಾರು ವಾಹನಗಳು ಮತ್ತು ಶಾಲಾ-ಕಾಲೇಜು ವಾಹನಗಳು ಸಂಚ-ರಿಸಲು ರಸ್ತೆಯು ಹಾಳಾಗಿದ್ದು ವಾಹನ ಸವಾರರು ಪರದಾಡುವಂತಾಗುತ್ತದೆ ಆದ್ದ-ರಿಂದ ಇದಕ್ಕೆ ಸಂಬಂಧಪಟ್ಟ ಜನಪ್ರತಿನಿಧಿಗಳು ಸ್ಪಂದಿಸಬೇಕೆಂದು ಸಂಚಾರ ಮಾಡುವಂತಹ ಗೂಡ್ಸ್ ಆಟೋ ಡ್ರೈವರ್ ಮತ್ತು ಲಾರಿ ದ್ವಿಚಕ್ರ ವಾಹನ ಶಾಲಾ ಕಾಲೇಜು ಬಸ್ ಡ್ರೈವರ್ ಗಳು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಸ್ವತಂತ್ರ ಬಂದು ಇಷ್ಟು ವರ್ಷವಾದರೂ ನಮ್ಮ ರಸ್ತೆಗಳ ನೋಡಿದರೆ ನಮ್ಮ ಪ್ರಜಾ ವ್ಯವಸ್ಥೆ ಹೇಗಿದೆ ಎಂಬುದನ್ನು ಅಲ್ಲಿಯ ಗ್ರಾಮಸ್ಥರಾದ ಶಿವಕುಮಾರ್ ಕೆಲ್ಲೂರ್ ರಂಗಪ್ಪ ಹೊಸಕೋಟೆ ದಿನೇಶ್ ಸತೀಶ್ ಆನಂದ್ ಅವರು ತಿಳಿಸಿರುತ್ತಾ ಆದಷ್ಟು ಬೇಗ ರಸ್ತೆ ದುರಸ್ತಿ ಮಾಡಬೇಕೆಂದು ಆಗ್ರಹಿಸಿದ್ದಾರೆ.

-ಹೆಚ್.ಆರ್.ಶಂಕರ್

# ಸಾವಿತ್ರಿ ಬಾ ಪುಲೆ ಜಯಂತಿ ಆಚರಣೆ



ಎಸ್ ಡಿ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಭಾರತದ ಮೊದಲ ಮಹಿಳಾ ಶಿಕ್ಷಕಿ ಶ್ರೀಮತಿ ಪೂಜ್ಯನೀಯ ಮಾತೃ ಸ್ವರೂಪಿ ಸಾವಿತ್ರಿ ಬಾಯಿಪುಲೆ ಅವರ 191 ನೆಯ ಜಯಂತಿ ಅಂಗವಾಗಿ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಎಸ್ ಡಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಶ್ರೀ ದುರ್ಗಪ್ಪ ಪೂಜಾರಿ ಅವರು ಸಾವಿತ್ರಿ ಬಾಯಿಪುಲೆ ಅವರ ಆದರ್ಶ ನಾವೆಲ್ಲರೂ ನಮ್ಮ ಜೀವನ ಉದ್ದಗಲಕ್ಕೂ ಅಳವಡಿಸಿ ಕೊಳ್ಳಬೇಕು ಇಂದಿನ ದಿನಮಾನದ ಕಾಲ ಘಟ್ಟದಲ್ಲಿ ಅಂತಹ ಮಹನೀಯರ ಕೊಡುಗೆ ಅತ್ಯಮೂಲ್ಯ.ಸಾವಿತ್ರಿ ಬಾಯಿ ಪುಲೆ ಅವ-ರಿಗೆ ಮಾಡಿದ ಅವಮಾನ ಅಷ್ಟಿಷ್ಟಲ್ಲ ಪ್ರತಿದಿನ ತಮ್ಮ ಶಿಕ್ಷಣದ ಭೋದನೆಗೆ ತೆರಳುತ್ತಿರುವ ಸಂಧರ್ಭದಲ್ಲಿ ಅವರಿಗೆ ಸೆಗಣಿ ಮತ್ತು ಕೆಸರಿನ ಮುದ್ದೆಗಳಿಂದ ಹೊಡೆಯುವುದು ಕೆಟ್ಟ ಶಬ್ದಗಳಿಂದ ಬೈಯ್ದು ಅವಮಾನಿಸುತಿದ್ದರು ಇದನ್ನೆಲ್ಲಾ ಲೆಕ್ಕಿಸದೆ ತಮ್ಮ ಕಾಯಕವನ್ನು ಮುಂದುವರಿಸಿಕೊಂಡು ಹೋಗುತಿದ್ದ ಸಾವಿತ್ರಿ ಬಾಯಿ ಪು ಲೆ ಅವರ ಜೀವನ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಹಾಜರಿದ್ದರು.

-ಸುನಿಲ್ ಪ್ಯಾಟಿ.

# ಗ್ರಾಮಸ್ಥರ ಒತ್ತಾಯದ ಮೇರೆಗೆ ಸ್ಮಶಾನಕ್ಕೆ ಜಾಗ



ಸರಗೂರು ತಾಲೂಕು ಬಿ ಮಟಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಲನಹಳ್ಳಿ ಹಾಡಿಯಲ್ಲಿ ರುದ್ರಭೂಮಿಗಾಗಿ ಗ್ರಾಮಸ್ಥರ ಒತ್ತಾಯದ ಮೇರೆಗೆ ತಹಶಿಲ್ದಾರ ಚೆಲುವರಾಜು,ಕಂದಾಯ ನಿರೀಕ್ಷಕರು ಮತ್ತು ಗ್ರಾಮಲೆಕ್ಕಿಗರ ಆದ ವಿ ರವಿಚಂದ್ರನ್ ರವರು ಗ್ರಾಮಕ್ಕೆ ಭೇಟಿ ಕೊಟ್ಟು ಸ್ಥಳದಲ್ಲೇ ಸಾರ್ವಜನಿಕ ಸ್ಮಶಾನಕ್ಕೆ ಜಾಗ ನೀಡಿದ್ದಾರೆ.ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾದ ನಾಗರತ್ನ ಬಸವಣ್ಣವರು ಗ್ರಾಮದ ಮುಖಂಡರಾದ ಕೆಪಿ ಮಾದೇವಪ್ಪ ಅಜಿತ್ ಕುಮಾರ್ ಭೀಮ ಜನಜಾಗೃತಿ ಮಹಾಸಭಾದ ಜಿಲ್ಲಾ ಕಾ ಧ್ಯಕ್ಷರಾದ ವಿನೋದ್ ಪ್ರಸಾದ್ ಆಲನಹಳ್ಳಿ ಹಾಗೂ ಕುಣೆಗಾಲ ಗ್ರಾಮಸ್ಥರು ಹಾಜ-ರಿದ್ದರು.

## ತಾವರೆ

ನೀರಿನ ಅಂಗಳದಲ್ಲಿ ತಾ ಜನಿಸಿ
ಹಸಿರೆಲೆಗಳ ನಡುವೆ ಉದಯಿಸಿ
ಅರಳಿ ನಿಂತಿದೆ ನೋಡು ತಾವರೆ
ಮಾಡುತಿದೆ ಎಲ್ಲರ ಮನಸೋರೆ.

ಅಂಬರದ ನೇಸರನನ್ನು ನೋಡಿ
ನಾಚಿಕೆಯಲ್ಲೇ ಗಾನವನ್ನು ಹಾಡಿ
ಒಲವಿನ ಮಾತು ನುಡಿಯುತಿದೆ
ಮೆಲ್ಲ ನೇಸರನಿಗೆ ಮನ ಸೋತಿದೆ.

ಮನದಿ ಹೊಸ ಭಾವನೆ ಮೂಡಿದಂತೆ
ಬದುಕಲಿ ನವ ಚೈತನ್ಯ ಚಿಗುರಿದಂತೆ
ನೇಸರನಿಂದ ತಾವರೆಗೆ ಹೊಸ ಜನನ,
ಒಲವಿನಂಗಳದಲ್ಲಿ ಇಬ್ಬರ ಸಮ್ಮಿಲನ.

**-ಸುನಿಲ್ ಲೇಖಕ್ ಎನ್**
**ಬೆಂಗಳೂರು ಗ್ರಾಮಾಂತರ**

# ಸ್ವರಾಜ್ಯ ಜನನಿ ಜೀಜಾಮಾತೆ

ಕ್ರಿ.ಶ. 1598 ಜನೇವರಿ 12 ರಂದು ಗಿರಿಜಾಬಾಯಿ ಹಾಗೂ ಲಖೋಜಿರಾವ ಜಾಧವ ದಂಪತಿಗಳ ಅಮೂಲ್ಯ ಕನ್ಯಾರತ್ನವೇ ಜೀಜಾಬಾಯಿ. ಬಾಲ್ಯದಿಂದಲೇ ತಂದೆ ಲಖೋಜಿ ಜಾಧರವರ ವತನದಾರಿಯಾದ ಸಿಂಧಖೇಡದಲ್ಲಿ ಬೆಳೆದ ಜೀಜಾಬಾಯಿ ರಾಜಕಾರಣದ ಅನೇಕ ಏಳು ಬೀಳುಗಳ ಪರಿಣಾಮ ಮನಸ್ಸಿನ ಅಂತರಾಳದಲ್ಲಿ ಮೂಡಿದ್ದವು. ಅತ್ಯಂತ ಧೈರ್ಯಶಾಲಿ, ಅಗಾಧ ನಿರ್ಣಯಕ್ಷಮತೆ ಹಾಗೂ ದೂರದೃಷ್ಟಿತ್ವ ಹೊಂದಿದ ತೇಜಸ್ವಿ ವ್ಯಕ್ತಿತ್ವವುಳ್ಳ ಧೀರ ಮಹಿಳೆ ಜೀಜಾಬಾಯಿ ಭಕ್ತಿಯಲ್ಲಿ ರಮಣವಾದ ಮೀರಾಬಾಯಿ ಬೆನ್ನುಮೇಲೆ ಮಗುವನ್ನು ಹೊತ್ತುಕೊಂಡು ಯುದ್ಧ ಮಾಡಿದ ರಾಣಿ ಲಕ್ಷ್ಮೀಬಾಯಿ ಲಕ್ಷಗಟ್ಟಲೆ ಶತ್ರುಸೈನ್ಯವನ್ನು ತಡೆಹಿಡಿದ ಅಹಿಲ್ಯಾಬಾಯಿ. ಸ್ತ್ರೀ ಶಿಕ್ಷಣಕ್ಕೆ ಬುನಾದಿ ಹಾಕಿದ ಫುಲೆ ಸಾವಿತ್ರಿಬಾಯಿ. ಹಿಂದವಿ ಸ್ವರಾಜ್ಯ ಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರನ್ನು ಈ ಜಗತ್ತಿಗೆ ಕೊಟ್ಟ ಮಹಾತಾಯಿ ಜೀಜಾಬಾಯಿ.

ಶ್ರೀ ಶಹಾಜಿರಾಜೆ ಭೋಸಲೆ ಜೊತೆ ವಿವಾಹವಾದಂದಿನಿಂದ ಹಿಂದವಿ ಸ್ವರಾಜ್ಯದ ಕನಸನ್ನು ಕಂಡವರು ಜೀಜಾಬಾಯಿ. ಶಿವಾಜಿಯಿಂದ ಕನಸನ್ನು ನನಸು ಮಾಡಿಸಿಕೊಂಡ ಜೀಜಾಬಾಯಿ ಬಾಲಕ ಶಿವಾಜಿಗೆ ಸಂಸ್ಕಾರ ನೀಡಿದ ಮಹಾತಾಯಿ ಜೀಜಾಬಾಯಿ, ಜೀಜಾಮಾತೆಯವರು ದೇವಿ ಶಿವಾಯಿ ಭವಾನಿಯ ಪರಮಭಕ್ತರಾಗಿದ್ದರು. ಪುರಾಣ, ಪ್ರವಚನ, ದೇವದರ್ಶನ, ವೃತ ವೈಕಲ್ಯಗಳು ಇವೆಲ್ಲ ಇಷ್ಟವಾದ ಛಂದಗಳಾಗಿದ್ದವು. ರಾಮಾಯಣ, ಮಹಾಭಾರತ ಕಥೆಗಳನ್ನು ಶ್ರೀರಾಮ ಶ್ರೀ ಕೃಷ್ಣ, ಹನುಮಾನ, ಅರ್ಜುನ ಭೀಮನ ಪರಾಕ್ರಮಗಳನ್ನು ತಿಳಿದು ಬಾಲಕ ಶಿವಾಜಿಯ ಮೇಲೆ ಸುಸಂಸ್ಕಾರಗಳನ್ನು ಮಾಡುತ್ತಿದ್ದರು. ಶ್ರೀರಾಮ ಯುದಿಷ್ಟರ ಇವರಂತೆ ಸುಖಿ ಸಮೃದಧ ಧರ್ಮರಾಜ್ಯವನ್ನು ಸ್ಥಾಪನೆ ಮಾಡುವ ಮಗು ನನ್ನ ಹೊಟ್ಟೆಯಲ್ಲಿ ಯಾಕೆ ಹುಟ್ಟಬಾರದು? ನಾನು ಕೂಡ ಕುಂತಿದೇವಿ ಕೌಸಲ್ಯಾ ಮಾತೆಯರ ಸಾಲಿನಲ್ಲಿ ಯಾಕೆ ಕೂಡಬಾರದು? ಎಂಬ ಹೆಬ್ಬಯಕೆ ಜೀಜಾಬಾಯಿಯವರದು. ಇಂಥ ಅನೇಕ ಚಿಂತನೆಗಳು ಬಯಕೆಗಳು ಜೀಜಾಮಾತೆಯ ಮನದಾಳದಲ್ಲಿ ಬೇರೂರಿದ್ದವು. ಅಂತೆಯೇ ಶಿವಾಯಿದೇವಿಯನ್ನು ತನ್ನ ಬಯಕೆ ಈಡೇ–ರಿಕೆಗೆ ಪ್ರಾರ್ಥಿಸುತ್ತಿದ್ದರು. ಕೆಲವೇ ದಿನಗಳಲ್ಲಿ ಜೀಜಾಬಾಯಿಯ ಮುಖದಲ್ಲಿ ಮಂದಹಾಸ ಹಾಗೂ ಗರ್ಭಾವಸ್ಥೆಯ ಲಕ್ಷಣಗಳು ಕಾಡತೊಡಗಿದವು. ಗರ್ಭಾವಸ್ಥೆಯ (ಬಂಕಿಗಳು) ಬಯಕೆಗಳು ದಿನೆ ದಿನೆ ಹೆಚ್ಚಾಗತೊಡಗಿದ್ದವು.

1) ಆನೆಯ ಮೆಲೆ ಕೂಡಬೇಕು. ಕುದುರೆ ಸವಾರಿ ಮಾಡಬೇಕು. ಧನುಷ್ಯಬಾಣ, ಖಡ್ಗ, ಇತ್ಯಾದಿ ಶಸ್ತ್ರಗಳನ್ನು ತೆಗೆದುಕೊಂಡು, ಮೈಮೆಲೆ ರಕ್ಷಕವಚ ಹಾಕಿಕೊಂಡು ಯುದ್ದಮಾಡಬೇಕು. ಜಯಗಳಿಸಬೇಕು. ಹಿಂದು ಸ್ವರಾಜ್ಯ ಸ್ಥಾಪಿಸಬೇಕು. ನನಗೆ ಸ್ವಾತಂತ್ರ್ಯಬೇಕು. 2) ಕೋಟೆಗಳನ್ನು ಗೆಲ್ಲಬೇಕು. ಸುವರ್ಣ ಕಿರೀಟ ಧರಿಸಬೇಕು.

3) ದಾನ ಧರ್ಮಗಳನ್ನು ಮಾಡಬೇಕು, ಮೇಲೆತ್ತರಕ್ಕೆ ಧ್ವಜ ಪತಾಕೆ ಹಾರಿಸಬೇಕು.

4) ಅನ್ಯಾಯ ಅತ್ಯಾಚಾರದ ಶತ್ರುಗಳನ್ನು ಸದೆಬಡೆದು ಸ್ವತಂತ್ರ ಸ್ವರಾಜ್ಯವನ್ನು ಕಟ್ಟಬೇಕು. ಇಂಥ ಅನೇಕ ವಿಲಕ್ಷಣ ಬಯಕೆಗಳು ಜೀಜಾಮಾತೆಯ ಮನದಲ್ಲಿ ನಿರ್ಮಾಣವಾಗಿದ್ದವು. ಇದಕ್ಕೆ ಪ್ರತಿಯಾಗಿ ಗರ್ಭದಲ್ಲಿಯ ಜೀವ ಕೂಡ ಪ್ರತಿಸಾದ ಕೊಡುತ್ತಿತ್ತು. ಗರ್ಭದಲ್ಲಿಯ ಆ ಜೀವದ ಮೇಲೆ ಇಂಥ ಅನೆಕ ಸಂಸ್ಕಾರ ಆಗುತ್ತಿದ್ದವು. 1630 ಫೆಬ್ರುವರಿ 19 ರಂದು ಒಂದು ಸುಂದರವಾದ ಮಗುವಿಗೆ ಸಹ್ಯಾದ್ರಿಯ ಮಡಿಲಲ್ಲಿ ಶಿವನೇರಿ ಕೋಟೆಯಲ್ಲಿ ಜನ್ಮ ಕೊಟ್ಟ ತಾಯಿ ಜೀಜಾಬಾಯಿ. ಧನ್ಯತೆಯನ್ನು ಮೆರೆದಳು. ಆ ಮಗುವೇ ಮುಂದೆ ಹಿಂದವಿ ಸ್ವರಾಜ್ಯದ ಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜ ಕೈಯಲ್ಲಿ ಹಿಡಿದು ಭವಾನಿ ತಲವಾರ, ದಮನ ಮಾಡಲು ಅನ್ಯಾಯ ಅತ್ಯಾಚಾರ ಸಹ್ಯಾದ್ರಿಯ ಸಾಜ (ಭೂಷಣ) ಶೃಂಗಾರ, ಮಾನವತೆಯ ಅಮರ ಅಲಂಕಾರ ಭಾರತ ಮಾತೆಯ ಋಣ ತೀರಿಸಲು ಪ್ರಕಟವಾಯಿತು ಶಿವಾಜಿ ಅವತಾರ.

ಕೆಲವೊಮ್ಮೆ ತಾಯಿ ಜೀಜಾಮಾತೆ ಬಾಲಕರಲ್ಲಿ ಕೋಟೆಗಳನ್ನು ಕಟ್ಟುವ ಸ್ಪರ್ಧೆ, ಶತ್ರುಗಳ ಮೇಲೆ ಅಕ್ರಮಣ ಮಾಡುವ ಸ್ಪರ್ಧೆ ಮುಖಾಂತರ ಯುದ್ದ ನೀತಿಯ ಪಾಠಗಳನ್ನು ಹೇಳುತ್ತಿದ್ದಳು. ಬಾಲ್ಯಾವಸ್ಥೆಯಲ್ಲಿಯೇ ಶಿವಾಜಿಗೆ ಶಸ್ತ್ರ ಹಾಗೂ ಶಾಸ್ತ್ರಗಳ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಇತ್ತ ಸಿದ್ದಿ ಜವಾನ, ಅತ್ತ ಅಫಜಲಖಾನ, ಆ ಕಡೆ ಮೂಲಕ ಮೈದಾನ, ಬಾಯ್ತೆರೆದು ಮಾಡುತ್ತಿದೆ ಆವ್ಹಾನ, ಇವರೆಲ್ಲರನ್ನು ನೀ ಮಾಡಬೇಕು



ದಮನ. ಆಗಲೇ ಹಿಂದವಿ ಸ್ವರಾಜ್ಯ ನಿರ್ಮಾಣ. ಇಂಥ ಶೌರ್ಯಪ್ರಧಾನ ಬೋಧನೆಗಳನ್ನು ಕೇಳುತ್ತ ಬಾಲ ಶಿವಾಜಿ ಬೆಳೆಯುತ್ತಿದ್ದ, ಮುಂದೆ ಛತ್ರಪತಿ ಶಿವಾಜಿ ಮಹಾರಾಜರು ಹಿಂದವಿ ಸ್ವರಾಜ್ಯ ಸ್ಥಾಪನೆ ಮಾಡಿದರು. ತಾಯಿ ಜೀಜಾಮಾತೆಯ ಪಾತ್ರ ಬಹಳ ದೊಡ್ಡದು. ಅಂತೆಯೇ ನಾವು ಹಿಂದುಸ್ಥಾನದಲ್ಲಿ ಗೌರವದಿಂದ ಬದುಕಲು ಸಾಧ್ಯವಾಯಿತು. ರಾಜಮಾತೆ ಜೀಜಾಬಾಯಿ ಹಾಗೂ ಛತ್ರಪತಿ ಶಿವಾಜಿ ಮಹಾರಾಜರಿಗೆ ಕೋಟಿ ಕೋಟಿ ನಮನಗಳು

ಲೇಖಕರು : ಮಾರುತಿ ತರಸೆ ದ್ಯಾಬೇರಿ
(ವಿಜಯಪುರ) ಮೊ. 8197592042

# ಪಿಪಿಟಿ ಫ್ಯಾನ್ಸ್ ಕ್ಲಬ್‌ನಲ್ಲಿ ಮೊದಲನೇ ವಾರ್ಷಿಕೋತ್ಸವ



ಯಾದಗಿರಿ ಜಿಲ್ಲೆಯ ಜಿಲ್ಲೆಯ ಸೈದಾಪುರ ತಾಲೂಕಿನ ಬಟ್ಟೆಯ ಅಂಗಡಿ ಪಿಪಿಟಿ ಫ್ಯಾನ್ಸ್ ಕ್ಲಬ್ ನಲ್ಲಿ ಮೊದಲನೇ ವಾರ್ಷಿಕೋತ್ಸವ ಆಚರಿಸಲಾಯಿತು ಈ ಕಾರ್ಯಕ್ರಮಕ್ಕೆ ಸನ್ಮಾನ್ಯ ಶ್ರೀ ಶರಣಗೌಡ ಕಂದಕೂರ್ ಜೆಡಿಎಸ್ ಯುವ ಮುಖಂಡರು ಚಾಲನೆ ನೀಡಿದರು ಹಾಗೂ 60 ಬಡಮಕ್ಕಳಿಗೆ ಹಾಗೂ ಅನಾಥ ಮಕ್ಕಳಿಗೆ ಬಟ್ಟೆ ಕಿಟ್ ಗಳನ್ನು ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ರಾಜೇಶ್ ಉಡುಪಿ , ಚಂದ್ರು ಗೌಡ ಸೈದಾಪುರ,ಶರಣಗೌಡ ಕ್ಯಾತನಾಳ ರಾಕೇಶ್ ಕೋರೆ ಮುಕುಂದ ಅಲಿಜಾರ್ ಡಾಕ್ಟರ್ ಈಶ್ವರ್ ಲಾಲ್ ಅಲಿಜಾರ್ ಗೋಪಿ ಅಯ್ಯಾ ಅರ್ಜುನ್ ಚವಾಣ್, ಅಲ್ಲಾವುದ್ದೀನ್ ನೀಲಹಳ್ಳಿ , ಉಪಸ್ಥಿತರಿದ್ದರು.

ಇದೇ ರೀತಿ ನಮಗೆ ಗ್ರಾಹಕರು ಪ್ರೋತ್ಸಾಹಿಸಿದರೆ ನಾವು ಮುಂದಿನ ದಿನಗಳಲ್ಲಿ ಮುಂದಿನ ವರ್ಷ ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಸಹಾಯ ಮಾಡುವೆನು ಎಂದು ಪಿಪಿಟಿ ಫ್ಯಾಶನ್ ಕ್ಲಬ್ ಮಾಲೀಕರಾದ ಪ್ರಸಾದ್ ಮತ್ತು ಪ್ರಶಾಂತ್ ಹೇಳಿದರು.

–ಸುನಿಲ್ ಪ್ಯಾಟಿ

# ನಡೆ ನುಡಿಗಳಲ್ಲಿ ದೇಶ ಭಕ್ತಿಯನ್ನು ಅಛಲವಾಗಿ ತುಂಬುತ್ತಿರುವ ಮಹಾನ್ ಚೇತನ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು



ಸ್ವಾಮಿ ವಿವೇಕಾನಂದರೆಂದರೆ ನರನಾಡಿಗಳಲ್ಲಿ ಹರಿಯುವ ಶಕ್ತಿ. ಮನಸ್ಸನ್ನು ಶ್ರೇಷ್ಠ ಗುರಿಯೆಡೆಗೆ ಕರೆದುಕೊಂಡು ಹೋಗುವ ಪ್ರೇರಣಾ ಮೂರ್ತಿ. ವಿವೇಕಾನಂದರ ಮಾತುಗಳಿಂದ ಸ್ಫೂರ್ತಿ ಪಡೆಯದ ವ್ಯಕ್ತಿಗಳೆ ಇಲ್ಲ ಸ್ವಾತಂತ್ರ್ಯ ಹೋರಾಟದಿಂದ ಹಿಡಿದು ಇಂದು ಕೂಡ ನಮ್ಮ ಬೆನ್ನ ಹಿಂದೆ ಇದ್ದು ಮಾರ್ಗದರ್ಶನ ಮಾಡುತ್ತಿರುವ ಗುರುದೇವ ಸ್ವಾಮಿ ವಿವೇಕಾನಂದರು. ನಡೆ ನುಡಿಗಳಲ್ಲಿ ದೇಶ ಭಕ್ತಿಯನ್ನು ಅಛಲವಾಗಿ ತುಂಬುತ್ತಿರುವ ಮಹಾನ್ ಚೇತನ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು. ಪ್ರತಿ ಬಾರಿ ವಿವೇಕಾನಂದರ ಭಾವಚಿತ್ರ ನೋಡಿ ದಿನ ಪ್ರಾರಂಭಿಸಿದರೆ ಆ ದಿನವಿಡೀ ಆಗದ ಶಕ್ತಿ ತುಂಬುವ ಸಾಮಥ–ರ್ಯ ಇಂದು ಇದೆ ಎಂಬುದರಲ್ಲಿ ಸಂದೇಹವಿಲ್ಲ. ವಿವೇಕಾನಂದರು ಬದುಕಿದ ಸಣ್ಣ ಸಮಯದಲ್ಲಿ ಮಾಡಿದ ಕಾರ್ಯಗಳು ಹೇಳಿದ ಮಾತುಗಳು ಸಾವಿರ ವರ್ಷಗಳ ನಂತರವೂ ಶಾಶ್ವತ ಮುಂದೆ ಬರುವ ಜನಾಂಗಕ್ಕೂ ಪ್ರೇರಣಾ ಶಕ್ತಿ. ಹಿಂದೂ ಧರ್ಮ ಪುನರುಜ್ಜೀವನಗೊಳಿಸಿದ ಸಂತ ಸ್ವಾಮಿ ವಿವೇಕಾನಂದರು ತಾವು ಅನುಭವಿಸಿದ ಕಷ್ಟಗಳು ಏನು ಕಡಿಮೆಯಿಲ್ಲ ಆದರೂ ಅದನೆಲ್ಲಾ ಮೆಟ್ಟಿ ನಿಂತು ನೀಡಿದ ಆಧ್ಯಾತ್ಮಿಕ ಬೆಳಗು ಭಾರತೀಯ–ರಿಗೆ ಅದು ಕತ್ತಲಿನ ಕೋಣೆಗೆ ಬೆಳಕು ನೀಡಿದ ಅನುಭವ ಹೀಗೆ ಅಮೇರಿಕಾದ ಮುಂದೆ ತೆರೆದಿಟ್ಟ ಹಿಂದೂ ಧರ್ಮ ಭಾರತೀಯ ಸಂಸ್ಕೃತಿಯ ಜ್ಞಾನ ಇಡೀಯ ಜಗತ್ತಿಗೆ ಪ್ರಕಾಶಮಾನವಾದ ಜ್ಯೋತಿಯಾಗಿತ್ತು. ಜಗತ್ತಿಗೆ ಹಿಂದೂ ಧರ್ಮದ ಶ್ರೇಷ್ಠತೆ ತಿಳಿದಿತ್ತು ಸ್ವಾಮಿ ವಿವೇಕಾನಂದರ ಜೀವನವೇ ಒಂದು ಗರಡಿಮನೆ ಅಲ್ಲಿ ನಾವು ಕಲಿಬೇಕಾಗಿರುವ ಎಲ್ಲಾ ಶಾಸ್ತ್ರ ವಿದ್ಯೆಗಳು ಲಭ್ಯ. ಸ್ವಾಮಿ ವಿವೇಕಾನಂದರು ಸಾವಿರಾರು ಯುವಕರ ಹೃದಯದಲ್ಲಿ ನೆಲೆಸಿರುವ ಅಪೂರ್ವ ವ್ಯಕ್ತಿತ್ವ ಇಂದು ಮಾತ್ರವಲ್ಲ ಎಂದೆಂದಿಗೂ ವಿವೇಕಾನಂದರು ನಮ್ಮೊಂದಿಗೆ ಇದ್ದಾರೆ ಎಂದೇ ಸದಾ ಅನಿಸುತ್ತದೆ ಅವರ ಪ್ರಭಾವಕ್ಕೆ ಒಮ್ಮೆ ಒಳಗಾದರೆ ಮತ್ತೆ ಆ ವ್ಯಕ್ತಿ ಪೂರ್ತಿ ಬದಲಾಗುವುದರಲ್ಲಿ ಯಾವುದೇ ಸಂದೇಹವಿಲ್ಲ ಅಂತಹ ಅಸಾಧಾರಣ ಶಕ್ತಿಯ ಕಣ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ವಿಚಾರಗಳು ಪ್ರತಿ ಮಾತುಗಳು ಶಾಶ್ವತ ಮನದಲಿ ಹೃದಯದಲಿ.

–ಸುನಿಲ್ ಪ್ಯಾಟಿ

ಈಗಾಗಲೇ ಬೇರೆ ಬೇರೆ ಪತ್ರಿಕೆಗಳ ಏಜೆನ್ಸಿ ಡಿಸ್ಟ್ರಿಬ್ಯೂಟರ್ ಆಗಿದ್ದೀರಾ?
ಅಥವಾ ಹೊಸದಾಗಿ ಯಾವುದೇ ಮುಂಗಡ ಪಾವತಿ ಇಲ್ಲದೆ ಪತ್ರಿಕೆಯ ಏಜನ್ಸಿ ಹುಡುಕುತ್ತಿದ್ದೀರಾ? ಈಗಲೇ ಕರೆ ಮಾಡಿ ಕರ್ನಾಟಕದ ಮೂಲೆಮೂಲೆಗಳಲ್ಲಿ ಪ್ರಸಿದ್ಧಿ ಪಡೆಯುತ್ತಿರುವ ನಮ್ಮ ನಿಮ್ಮೆಲ್ಲರ **ಕರುನಾಡ ಕಂದ** ಪತ್ರಿಕೆಯ ಏಜೆನ್ಸಿ ಪಡೆದು ಪತ್ರಿಕೆಯ ಜೊತೆಗೆ ನೀವೂ ಬೆಳೆಯಿರಿ.
ಆಸಕ್ತರು ಮಾತ್ರ ಕರೆ ಮಾಡಿ 9986366909

ಕರುನಾಡ ಕಂದ
ಸಂಪುಟ–1 | ಸಂಚಿಕೆ–6
ದಿನಾಂಕ: 16–01–2022 | ಪುಟಗಳು: 20

# ಸಾವಿರ ಅನಾಥ ಮಕ್ಕಳ ತಾಯಿ ಸಿಂಧೂತಾಯಿ ಸಪ್ಕಾಲ್

ಪೂನಾ ರೈಲು ನಿಲ್ದಾಣದಲ್ಲಿ 50 ವರ್ಷಗಳಿಂದ ಹಾಡುತ್ತ, ಭಿಕ್ಷೆ ಬೇಡುತ್ತಿದ್ದ ಒಬ್ಬರು ಅನಾಥ ಮಹಿಳೆ ಇಂದು 1400 ಬೀದಿ ಬದಿಯ ಮಕ್ಕಳ ಮಹಾತಾಯಿ ಆದ ಕಥೆಯು ತುಂಬಾ ರೋಚಕವಾದದ್ದು! ಆಕೆಯ ಬದುಕು ಒಂದು ಅದ್ಭುತವಾದ ಯಶೋಗಾಥೆ.

ಸಿಂಧೂ ಅವರು ಹುಟ್ಟಿದ್ದು ಒಂದು ಅತ್ಯಂತ ಬಡತನದ ಕುಟುಂಬದಲ್ಲಿ. ಅವರು ದನಗಾಹಿಗಳು ಹುಟ್ಟಿದಾಗ ಅವಳ ಹೆತ್ತವರಿಗೆ ಹೊರೆ ಆಗಿ ಬಡತನದ ಕಾರಣಕ್ಕೆ ನಾಲ್ಕನೇ ತರಗತಿಗೆ ಅವಳ ವಿದ್ಯಾಭ್ಯಾಸ ನಿಂತು ಹೋಯಿತು.

10ನೆಯ ವಯಸ್ಸಿಗೆ ಮದುವೆ ಆಯಿತು. ಅವಳ ಗಂಡನಿಗೆ ಆಗ 30 ವರ್ಷ! ಆಕೆಗೆ ತನ್ನ ಗಂಡನ ಮನೆಯಲ್ಲಿಯೂ ಬಡತನದ ಬವಣೆ ತಪ್ಪಲಿಲ್ಲ. ಮುಂದೆ 10 ವರ್ಷಗಳಲ್ಲಿ ಮೂರು ಗಂಡು ಮಕ್ಕಳು ಆಕೆಗೆ ಹುಟ್ಟಿದರು. ಆಕೆ ನಾಲ್ಕನೇ ಬಾರಿ ಗರ್ಭಿಣಿ ಆದಾಗ ಗಂಡ ಆಕೆಯನ್ನು ಹೊಡೆದು ಮನೆಯಿಂದ ಹೊರಗೆ ಹಾಕಿದ. ಆಗ ಅವಳಿಗೆ ಕೇವಲ 20 ವರ್ಷ. ಅಳುವುದು ಮಾತ್ರ ಆಕೆಗೆ ಗೊತ್ತಿತ್ತು.

ದನದ ಕೊಟ್ಟಿಗೆಯಲ್ಲಿ ಅವಳು ತನ್ನ ನಾಲ್ಕನೆಯ ಮಗುವಿಗೆ ಜನ್ಮ ನೀಡಿದರು. ಅದು ಹೆಣ್ಣು ಮಗು. ಅವಳಿಗೆ ಮಮತಾ ಎಂದು ಹೆಸರಿಟ್ಟರು. ಹಸಿವು ನೀಗಿಸಲು ಮೈಲುಗಟ್ಟಲೆ ದೂರ ನಡೆದರು. ರೈಲು ನಿಲ್ದಾಣಗಳಲ್ಲಿ ಹಾಡುತ್ತ ಭಿಕ್ಷೆ ಬೇಡಿದರು. ರಾತ್ರಿ ಚಳಿಯಲ್ಲಿ ಭದ್ರತೆಗಾಗಿ ಸ್ಮಶಾನದಲ್ಲಿ ಗೋರಿಗಳ ಮಧ್ಯೆ ಮಲಗಿದರು. ಬದುಕು ಭಾರವಾಗಿ ಒಮ್ಮೆ ಆತ್ಮಹತ್ಯೆ ಕೂಡ ಮಾಡಲು ನಿರ್ಧಾರ ಕೂಡ ಮಾಡಿದ್ದರು.

ರೈಲಿಗೆ ತಲೆ ಕೊಟ್ಟು ಸಾಯಲು ನಿರ್ಧಾರ ಮಾಡಿ ಅವರು ಒಂದು ರಾತ್ರಿಯ ಹೊತ್ತು ರೈಲ್ವೆ ಸ್ಟೇಷನ್ನಿಗೆ ಬರುತ್ತಾರೆ ಮತ್ತು ರೈಲಿಗಾಗಿ ಕಾಯುತ್ತಾರೆ. ಅಷ್ಟು ಹೊತ್ತಿಗೆ ಒಂದು ಮಗುವಿನ ಅಳುವಿನ ಧ್ವನಿ ಕೇಳುತ್ತದೆ. ಅಲ್ಲಿ ಒಂದು ಅನಾಥ ಮಗು ಹಸಿವೆಯಿಂದ ಜೋರಾಗಿ ಅಳುತ್ತಿತ್ತು. ತನ್ನ ಸೆರಗಿನ ತುದಿಯಲ್ಲಿದ್ದ ಗಂಟು ತೆರೆದು ರೊಟ್ಟಿಯ ಚೂರು ಮಗುವಿನ ಬಾಯಿಗೆ ಕೊಟ್ಟಾಗ ಮಗು ಅಳುವುದನ್ನು ನಿಲ್ಲಿಸಿತು.



ಎಷ್ಟೋ ಹೆತ್ತವರು ಬಿಟ್ಟು ಹೋದ ಅನಾಥ ಮಕ್ಕಳು ಅಲ್ಲಿ ಇರುವುದನ್ನು ನೋಡಿದಾಗ ಅವರೊಳಗೆ ಇದ್ದ ಅದ್ಭುತ ತಾಯಿಯು ಜಾಗೃತವಾದಳು. ಆ ಮಕ್ಕಳನ್ನು ಸಾಕಬೇಕು ಎಂದು ಅವರು ನಿರ್ಧಾರ ಮಾಡಿದರು. ಆತ್ಮಹತ್ಯೆ ಮಾಡುವ ನಿರ್ಧಾರ ಕೈಬಿಟ್ಟರು!

ಸ್ವತಃ ಅನಾಥೆಯಾದ ಮತ್ತು ನಿಲ್ಲಲು ಆಶ್ರಯವಿಲ್ಲದ ಸಿಂಧೂತಾಯಿ ಆ ಮಕ್ಕಳನ್ನು ಸಾಕಬೇಕು ಎಂದು ನಿರ್ಧಾರವನ್ನು ಮಾಡಿಯಾಗಿ–ತ್ತು. ಆದರೆ ಹೇಗೆ? ಹೆಚ್ಚು ಹಾಡುಗಳನ್ನು ಹಾಡಿ, ಹೆಚ್ಚು ಭಿಕ್ಷೆ ಬೇಡುತ್ತಾರೆ. ದಾನಿಗಳನ್ನು ಭೇಟಿ ಮಾಡಿ ಮನವಿ ಮಾಡುತ್ತಾರೆ. ಎಲ್ಲೋ ಒಂದಿಬ್ಬರು ಸ್ಪಂದಿಸಿದರು. ಉಳಿದವರು ಬಾಗಿಲು ಹಾಕಿದರು. ಹಲವರ ಸಲಹೆಗಳನ್ನು ಪಡೆದು ಆಕೆ ಒಂದು ಓಲುಔ ತೆರೆಯುತ್ತಾರೆ. ಪೈಸೆ ಪೈಸೆಯನ್ನು ಒಟ್ಟು ಮಾಡುತ್ತಾರೆ. ಹಸಿವನ್ನು ಮರೆಯುತ್ತಾರೆ. ಚಪ್ಪಲಿ ಹ–ರಿದರೂ ಲೆಕ್ಕಿಸದೆ ಕಾಲ್ನಡಿಗೆಯಲ್ಲಿ ಬಿಸಿಲಿಗೆ, ಮಳೆಗೆ ಓಡಾಡುತ್ತಾರೆ.

ಮಹಾರಾಷ್ಟ್ರದ ಹಡಪ್ಸಾರ್ ಎಂಬ ಸ್ಥಳದಲ್ಲಿ 'ಸನ್ಮತಿ ಬಾಲನಿಕೇತನ್'ಎಂಬ ಮೊದಲ ಬೀದಿಯ ಮಕ್ಕಳ

ಅನಾಥಾಶ್ರಮ ತೆರೆಯುತ್ತಾರೆ. ಪ್ರೀತಿಯಲ್ಲಿ ಪಕ್ಷಪಾತದ ನೆರಳು ಬೀಳಬಾರದು ಎಂಬ ಕಾರಣ–ಕ್ಕೆ ತನ್ನ ಸ್ವಂತ ಮಗಳನ್ನು ಬೇರೆ ಒಬ್ಬರ ಅನಾಥ–ಾಶ್ರಮಕ್ಕೆ ಸೇರಿಸಿ ಬರುತ್ತಾರೆ. ಸರಕಾರದ ಯಾವ ಅನುದಾನವನ್ನೂ ಕಾಯದೆ ಕೇವಲ ಸೇವಾಸಕ್ತ ದಾನಿಗಳ ನೆರವಿನಿಂದ ಆಶ್ರಮವನ್ನು ನಡೆಸುತ್ತಾರೆ.

ಇಂದಿಗೆ ಅವರಿಗೆ 72 ವರ್ಷ. ಅವರ ಹೋರಾಟಕ್ಕೆ 50 ವರ್ಷ ತುಂಬಿತು. ಈಗ ಮಹಾರಾಷ್ಟ್ರದ ನಾಲ್ಕು ನಗರಗಳಲ್ಲಿ ಆರು ಅನಾಥಾಶ್ರಮಗಳನ್ನು ಅವರು ನಡೆಸುತ್ತಿದ್ದಾರು. 1400 ಅನಾಥ ಮಕ್ಕಳಿಗೆ ನಿಜವಾದ ಅರ್ಥದಲ್ಲಿ ತಾಯಿ ಆಗಿದ್ದಾರು! ಅವರ ಆಶ್ರಮದಲ್ಲಿ ಓದುತ್ತಿರುವ ಮಕ್ಕಳ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಮಾಡಿದ್ದಾರೆ. ಡಾಕ್ಟರ್, ಪ್ರೊಫೆಸರ್, ಇಂಜಿನಿಯರ್, ವಕೀಲ, ಶಿಕ್ಷಕ, ಉದ್ಯಮಿ ಮೊದಲಾದ ಹಲವರು ಅವರ ಆಶ್ರಮದಿಂದ ಮೂಡಿ ಬಂದಿದ್ದಾರೆ. ಅವರಿಗೆ ಸರಳವಾಗಿ ಮದುವೆ ಮಾಡಿಸುತ್ತಾರೆ. ಈವರೆಗೆ 207 ಅಳಿಯಂದಿರು, 36 ಸೊಸೆಯರು,1000ಕ್ಕಿಂತ ಹೆಚ್ಚು ಮೊಮ್ಮಕ್ಕಳು ಅವರಿಗಿದ್ದಾರೆ! ಅವರೆಲ್ಲರೂ ಆಕೆಯನ್ನು ಆಯಿ ಎಂದೇ ಕರೆಯುತ್ತಾರೆ. ಅವರ ಆಶ್ರಮದ ಒಬ್ಬ ಹುಡುಗ ಪದವಿ ಪಡೆದು ಅವರ ಬದುಕಿನ ಮೇಲೆಯೇ ಖು.ಆ ಮಾಡಿದ್ದಾನೆ!

ಸಿಂಧೂತಾಯಿ ದೊಡ್ಡ ವೇದಿಕೆಗಳಲ್ಲಿ ತನ್ನ ಬದುಕಿನ ಹೋರಾಟದ ಕಥೆಯನ್ನು ಹಿಂದಿ ಮತ್ತು ಮರಾಠಿ ಭಾಷೆಗಳಲ್ಲಿ ತುಂಬಾ ಪ್ರಭಾವಶಾಲಿಯಾಗಿ ವರ್ಣನೆ ಮಾಡುತ್ತಾರೆ. "ಮಂಜಿಲ್ ಬಹುತ್ ದೂರ್ ಹೈ. ಜಾನಾ ವಹಾನ್ ಜರೂರಿ ಹೈ! ರಾಸ್ತಾ ಮುಷ್ಕಿಲ್ ಹೈ. ಹಮೆ ಮರನಾ ಮಂಜೂರು ಹೈ "ಎಂದು ಹೇಳಿ ಮಾತು ಮುಗಿಸುತ್ತಾರೆ. ಬಂದವರ ಮುಂದೆ ಸೆರಗು ಹಿಡಿದು ಭಿಕ್ಷೆ ಬೇಡುತ್ತಾರೆ. ಬಂದ ಹಣವನ್ನೆಲ್ಲ ತನ್ನ ಆಶ್ರಮಕ್ಕೆ ತಂದು ಸುರಿಯುತ್ತಾರೆ.

ಸಿಂಧೂತಾಯಿಗೆ ಈವರೆಗೆ 273 ರಾಜ್ಯ ಮಟ್ಟದ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಗಳು ದೊರೆತಿವೆ. 2016ರಲ್ಲಿ ಒಂದು ವಿವಿ ಅವರಿಗೆ ಗೌರವ ಡಾಕ್ಟರೇಟ್ ನೀಡಿದೆ. ಭಾರತ ಸರಕಾರವು ಆಕೆಗೆ ಮಹೋನ್ನತ 'ನಾರಿ ಶಕ್ತಿ' ಪ್ರಶಸ್ತಿಯನ್ನು ರಾಷ್ಟ್ರಪತಿಗಳ ಮೂಲಕ ( 2017) ನೀಡಿ ಗೌರವಿಸಿದೆ. ಪ್ರಶಸ್ತಿಗಳಿಂದ ಬಂದ ಅಷ್ಟೂ ಹಣವನ್ನು ಅವರು ತನ್ನ ಆಶ್ರಮದ ಖರ್ಚಿಗೆ ವಿನಿಯೋಗಿಸಿದ್ದಾರೆ. ಆಕೆಗೆ ಭಾರತ ಸರಕಾರವು ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಸರಕಾರವು ಆಕೆಗೆ ಬಸವ ಶ್ರೀ ಪ್ರಶಸ್ತಿ ನೀಡಿದೆ.

ಸಿಂಧೂ ತಾಯಿ ಸಪ್ಕಲ್ ಅವರ ಬದುಕಿನ ಕಠಿಣ ಹೋರಾಟದಿಂದ ಸ್ಫೂರ್ತಿಯನ್ನು ಪಡೆದು ಮರಾಠಿ ಭಾಷೆಯಲ್ಲಿ 'ಮೀ ಸಿಂಧುತಾಯ್ ಸಪಕಾಲ್' ಎಂಬ ಸಿನಿಮಾ ಬಂದಿದ್ದು ಅದು ಪ್ರಶಸ್ತಿ ಪಡೆದಿದೆ. ಸಿಂಧೂ ತಾಯಿ ಬದುಕು ಸಾವಿರಾರು ಮಂದಿಗೆ ಸ್ಫೂರ್ತಿ ನಮಗೆ. ನಿಜವಾದ ಅರ್ಥದಲ್ಲಿ ಅನಾಥ ಮಕ್ಕಳ ಮಹಾಮಾತೆಯೇ ಸರಿ.

ಸಮಸ್ತ ನಾಡಿನ ಜನತೆಗೆ ಗಣರಾಜ್ಯೋತ್ಸವದ ಶುಭಾಷಯಗಳು
ಗ್ರಾಮ ಪಂಚಾಯತಿ ಕಾರ್ಯಾಲಯ, ರೋಡಲಬಂಡ ತವಗ
ತಾ–ಲಿಂಗಸುಗೂರು ಜಿ–ರಾಯಚೂರು



ವೀರೇಶ್ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು
ಯಂಕಮ್ಮ ಗಂಡ ವಂದ್ಲಿಯ್ಯ ಅಧ್ಯಕ್ಷರು, ರೋಡಲಬಂಡಾ ಗ್ರಾ.ಪಂ.
ಸಿದ್ದಪ್ಪ ತವಗ ಉಪಾಧ್ಯಕ್ಷರು, ರೋಡಲಬಂಡಾ ಗ್ರಾ.ಪಂ.
ಗಿರಿಜಮ್ಮ ರೋಡಲಬಂಡಾ ಗ್ರಾ.ಪಂ. ಸದಸ್ಯರು
ರೇಣುಕಮ್ಮ ನಿಂಗಪ್ಪ ರೋಡಲಬಂಡಾ ಗ್ರಾ.ಪಂ. ಸದಸ್ಯರು
ಶಕೀಯ ಬೇಗಮ್ ರೋಡಲಬಂಡಾ ಗ್ರಾ.ಪಂ. ಸದಸ್ಯರು
ಸೋಮಶೇಖರ್ ದೇಸಾಯಿ ರೋಡಲಬಂಡಾ ಗ್ರಾ.ಪಂ. ಸದಸ್ಯರು
ರಮೇಶ್ ಕಾಳಪ್ಪ ರೋಡಲಬಂಡಾ ಗ್ರಾ.ಪಂ.
ಹುಲಗಮ್ಮ ಗಂಡ ಈರಪ್ಪ ರೋಡಲಬಂಡಾ ಗ್ರಾ.ಪಂ.
ಮಂಜುಳಾ ವೀರನಗೌಡ ಯಲಗಟ್ಟ ರೋಡಲಬಂಡಾ ಗ್ರಾ.ಪಂ. ಸದಸ್ಯರು
ರಾಘವೇಂದ್ರ ಗಂಗಾವತಿ ಯಲಗಟ್ಟ ರೋಡಲಬಂಡಾ ಗ್ರಾ.ಪಂ. ಸದಸ್ಯರು
ಸಹದೇವ ಯಲಗಟ್ಟಾ ರೋಡಲಬಂಡಾ ಗ್ರಾ.ಪಂ. ಸದಸ್ಯರು
ಚಾಂದ್ ಪಾಷ ಯಲಗಟ್ಟ ರೋಡಲಬಂಡಾ ಗ್ರಾ.ಪಂ. ಸದಸ್ಯರು
ಸಿದ್ದಣ್ಣ ಯಲಗಟ್ಟ ರೋಡಲಬಂಡಾ ಗ್ರಾ.ಪಂ.
ಹುಲಿಗೆಮ್ಮ ಯಲಗಟ್ಟ ರೋಡಲಬಂಡಾ ಗ್ರಾ.ಪಂ.
ಚೆನ್ನಮ್ಮ ಯಲಗಟ್ಟ ರೋಡಲಬಂಡಾ ಗ್ರಾ.ಪಂ. ಸದಸ್ಯರು
ಪಾರ್ವತಿ ಬಸವರಾಜ್ ಕಡೋಣಿ ರೋಡಲಬಂಡಾ ಗ್ರಾ.ಪಂ. ಸದಸ್ಯರು
ಅಂಬಮ್ಮ ಲಕ್ಷ್ಮಣ ಯಲಗಟ್ಟ ರೋಡಲಬಂಡಾ ಗ್ರಾ.ಪಂ. ಸದಸ್ಯರು
ದೊಡ್ಡಮ್ಮ ಗುಂಡಪ್ಪ ತವಗ ರೋಡಲಬಂಡಾ ಗ್ರಾ.ಪಂ. ಸದಸ್ಯರು
ಶರಣಮ್ಮ ಬಸವಂತ ಮಲ್ಲಾಪುರ ರೋಡಲಬಂಡಾ ಗ್ರಾ.ಪಂ. ಸದಸ್ಯರು

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಂದ

ಕರುನಾಡ ಕಂದ
ಸಂಪುಟ–1 । ಸಂಚಿಕೆ–6
ದಿನಾಂಕ: 16–01–2022 । ಪುಟಗಳು: 20

# ಕುಂಚವರಂ ಗ್ರಾಮದ ಬಸ್ ನಿಲ್ದಾಣ ಮೂಲಭೂತ ಸೌಕರ್ಯ ಕೊರತೆ




ಚಿಂಚೋಳಿ ತಾಲೂಕಿನ ಜಿಲ್ಲಾ ಪಂಚಾಯತಿ ಕ್ಷೇತ್ರವಾದ ಕುಂಚವರಂ ಗ್ರಾಮದ ಬಸ್ ನಿಲ್ದಾಣ ಮೂಲಭೂತ ಸೌಕರ್ಯವಿಲ್ಲದೆ ಹಾಳುಬಿದ್ದಿದೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದರು ಜನಪ್ರತಿನಿಧಿಗಳು ಅನೇಕ ಬಾರಿ ಗ್ರಾಮಸ್ಥರು ಹೇಳಿದರೂ ಪ್ರಯೋಜನವಿಲ್ಲ ಕುಂಚಾವರಂ ಗ್ರಾಮದಲ್ಲಿ ಅಂದಿನ ಚಿಂಚೋಳಿ ಶಾಸಕರಾದ ದಿವಂಗತ ವೈಜನಾಥ್ ಪಾಟೀಲ್ ಅವರ ಅವಧಿಯಲ್ಲಿ 1999 ಜೂನ್ 26ರಂದು ಅಂದಿನ ಪೌರಾಡಳಿತ ರಾಜ್ಯ ಸಚಿವರು ಮೀರಾಜುದಿನ್ ಎನ್ ಪಟೇಲ್ ಅವರು ಉದ್ಘಾಟನೆ ಮಾಡಿದರು ಈ ಭಾಗದ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿ ಕೊಟ್ಟಿದ್ದರು ಅದರೆ 22 ವರ್ಷ ಕಳೆದರು ಇಲ್ಲಿ ತನಕ ಮೂಲಸೌಕರ್ಯವಿಲ್ಲದೆ ಹಾಳುಬಿದ್ದಿದೆ ಕುಡಿಯೋಕೆ ನೀರಿನ ವ್ಯವಸ್ಥೆ ಇಲ್ಲ ಕರೆಂಟ್ ಇಲ್ಲ ಶೌಚಾಲಯ ಇಲ್ಲ ಇದರಿಂದ ಮಹಿಳೆಯರು ತೊಂದರೆಯನ್ನು ಅನುಭವಿಸುತ್ತಿದ್ದಾರೆ ಸಾಯಂಕಾಲ ಆದರೆ ಸಾಕು ಕುಡುಕರ ತಾಣವಾಗಿರುತ್ತದೆ ಸರಿಯಾದ ಸಮಯಕ್ಕೆ ಬಸ್ಸಿನ ವ್ಯವಸ್ಥೆ ಇರುವುದಿಲ್ಲ ಅನೇಕ ವಿದ್ಯಾರ್ಥಿಗಳು ಇಲ್ಲಿಂದ ದಿನಾಲೂ ಚಿಂಚೋಳಿಗೆ ವಿದ್ಯಾಭ್ಯಾಸಕ್ಕಾಗಿ ಹೋಗುತ್ತಾರೆ ಬಸ್ ನಿಲ್ದಾಣದಲ್ಲಿ ಕೊಠಡಿಗಳು ಹಾಳಾಗಿವೆ ಕಿಟಕಿಗಳು ಬಾಗಿಲುಗಳು ಮುರಿದು ಬಿದ್ದಿದೆ ಮಳೆ ಬಂದರೆ ಸಾಕು ಈ ಬಸ್ ನಿಲ್ದಾಣ ಸೋರುತ್ತದೆ ರಾತ್ರಿ ಸಮಯದಲ್ಲಿ ಈಕಡೆ ಪ್ರಯಾಣಿಕರು ಹೋಗುವುದಿಲ್ಲ ಸಮರ್ಪಕವಾಗಿ ಒಳ್ಳೆಯ ರಸ್ತೆ ಇಲ್ಲ ರಸ್ತೆಯಲ್ಲಿ ಗುಂಡಿಗಳು ಬಿದ್ದು ಹಾಳಾಗಿದೆ ನಿಲ್ದಾಣ ಒಳಗಡೆ ಎಲ್ಲ ಕಸದ ರಾಶಿ ಕಾಣುತ್ತದೆ ಸುತ್ತುಮುತ್ತು ಮುಳ್ಳು ಕಂಟಿಗಳಿಂದ ತುಂಬಿ ತುಳುಕುತ್ತಿದೆ ಬಸ್ಟಾಂಡ್ ಹೊರಗಡೆ ಎಲ್ಲಾ ವ್ಯಾಪಾರಸ್ಥರ ಹೋಟೆಲ್ ಗಳಿವೆ ಹೋಟೆಲ್ ನಲ್ಲಿ ವ್ಯರ್ಥ ಪದಾರ್ಥಗಳನ್ನು ತಂದು ಬಸ್ಟಾಂಡ್ ಒಳಗಡೆ ರಾಶಿ ಹಾಕುತ್ತಾರೆ ಹಾಗೂ ಚಿಂಚೋಳಿ ಬಸ್ ಘಟಕದ ಬಸ್ಸಿಗಿಂತ ತೆಲಂಗಾಣದ ಬಸ್ಸುಗಳು ಜಾಸ್ತಿ ಓಡಾಡುತ್ತವೆ ನಿಲ್ದಾಣದಲ್ಲಿ ಬಸ್ಸಿನ ಬಗ್ಗೆ ಮಾಹಿತಿ ಪಡೆಯಬೇಕಾದರೆ ಯಾರೂ ಇರುವುದಿಲ್ಲ ಇದು ತೆಲಂಗಾಣವೋ ಕರ್ನಾಟಕವೋ ಅರ್ಥ ಆಗುತ್ತಿಲ್ಲ ಎಂದು ಗ್ರಾಮಸ್ಥರು ಹೇಳುತ್ತಿದ್ದಾರೆ ಗ್ರಾಮಸ್ಥರು ಈ ಬಗ್ಗೆ ಹಲವಾರು ಬಾರಿ ಮನವಿ ಕೊಟ್ಟರೂ ಯಾರೂ ಈ ಕಡೆ ಮುಖ ಮಾಡುತ್ತಿಲ್ಲವೆಂದು ಗ್ರಾಮಸ್ಥರ ಆಕ್ರೋಶ.

# ಬಿಜೆಪಿ ಸರ್ಕಾರದ ವಿರುದ್ಧ ಕಾಂಗ್ರೆಸ್ ನಾಯಕರಿಂದ ಗದಗ ಜಿಲ್ಲಾದಿಕಾರಿಗಳ ಕಚೇರಿಯವರೆಗೆ ಪಾದಯಾತ್ರೆ




ರೋಣ ನರಗುಂದ ಗದಗ ತಾಲೂಗಳ ವಿವಿಧ ಗ್ರಾಮಗಳಲ್ಲಿಯ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಜ. 4ರಂದು ಬೆಳಗ್ಗ 9 ಗಂಟೆಗೆ ಹೊಳೆಆಲೂರಿನಿಂದ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು ಗಾಡಗೋಳಿ, ಹೊಳೆಮಣ್ಣೂರ, ಅಸೂಟಿ, ಕರಮಡಿ, ಮಾಳವಾಡ, ಜೌಜಗೇರಿ ಮೂಲಕ ತೆರಳಿ ಬೆಳವಣಕಿ ಗ್ರಾಮದಲ್ಲಿ ವಾಸ್ತವ್ಯ ಮಾಡಲಾಗುವುದು. ಜ. 5ರಂದು ಬೆಳಗ್ಗೆ 8 ಗಂಟೆಯಿಂದ ಬೆಳವಣಕಿಯಿಂದ ಪ್ರಾರಂಭಿಸಿ ಮಲ್ಲಾಪುರ, ಸಂದಿಗವಾಡ, ಹೊನ್ನಾಪುರ, ಕದಡಿ, ಗಾವರವಾಡ, ಡ.ಸ. ಹಡಗಲಿ, ಗುಜಮಾಗಡಿ ಮೂಲಕ ಕುರುಡಗಿ ಗ್ರಾಮಕ್ಕೆ ತೆರಳಿ ವಾಸ್ತವ್ಯ ಮಾಡಲಾಗುವುದು. ಜ. 6ರ ಬೆಳಗ್ಗೆ 8 ಗಂಟೆಯಿಂದ ಕಿರಟಗೇರಿ, ಹುಯಿಲಗೋಳ, ಚಿಕ್ಕೊಪ್ಪ, ಹಿರೇಕೊಪ್ಪ, ನಾಗಸಮುದ್ರ, ನರಸಾಪುರ, ಬೆಟಗೇರಿ ಮಾರ್ಗವಾಗಿ ಗದಗ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ವಿವಿಧ ಬೇಡಿಕೆಗಳ ಈಡೇರಿಕಾಗಿ ಪ್ರತಿಭಟಿಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಮಾಜಿ ಸಚಿವ ಬಿ.ಆರ್. ಯಾವಗಲ್ಲ ತಿಳಿಸಿದರು.

ಆಸರೆ ಮನೆ ಹಂಚಿಕೆ ಸಮಸ್ಯೆ, ಹದಗೆಟ್ಟ ರಸ್ತೆ ಶೀಘ್ರ ದುರಸ್ತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಾಂಗ್ರೆಸ್ ವಿವಿಧ ಘಟಕಗಳ ನೇತೃತ್ವದಲ್ಲಿ ಜ. 4ರಿಂದ 6ರ ವರೆಗೆ ಹೊಳೆಆಲೂರಿನಿಂದ ಗದಗವರೆಗೆ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಜಿ.ಎಸ್. ಪಾಟೀಲ ಮಾತನಾಡಿದರು

ಈ ಸಂದರ್ಭದಲ್ಲಿ ನರಗುಂದ ಬ್ಲಾಕ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಪ್ರವೀಣ ಯಾವಗಲ್ಲ, ಶ್ರೀ ಬಸನಗೌಡ ಹೆಬ್ಬಳ್ಳಿ (ಹುನಸಿಕಟ್ಟಿ) ಹೊಳೆಆಲೂರ ಬ್ಲಾಕ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಎಂ.ಬಿ. ಕೋಳೇರಿ, ರಾಜು ಕಲಾಲ, ತಾಪಂ ಮಾಜಿ ಅಧ್ಯಕ್ಷ ಶಂಕರಗೌಡ ಪಾಟೀಲ, ಪ್ರಕಾಶ ಭಜಂತ್ರಿ, ಸಂಗು ನವಲಗುಂದ ಮುಂತಾದವರು ಉಪಸ್ಥಿತರಿದ್ದರು.

ನಾಡಿನ ಸಮಸ್ತ ಜನತೆಗೆ ಗಣರಾಜ್ಯೋತ್ಸವದ ಹಾರ್ದಿಕ ಶುಭಾಷಯಗಳು.




ಕರ್ನಾಟಕದ ಪ್ರತಿ ತಾಲೂಕಿನಲ್ಲಿ ಪಾರ್ಟ್ ಟೈಮ್ (ಗೌರವ ಧನ)

ಫುಲ್ ಟೈಮ್‌ಗೆ (ಸಂಬಳ) ಸ್ಥಳೀಯ ವರದಿಗಾರರಾಗಿ ಕಾರ್ಯ ನಿರ್ವಹಿಸಲು ಆಸಕ್ತ ಯುವಕ–ಯುವತಿಯರು ತಮ್ಮ ಹೆಸರು ಹಾಗೂ ತಾಲ್ಲೂಕು ವಾಟ್ಸ್ ಆಪ್ ಅಥವಾ ಕರೆ ಮಾಡಿ

**ಬಸವರಾಜ ಬಳಿಗಾರ** ಸಂಪಾದಕರು,
**'ಕರುನಾಡ ಕಂದ'** ಮೊ : 9986366909

ಈಗಾಗಲೇ ಮಾಧ್ಯಮದ ಅನುಭವ ಇದ್ದವರು ಹಾಗೂ ಹೊಸದಾಗಿ ಸೇರಬಯಸುವವರು ಸಂಪರ್ಕಿಸಬಹುದು.

ನಿಮ್ಮ ಸ್ಥಳೀಯ ಸುದ್ದಿ ಹಾಗೂ ಎಲ್ಲಾ ರೀತಿಯ ಜಾಹೀರಾತುಗಳಿಗಾಗಿ ಕರೆ ಮಾಡಿ 9986366909

ಕರುನಾಡ ಕಂದ
ಸಂಪುಟ–1 । ಸಂಚಿಕೆ–6
ದಿನಾಂಕ: 16–01–2022 । ಪುಟಗಳು: 20

# ನಕ್ಷತ್ರಾಕಾರದ–ಮಂಜ್ರಾಬಾದ್–ಕೋಟೆ

ಹಾಸನ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿ ಒಂದಾಗಿರುವ ಸಕಲೇಶಪುರವು ಬಹಳಷ್ಟು ಪ್ರಾಕೃತಿಕ ಸ್ಥಳಗಳು ಮತ್ತು ಕಣ್ಣಿಗೆ ಕಟ್ಟುವಂತಹ ನೈಸರ್ಗಿಕ ದೃಶ್ಯಗಳಿಂದ ಮತ್ತು ಮನೋಹರವಾದ ಕಲೆ ಮತ್ತು ವಾಸ್ತುಶಿಲ್ಪಗಳಿಂದ ಕೂಡಿದ ಜನಪ್ರಿಯ ಪ್ರವಾಸಿ ತಾಣಗಳಿಂದ ಕೂಡಿದೆ. ಈ ಪ್ರದೇಶವು ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುವ, ಆರಾಧಿಸುವ ರಸಿಕರ ಚಿತ್ತವನ್ನು ಆಕರ್ಷಿಸುವ ದಟ್ಟ ಅರಣ್ಯಗಳಿಂದಲೂ, ಬೆಟ್ಟಗುಡ್ಡಗಳಿಂದಲೂ, ನದಿಗಳಿಂದಲೂ, ಜಲಪಾತಗಳಿಂದಲೂ, ನೀರಿನ ಝರಿಗಳಿಂದಲೂ ಮತ್ತು ಗಿರಿಕಂದರಗಳಿಂದಲೂ ಕೂಡಿದೆ. ಪಶ್ಚಿಮ ಘಟ್ಟಗಳಲ್ಲಿರುವ ಪುಷ್ಪಗಿರಿ, ಬಿಸಲೆ ಅರಣ್ಯ ಶ್ರೇಣಿ, ಹಿರೇಕಲ್ ಗಿರಿ ಶ್ರೇಣಿ, ಮತ್ತು ನಿತ್ಯ ಹರಿದ್ವರ್ಣ ಕಾಡುಗಳು ಪ್ರತಿಯೊಬ್ಬರ ಗಮನವನ್ನು ಸೆಳೆಯುತ್ತವೆ.

ಸಮುದ್ರಮಟ್ಟದಿಂದ ಈ ಕೋಟೆಯು 988 ಮೀಟರ್ ಎತ್ತರದಲ್ಲಿದೆ. ಅಂದರೆ 3393 ಅಡಿಗಳು 252 ಮೆಟ್ಟಿಲುಗಳನ್ನು ಏರಿದರೆ ಸಿಗುವ ಈ ಕೋಟೆಯು ನಕ್ಷತ್ರಾಕಾರದ ರಚನೆಯ ವಿಶಿಷ್ಟ ತಂತ್ರವನ್ನೊಳಗೊಂಡ "ಕಡೆಗಾಪು"ಮತ್ತು"ಗಿರಿದುರ್ಗ"ವಾಗಿದೆ.

ಈ ಕೋಟೆಯ ಸಂರಕ್ಷಣಾ ಜವಾಬ್ದಾರಿಯನ್ನು 1956ರ ಪುರಾತತ್ವ ಇಲಾಖೆಯ ನಿಯಮದಂತೆ ವಹಿಸಿಕೊಂಡಿದ್ದು ಸೂಕ್ತ ರಕ್ಷಣೆ ನೀಡಿ, ಪರಿಣಿತ ಮಾರ್ಗದರ್ಶಿಗಳ ನೇಮಕಾತಿ ಮಾಡಿದ್ದರೆ ಇಡೀ ಜಿಲ್ಲೆಯಲ್ಲಿಯೇ ಶ್ರೇಷ್ಠವಾದ ಸ್ಮಾರಕಗಳಲ್ಲೊಂದಾಗುತಿತ್ತು. ವಿಶೇಷವಾದ ದುರ್ಗ ರಚನಾ ತಂತ್ರ, ಶೈಲಿಯನ್ನು ಹೊಂದಿರುವ ಈ ಕೋಟೆಯು ಶೇಕಡ 60 ಭಾಗ ಮಾತ್ರ ಭದ್ರವಾಗಿ ಉಳಿದು, ಭೀಮಬಲವನ್ನು ಕಾಪಾಡಿಕೊಂಡು ಬಂದಿದೆ.

#ಕಡೆಗಾಪು :– ಕಡೆಗಾಪು ಎಂದರೆ ಕೊನೆಯ ರಕ್ಷಣೆ ಎಂದಾಗುತ್ತದೆ. ರಾಜಧಾನಿಯ ಮೇಲೆ ದಂಡೆತ್ತಿ ಯಾರಾದರು ವೈರಿಗಳು ಬಂದಾಗ ಗುಪ್ತವಾಗಿ ಕೊನೆಯ ರಕ್ಷಣೆಗಾಗಿ ತನ್ನೆಲ್ಲ ಅಮೂಲ್ಯವಾದ ಚರಾಸ್ತಿಗಳನ್ನು ಭದ್ರವಾಗಿ ಇಟ್ಟುಕೊಳ್ಳುವ ರೂಢಿಯು ಇತಿಹಾಸದುದ್ದಕ್ಕೂ ರಾಜ ಮಹರಾಜರು ನಡೆಸಿಕೊಂಡು ಬಂದಿದ್ದನ್ನು ಕಾಣುತ್ತೇವೆ. ಅಂತಹ ರಕ್ಷಣೆಗಾಗಿ ಮಾಡಿಕೊಂಡ ಟಿಪ್ಪುವಿನ ಅಮೂಲ್ಯವಾದ ಕೋಟೆಯೇ ಈ ಮಂಜ್ರಾಬಾದ್ ಕೋಟೆ ಆಗಿರುತ್ತದೆಂದು ಹೇಳಲಾಗಿದೆ.

ಕೋಟೆಗಳ ರಚನಾ ಶಾಸ್ತ್ರದಲ್ಲಿ ಮುಖ್ಯವಾಗಿ ನಾಲ್ಕು ವಿಭಾಗಗಳನ್ನು ಮಾಡಲಾಗಿದ್ದು ಭೂದುರ್ಗ, ಜಲದುರ್ಗ, ವನದುರ್ಗ, ಗಿರಿದುರ್ಗಗಳೆಂದು ಕರೆಯಲಾಗುತ್ತಿದೆ. ಭೂವಲಯದಲ್ಲಿ ಜಲಸಂಪನ್ಮೂಲಗಳ ನಡುವೆ ಕಟ್ಟಲ್ಪಟ್ಟ ಕೋಟೆಗಳನ್ನು ಜಲ ದುರ್ಗಗಳೆಂದು ಕರೆದರೆ, ಬೆಟ್ಟ ಅಥವಾ ಗುಡ್ಡಗಳ ಮೇಲೆ ಕಟ್ಟಲ್ಪಟ್ಟ ಕೋಟೆಗಳಿಗೆ ಗಿರಿದುರ್ಗವೆಂದು ಕರೆಯಲಾಗುತ್ತದೆ. ದುರ್ಗವೆಂದರೆ ಇಲ್ಲಿ ಕೋಟೆ ಎಂದರ್ಥ. ಮಂಜ್ರಾಬಾದ್ ಕೋಟೆಯೂ ಸಹ ಗಿರಿಯೊಂದರ (ಗುಡ್ಡದ) ಮೇಲೆ ಕಟ್ಟಿದ (ನಿರ್ಮಿಸಿದ) ದುರ್ಗವಾಗಿದೆ. ಶ್ರೀರಂಗಪಟ್ಟಣದ ಕೋಟೆಯು ಜಲದುರ್ಗವಾದರೆ ಐಗೂರಿನ ಕೋಟೆಯು ವನದುರ್ಗವಾಗಿದೆ.

**# ಈ_ಸ್ಥಳದಲ್ಲಿ_ ಮಂಜ್ರಾಬಾದ್_ ಕೋಟ_ನಿರ್ಮಿಸಲು _ಕಾರಣಗಳು :**

1) ಆಂಗ್ಲರ, ನಿಜಾಮರ, ಮರಾಠರ ದಾಳಿಯನ್ನು ತಡೆಯಲು ಈ ಸ್ಥಳವು ಬಹು ಆಯಕಟ್ಟಿನ ಸ್ಥಳವಾಗಿತ್ತು.

2) ಹೈದರಾಲಿ, ಟಿಪ್ಪು ಸುಲ್ತಾನರು ಮಂಗಳೂರು ಬಂದರನ್ನು ನೌಕಾ ನೆಲೆಯನ್ನಾಗಿ ಭದ್ರಪಡಿಸಿಕೊಳ್ಳಲು ಇಚ್ಛಿಸಿದ್ದರು. ತಮ್ಮ ಆಳ್ವಿಕೆಯಲ್ಲಿ ಈ ಬಂದರು ಇಂಗ್ಲೀಷರಿಗೂ ಮತು ಹೈದರಾಲಿಗೂ ಹಸ್ತಾಂತರವಾಗುತ್ತಲೇ ಇರುವುದರಿಂದಮಂಗಳೂರು, ಶ್ರೀರಂಗಪಟ್ಟಣಗಳ ನಡುವಿನ ಆಯಕಟ್ಟಿನ ಪ್ರದೇಶದಲ್ಲಿದ್ದ ಈ ಅಡಾಣಿ ಗುಡ್ಡದ ಮೇಲೆ ಟಿಪ್ಪು ಕೋಟೆಯನ್ನು ಕಟ್ಟಿಸುವುದು ಅನಿವಾರ್ಯವಾಗಿತ್ತು.

3) ಕ್ರಿ.ಶ.1784ರಲ್ಲಿ ಟಿಪ್ಪು ಬ್ರಿಟೀಷರನ್ನು ಎದುರಿಸಿದಾಗ ಈ ಮಂಗಳೂರು ಬಂದರು ತೀರ ಸಂಪರ್ಕ ಮಾಧ್ಯಮದ ಸ್ಥಳವಾಯಿತು. ಆಗಾಗ ಮಂಗಳೂರಿಗೆ ಹೋಗಿಬರುತಿದ್ದ ಟಿಪ್ಪು ಬೆಳ್ತಂಗಡಿಯಿಂದ ಮುಂದೆ ಬಂದು ಭಲಂ(ಈಗಿನ ಐಗೂರು) ನಲ್ಲಿ ತಂಗುತಿದ್ದರು. ಈ ಸ್ಥಳ ಹಲವು ಬದ್ರತೆಗೆ ಪ್ರಮುಖವಾದದ್ದು ಎಂದುಅರಿವಾಗಿಇವರು ಇಲ್ಲಿಯೇ ಕೋಟೆಯನ್ನು ನಿರ್ಮಿಸಬೇಕೆಂದು ಸಂಕಲ್ಪಮಾಡಿದರು.

4) ಟಿಪ್ಪು ಮುಖ್ಯವಾಗಿ ಸೌಂದರ್ಯೋಪಾಸಕನಾಗಿದ್ದು, ಈ ಸ್ಥಳದ ಮೇಲೆ ನಿಂತು ಕಣ್ಣಿನ ಬಿಂಬವನ್ನು ಸುತ್ತಲೂ ಹಾಯಿಸಿದಾಗ ಕಂಡ ಉಪಮಾತೀತ ಬೆರಗನ್ನು ಸವಿದು ಇಲ್ಲಿ ಕೋಟೆಯನ್ನು ಕಟ್ಟಿಸಲು ನಿರ್ಧರಿಸಿ ನಂತರ, ವಿಶಿಷ್ಟ ಸೌಂದರ್ಯಸ್ಮಾರಕವನ್ನು ಅಷ್ಟಕೋನಾಕೃತಿಯಲ್ಲಿ




ನಿರ್ಮಿಸಿದನು. ಟಿಪ್ಪು ಕಟ್ಟಿಸಿದ ಜಮಲಾಬಾದ್, ಬೆಂಗಳೂರು, ದಿಂಡಗಲ್ ಮುಂತಾದ ಕೋಟೆಗಳು ಈ ಕೋಟೆಯಷ್ಟು ನಿರ್ದಿಷ್ಟವಾದ ಬಿಂದುವಿನಲ್ಲಿ ಕರಾರುವಾಕ್ಕಾಗಿ ಕಟ್ಟಿಸಿದವುಗಳಾಗಿಲ್ಲ. ಅಲ್ಲಿ ಭದ್ರತೆಯಿಂದಲೂ, ವಿಶಿಷ್ಟ ಶೈಲಿಯಿಂದಲೂ, ಅಷ್ಟಕೋನಾಕೃತಿ ಅಲಂಕರಣಗಳಿಂದಲೂ ಕೂಡಿರಬಹುದು.

5) ಟಿಪ್ಪು ಸುಲ್ತಾನನಿಗೂ ಅಂದಿನ ಇಂಗ್ಲೀಷರ ಸೈನ್ಯದ ಜನರಲ್ ಮ್ಯಾಥ್ಯೂಸನಿಗೂ ಹಲವು ಸಲ ಹಣಾಹಣಿ ನಡೆದದ್ದು ಇತಿಹಾಸದ ಪುಟದಲ್ಲಿ ದಾಖಲಾಗಿದೆ. ಕ್ರಿ.ಶ.1783ರಲ್ಲಿ ಟಿಪ್ಪು ಮಂಗಳೂರಿನಲ್ಲಿ ವಿಜಯಿಯಾದ ನಂತರ ಅದೇ ವರ್ಷ ಇಂಗ್ಲೀಷರ ಇನ್ನೊಂದು ಸೈನ್ಯ ಕರ್ನಲ್ ಕ್ಯಾಂಬೆಲ್‌ನ ಕೈಕೆಳಗೆ ಬಂದು ಮಂಗಳೂರನ್ನು ವಶಪಡಿಸಿಕೊಂಡಿರು.

ಟಿಪ್ಪು ದೊಡ್ಡ ಸೈನ್ಯದೊಂದಿಗೆ ಮಂಗಳೂರಿಗೆ ಬಂದು ಯುದ್ಧ ನಿರತನಾದ. ಆಗಲು ಆಂಗ್ಲರು ಸೋತುಹೋದರು. ಹೀಗಾಗಿ ಮಂಗಳೂರು ಹೊನ್ನಾವರ ಟಿಪ್ಪು ಸಂಪರ್ಕಕ್ಕೆ ಬಂದವು. ಅಲ್ಲಿಂದ ಟಿಪ್ಪುವಿಗೆ ಅಂತರಾಷ್ಟೀಯ ಸಂಬಂಧವು (ಹಡಗಿನ ಮೂಲಕ) ಮಂಗಳೂರೇ ಪ್ರಮುಖ ಕೇಂದ್ರವಾಯಿತು. ಈ ಸಂದರ್ಭದಲ್ಲಿ ಇಂದಿನ ಕಾಸರಗೋಡು ಜಿಲ್ಲೆಯ ಬೇಕಲ್‌ಕೋಟೆಯು ಪ್ರಬಲ ಆಡಳಿತ ಕೇಂದ್ರವಾಯಿತು.

ಆಗಾಗ ಆಕ್ರಮಣ ಮಾಡಲೆತ್ನಿಸುವ ಆಂಗ್ಲರನ್ನು ಮರ್ದಿಸಲು ಶ್ರೀರಂಗಪಟ್ಟಣ, ಮಂಗಳೂರು ನಡುವೆ ಒಂದು ಸೈನ್ಯವನ್ನು ಇಡುವ ಕೋಟೆಯನ್ನು ಕಟ್ಟಿಸುವುದು ಅನಿವಾರ್ಯವಾಯಿತು. ಬೇಕಲ್‌ಕೋಟೆಯ ವೈಶಿಷ್ಟತೆಯನ್ನು ಮನಗಂಡಿದ್ದ ಟಿಪ್ಪುಸುಲ್ತಾನ್ "ಕಡೆಗಾಪು" ಕೋಟೆಯ ದೃಷ್ಟಿಯಿಂದಲೂ ಕೂಡಸಕಲೇಶಪುರ ಬಳಿ ಇರುವ ಅಡಾಣಿಗುಡ್ಡದ ಮೇಲೆ ವೈಶಿಷ್ಟ ಪೂರ್ಣವಾದ, ಭದ್ರವಾದ ಕಲ್ಲಿನಕೋಟೆಯೊಂದನ್ನು ಕಟ್ಟಿಸಿದ. ಬೇಕಲ್‌ಕೋಟೆಯ ಕೆಲವು ಅಂಶಗಳನ್ನು ಈ ಮಂಜ್ರಾಬಾದ್ ಕೋಟೆಯಲ್ಲಿಯೂ ಕಾಣಬಹುದು.

6) ತೀರ ಆಪತ್ಕಾಲದಲ್ಲಿ ನಿಬಿಡವಾದ ಅರಣ್ಯದಿಂದ ಆಚ್ಛಾದಿತವಾಗಿದ್ದ ಈ ಕೋಟೆಯಲ್ಲಿ ಉಳಿದುಕೊಳ್ಳಲಿಕ್ಕಾಗಿ ಅಥವಾ ಚರಾಸ್ತಿಗಳನ್ನು ರಕ್ಷಿಸಿಕೊಳ್ಳುವ ಕಾರಣವೂ ಕೂಡ ಈ ಕೋಟೆಯ ನಿರ್ಮಾಣದ ಉದ್ದೇಶವಾಗಿತ್ತೆಂದು ತೋರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಸ್ಫೂರ್ತಿಗೊಂಡ ಟಿಪ್ಪು ಸುಲ್ತಾನರು ಬಹುಶಃ ಉಪಯೋಗಿ ಆಗಬಲ್ಲ ಕೋಟೆಯ ನಿರ್ಮಾಣ ಮಾಡಿದರು. "ಮಂಜ್ರಾಬಾದ್" ಎಂಬಹೆಸರಿನನಾಮಕರಣದ ಬಗ್ಗೆಯು ಹಲವಾರು ಅರ್ಥಗಳನ್ನು ಪೌರಾಣಿಕ ಕಾಲದಿಂದಲೂ ಕೊಡಬಹುದಾಗಿದೆ.

ಪರಿಸರದ ವಾಸ್ತವಿಕತೆಗೆ ಒತ್ತುಕೊಟ್ಟು ಸ್ಥಳೀಯ ಜನಾಭಿಪ್ರಾಯದ ಮೇರೆಗೆ ಹೆಸರನ್ನಿಡಲಾಯಿತೆಂದು ಪರಂಪರೆಯಿಂದ ತಿಳಿದುಬರುತ್ತದೆ. 200ವರ್ಷಗಳ ನಂತರವು ಈ ಕೋಟೆಗೆ ಮಾತ್ರವಲ್ಲ; ಇಡೀ ತಾಲ್ಲೂಕಿಗೆ "ಮಂಜ್ರಾಬಾದ್" ಎಂಬಹೆಸರು ದಾಖಲೆಗೊಂಡಿತ್ತು.

ಕೆಲವು ಕಡೆ ಇದೇ ಟಿಪ್ಪುವು ಈ ಪರಿಸರದ ಅನೇಕಪ್ರದೇಶಗಳಿಗೆ ಪರ್ಶಿಯನ್ ಹೆಸರುಗಳನ್ನು ಇಟ್ಟಿದ್ದ. ಆ ಹೆಸರುಗಳು ಟಿಪ್ಪು ನಂತರ ಬಳಕೆಯಾಗದೇ ಮಾಸಿಹೋದವು. ಉದಾಹರಣೆಗಾಗಿ ಚಿತ್ರದುರ್ಗವನ್ನು ಗೆದ್ದುಕೊಂಡ ನಂತರ ಇದಕ್ಕೆ ಪರೂಖಾಯೂಬ್‌ಸ್ಸಾರ್ ಎಂದು, ಬಳ್ಳಾರಿಗೆ "ಸಮರ್ಪಟ್ಟಣ" ಎಂದು, ಪಾವಗಡಕ್ಕೆ ಖುತುಬ್‌ಮಿನರ್ ಎಂದು, ಸಿರಾಕ್ಕೆ ರುಸ್ತುಮಾಬಾದ್ ಎಂದು, ದೇವರಹಳ್ಳಿಗೆ ಯೂಸೂಪಾಬಾದ್ ಎಂದು ಹೆಸರುಗಳನ್ನು ಮರುನಾಮಕರಣ ಮಾಡಿದ್ದ.

ಜನಾಭಿಪ್ರಾಯ ಮತ್ತು ಪರಿಸರಕ್ಕೆ ಸಂಬಂದಿಸಿದ ಹೆಸರುಗಳು ಇವಾಗಿದ್ದವು.

ಈ ಎಲ್ಲಾ ಹೆಸರುಗಳು ಟಿಪ್ಪುವಿನ ನಂತರ ಮೂಲ ಹೆಸರಿಗೆ ಮರಳಿದವು. ಆದರೆ ಮಂಜ್ರಾಬಾದ್ ಎಂಬ ಹೆಸರಿನಲ್ಲಿ ಅಂತರ್ಗತವಾದ ಭಾವ ಅರ್ಥವು ಇಲ್ಲಿಯ ಪ್ರಾದೇಶಿಕತೆಗೆ ಪರಿಸರಕ್ಕೆ ತುಂಬ ಅನನ್ಯವಾಗಿದೆ. ಹೀಗಾಗಿ ಈ ಹೆಸರು ಬಹುಕಾಲ ಜನರ ಬಾಯಿಯಲ್ಲಿ ಮತ್ತು ದಾಖಲೆಗಳಲ್ಲಿ ಹಸಿರಾಗಿವೆ.

ಪರ್ಶಿಯನ್ ಭಾಷೆಯಲ್ಲಿ ಮಂಜರ್+ಅಬಾದ್=ಮಂಜ್ರಾಬಾದ್ ಎಂಬುವುದು ಮಂಜಿನಿಂದ ಆವೃತವಾದ, ಸೌಂದರ್ಯದ ಹಿನ್ನೆಲೆಯುಳ್ಳ ಸ್ಥಳವೆಂದು ಆಗುತ್ತದೆ. ನಿಸರ್ಗದತ್ತವಾದ ಈ ಸ್ಥಳವು ಕೂಡ ಭೌಗೋಳಿಕ ಹಿನ್ನೆಲೆಯುಳ್ಳ ಪದನಾಮವಾಗಿದೆ.

ಇದರ ಜೊತೆಗೆ ಕ್ರಿ.ಶ.1763–1782ರ ಅವಧಿಯಲ್ಲಿ ಹೈದರಾಲಿಯು ಕೋಟೆಯನ್ನು ಕಟ್ಟಿಸಿದ್ದಾಗಿ ಹೇಳುತ್ತಾರೆ ಆದರೆ ಹೈದರಾಲಿ ಕೋಟೆ ಕಟ್ಟಿದ್ದಕ್ಕೆ ಯಾವುದೇ ಆಧಾರಗಳಿಲ್ಲ. ಇತಿಹಾಸ ತಜ್ಞರಾದ ಬೆಂಜಮಿನ್‌ಲೂಯಿಸ್, ಹಯವದನರಾವ್ ಮೊದಲಾದವರು ಈ ಕೋಟೆಯನ್ನು ಅನ್ವೇಷಣೆ ಮಾಡುವ ಕಾಲಕ್ಕೆ ಸಿಕ್ಕಿದ್ದ 2 ಪರ್ಶಿಯನ್ ಶಾಸನಗಳ ಆಧಾರದ ಮೇಲೆ ಟಿಪ್ಪುವೇ ಕ್ರಿ.ಶ.1792ರಲ್ಲಿ ಈ ಕೋಟೆಯನ್ನು ಕಟ್ಟಿಸಿದನೆಂದು ರಾಜ್ಯ, ಜಿಲ್ಲಾ ಗೆಜೆಟೀಟ್‌ಯರ್‌ನಲ್ಲಿ ನಮೂದಿಸಿದರು. ಈ ಶಾಸನಗಳ ಆಧಾರದ ಮೇಲೆ ಟಿಪ್ಪುವೇ ಕ್ರಿ.ಶ.1792ರಲ್ಲಿ ಈ ಕೋಟೆಯನ್ನು ಕಟ್ಟಿಸಿದರೆಂದು ಹೇಳಲಾಗುತ್ತದೆ.ಈ ಶಾಸನಗಳು ಅದೇನೆ ಆದರೂ ಹೈದರ್‌ಗಿಂತಲು ತಂತ್ರಜ್ಞಾನದಲ್ಲಿ, ಕಲಾತ್ಮಕತೆಯಲ್ಲಿ, ಸೌಂದರ್ಯೋಪಾಸನೆಯಲ್ಲಿ ಟಿಪ್ಪುವೇ ನೈಪುಣ್ಯತೆಯನ್ನು ಪಡೆದಿದ್ದ. ಹೀಗಾಗಿ ಹೈದರಾಲಿಯ ಭಕ್ತಿ ಸ್ಮಾರಕವಾಗಿ ಈ ಕೋಟೆಯನ್ನು ಕಟ್ಟಿಸಿರುವುದು ಸಮಂಜಸವಾಗಿ ಕಾಣುವುದಿಲ್ಲ.

ಇತಿಹಾಸ ತಜ್ಞರ ವರದಿಗಳಲ್ಲಿ: ಇತಿಹಾಸ ತಜ್ಞರಾದ ಬಿ.ಎಲ್.ರೈಸ್, ಹಯವದನರಾವ್ ಮತ್ತು ಪ್ರಾಚ್ಯ ಸಂಶೋದನೆ ವರದಿಗಳ ಪ್ರಕಾರ ಟಿಪ್ಪು ಕ್ರಿ.ಶ. 1792ರಲ್ಲಿ ಮಂಜ್ರಾಬಾದ್ ಕೋಟೆಯನ್ನು ನಿರ್ಮಾಣ ಮಾಡಿದರೆಂದು ತಿಳಿದುಬರುತ್ತದೆ. (ಆರ್ಕಿಯಾಲಾಜಿಕಲ್ ವರದಿಯೊಂದರ ಯಥಾನಕಲನ್ನು ಕೊನೆಗೆ ಕೊಡಲಾಗಿದೆ.) ಇಷ್ಟಲ್ಲದೆ ಪ್ರೋ ಶೇಕ್‌ಆಲಿಯವರು, ಡಾ.ಶ್ರೀವತ್ಸ ಎಸ್. ವಟಿ ಅವರು ಡಾ.ಮಂಜುನಾಥ್‌ಸಕಲೇಶ್‌ರವರು, ಡಾ॥ ಚನ್ನಬಸಪ್ಪಪಾಟೀಲರು ಮೇಲಿನ ಅಭಿಪ್ರಾಯವನ್ನೆ ದೃಡೀಕರಿಸುತ್ತಾರೆ. ಈ ಎಲ್ಲಾ ಕಾರಣಗಳಿಂದಾಗಿ ಸಕಲೇಶಪುರದ ಬಳಿ ಇರುವ ಮಂಜ್ರಾಬಾದ್ ಕೋಟೆಯು ಟಿಪ್ಪುಸುಲ್ತಾನ್ ನಿಂದ ನಿರ್ಮಾಣವಾಯಿತೆಂದು ಖಚಿತವಾಗಿದೆ.

# ಕೋಟೆ_ಎರಡು_ಹಂತಗಳಲ್ಲಿ_ಏಕೆ_ನಿರ್ಮಾಣವಾಯಿತು.?

ಈ ಕೋಟೆಯನ್ನು ಎರಡು ಹಂತಗಳಲ್ಲಿ ಕಟ್ಟಿಸಿದ ಹಿನ್ನೆಲೆಯಲ್ಲಿ ಜಿಜ್ಞಾಸೆ ತಾಳುವುದು ಸಹಜವಾಗಿದೆ. ಮೇಲುನೋಟಕ್ಕೆ ಎರಡು ಅವದಿಯಲ್ಲಿ ಬಗೆಯಾದ ವಸ್ತುಗಳನ್ನು ಬಳಸಿದ್ದು ಗೋಚರವಾಗುತ್ತದೆ. ಕೆಲವರು ಹೈದರಾಲಿಗಿಂತಲೂ ಮುಂಚೆಯೆ ನಿರ್ಮಾಣವಾಗಿರಬಹುದೆಂದು ಕೆಲವರು, ಹೈದರಾಲಿ ಅರ್ಧ ಕಟ್ಟಿಸಿ ನಂತರ ಟಿಪ್ಪು ಪೂರ್ಣನಿರ್ಮಾಣ ಮಾಡಿರಬಹುದೆಂದು ಊಹಿಸುತ್ತಾರೆ.

ಇನ್ನೊಂದು ಮಾಹಿತಿಯ ಪ್ರಕಾರ ಬಲಂ ನಾಯಕರು(ಐಗೂರು ನಾಯಕರು) ಪ್ರಾಥಮಿಕ ಹಂತದ ಕೋಟೆಯನ್ನು ನಿರ್ಮಿಸಿ, ನಂತರ ಅದಕ್ಕೆ ತಕ್ಕಂತೆ ಮುಂದಿನ ಕೋಟೆಯನ್ನು ಟಿಪ್ಪುಸುಲ್ತಾನ್ ಕಟ್ಟಿಸಿದನೆಂದು ಕೆಲವರು ಶೀರ್ಷಿಕೆಯನ್ನು ಬಿತ್ತಿದ್ದಾರೆ. ಆದರೆ ಇಷ್ಟೊಂದು ಶುಭ್ರವಾದ, ವೈಜ್ಞಾನಿಕ ಹಿನ್ನೆಲೆಯುಳ್ಳ ಅಷ್ಟಕೋನಾಕೃತಿಯನ್ನು ಎಲ್ಲಿಯೂ ಅವರು ಕಟ್ಟಿಸಿಲ್ಲವೆಂದು ದಾಖಲೆಗಳುತಿಳಿಸುತ್ತದೆ.ಕೆಳಂತಗಳಲ್ಲಿ ಕಲ್ಲುಗಳನ್ನು ಬಳಸಿ ಕಟ್ಟಿಸಿದ ಮೇಲೆ 8–10–12 ಅಡಿಗಳ ನಿರ್ಮಾಣವು ಇಟ್ಟಿಗೆಗಳನ್ನು ಬಳಸಿ ಕಟ್ಟಲಾಗಿದೆ. ಈ ಎರಡೂ ಹಂತದ ಕಟ್ಟಡದಲ್ಲಿ ಗಾರೆ ಗಚ್ಚುಗಳನ್ನು ಬಳಸಿ ಸುಣ್ಣದ ಲೇಪನಮಾಡಿದ್ದು ಅಲ್ಲಲ್ಲಿ ಕಂಡುಬರುತ್ತದೆ. ಕ್ರಿ.ಶ 1784ರಲ್ಲಿ ಬ್ರಿಟೀಷರನ್ನು ಎದುರಿಸುವಾಗ ಹೆಚ್ಚು ಸಶಕ್ತಗೊಳ್ಳಲು ಜಮಾಲಾಬಾದ್, ಎಂಬ ಕೋಟೆಯನು ಕಟ್ಟಿಸಿರಬಹುದೆಂದು. ಈ ಸಮಯದಲ್ಲೆ ಕೋಟೆಯನ್ನು ಕಲ್ಲಿನಿಂದ ಕಟ್ಟಿಸಲು ಆರಂಬಿಸಿರಬೇಕು.

ಒಂದೆರಡು ವರ್ಷಗಳ ಕಾಲ ನಿರ್ಮಾಣಕಾರ್ಯವು ನಡೆದಿರಬಹುದು. ಈ ಸಂದರ್ಭದಲ್ಲಿ ಬ್ರಿಟೀಷರ ದಂಗೆಗಳು ಹೆಚ್ಚಾದವು ಎಂದು ತೋರುತ್ತದೆ. ಸಂಪೂರ್ಣವಾಗಿ ಸಮುದ್ರ ತೀರದಲ್ಲಿ ತಕ್ಷಣ ಒಂದು ಸುಭದ್ರ ಕೋಟೆ ನಿರ್ಮಿಸುವ ಅವಶ್ಯಕತೆ ಬಂದಿರುವುದರಿಂದ ಬೆಳ್ತಂಗಡಿ ಬಳಿಯ ಜಮಾಲಾಬಾದ್ ಎಂಬ ಕೋಟೆಯ ನಿರ್ಮಾಣದ ಕಡೆ ಗಮನ ಹರಿಸಬೇಕಾದ್ದರಿಂದ ಅಡಾಣಿ ಗುಡ್ಡದ ಮೇಲಿನ ಕಲ್ಲಿನಲ್ಲಿ ಕಟ್ಟಿಸುತಿದ್ದ ಕೋಟೆಯು ಅರ್ಧದಲ್ಲಿ ನಿಂತಿರಬಹುದು. ಪ್ರಾಯಶಃ ಬ್ರಿಟೀಷರೊಡನೆ ಹೋರಾಟದಲ್ಲಿ 7–8 ವರ್ಷಕಾಲ ಈ ಕಡೆ ಗಮನಹರಿಸಲಿಲ್ಲವೆಂದು ಕಾಣುತ್ತದೆ. ನಂತರ ಸುಮಾರು 1790ರಲ್ಲಿ ಪುನಃ ಅರ್ಧಕ್ಕೆ ನಿಲ್ಲಿಸಿದ್ದ ಕೋಟೆಯೆಡೆಗೆ ಗಮನ ನೀಡಿ ಪುನರ್ ನಿರ್ಮಾಣ ಕಾರ್ಯಕ್ಕೆ ಕೈ ಹಾಕಿರಬಹುದು

ಶತಮಾನಗಳ ಅಂತರದಲ್ಲಿ ಈ ಕೋಟೆಯು ನಿರ್ಮಾಣವಾಗಿರಬಹುದೆಂದು ಜಿಜ್ಞಾಸೆಗಳಾದವು. ಏನೇ ಆದರೂ ತಂತ್ರಶಾಸ್ತ್ರ ಮತ್ತು ಇತರೆ ಕಾರಣಗಳಿಂದ ಈ ಬಗೆಯ ಕೋಟೆಯನ್ನು ಟಿಪ್ಪುಸುಲ್ತಾನ್ ಮಾತ್ರ ಕಟ್ಟಿಸಲು ಸಾದ್ಯವಿದೆ ಎಂಬುದು ಇತಿಹಾಸ ತಜ್ಞರ ದಾಖಲೆಗಳಿಂದ ತಿಳಿದುಬರುತ್ತದೆ ಸಂಪೂರ್ಣವಾಗಿಕಟ್ಟಿಸಲಾದ ಕೋಟೆಯ ಮೇಲೆ ನಿಂತು ಸುತ್ತಲಿನ ವಿಸ್ತೃತ ಸೌಂದರ್ಯವನ್ನು ಟಿಪ್ಪು ಕಂಡು ಮನಸಾರೆ ಉದ್ಘರಿಸಿದ ಬಗೆ ಸ್ಥಳೀಯ ಕತೆಯೊಂದು ಹೀಗೆ ಹೇಳುತ್ತದೆ. ಒಂದು ದಿನ ಬೆಳಗಿನ ಸಮಯ ಕೋಟೆಯ ಬುರುಜುಗಳನ್ನೇರಿ ಪಶ್ಚಿಮ ದಿಕ್ಕಿನ ಘಟ್ಟ ಶ್ರೇಣಿಯನ್ನು ಸುತ್ತಲಿನ ಪಚ್ಚೆ ಪೈರುಗಳನ್ನು ಹಚ್ಚ ಹಸಿರಿನ ನಿತ್ಯ ವರ್ಣಮಯ ಸಸ್ಯಕಾಶಿಯನ್ನ ವೀಕ್ಷಿಸಿ ಒಂದೆಡೆ ಹಾಲುಕ್ಕಿ ಹರಿಯುವ ಮಂಜಿನ ರಾಶಿ, ಇನ್ನೋದೆಡೆ ಅತ್ಯುಚ್ಚವಾದ ಸೌಂದರ್ಯ ಸಿರಿಯ ಸನ್ನಿಧಿ ಮತ್ತೊಂದೆಡೆ ಮೈದಾನದಂತೆ ಹಾಸಿಕೊಂಡ ಪೈರುಗಳನ್ನು ಕಂಡು ಆಹಾ! ಕಿತುನಾ ಸುಂದರ್ ಹೈ ಮಂಜ್ರಾಬಾದ್ ಎಂದು ಉದ್ಘರಿಸಿದ. ಅಂದಿನಿಂದಲೆ ಈ ಕೋಟೆಗೆ ಮಂಜ್ರಾಬಾದ್ ಕೋಟೆ ಎಂಬ ಹೆಸರು ನಿತ್ಯ ನಿರಂತರವಾಗಿ ಜನರ ಬಾಯಿಯಿಂದ ಬಾಯಿಗೆ ಹರಿದು ಬಂದಿತು.

ಆತ್ಯಾಧುನಿಕ ವಾಸ್ತು ವಿನ್ಯಾಸ ಪಾಶ್ಚತ್ಯ ಶೈಲಿ:ಕ್ರಿ.ಶ 1696ರಲ್ಲಿ ನಿರ್ಮಾಣಗೊಂಡ ಇಂತಹ ಕೋಟೆಗಳ ಉದಾಹರಣೆಗಳು ನಮಗೆ ದೊರೆಯುತ್ತವೆ. ಭಾರತೀಯ ಕೋಟೆಗಳ ನಿರ್ಮಾಣಗಳಿಗೆ ಪಾಶ್ಚಾತ್ಯ ವಾಸ್ತು ತಜ್ಞರು ಸಹಾಯ ಮಾಡಲಾರಂಬಿಸಿದ ನಂತರವೇ ಈ ಕೋಟೆಯ ನಿರ್ಮಾಣವಾದುದು ಖಚಿತವಾಗಿದೆ.. ಆಗಾಗಲೇ ಜರ್ಮನ್, ಫ್ರೆಂಚ್ ಮತ್ತು ಮುಸ್ಲಿಂ ದೇಶಗಳ ಮಧುರ ಭಾಂದವ್ಯದಲಿದ್ದ ಟಿಪ್ಪು ಸುಲ್ತಾನನು, ಅಲ್ಲಿಯ ಹಲವು ತಂತ್ರಜ್ಞರನ್ನು ಕರೆಯಿಸಿ ಕೋಟೆಯನ್ನು ಐರೋಪ್ಯ ಮಾದರಿಯಲ್ಲಿ ಸ್ಥಾಪಿಸಿದನೆಂದು ಇತಿಹಾಸಕಾರರ ಅಭಿಪ್ರಾಯ. ಹೊರನೋಟಕ್ಕೆ ಈ ಕೋಟೆಯು ಷಡ್ಭುಜಾಕೃತಿಯನ್ನು ಹೊಂದಿದ್ದರೂ ಅಷ್ಟಕೋನಾಕೃತಿಯೇಇದರ ಕೇಂದ್ರ ಬಿಂದುವಾಗಿದೆ.ಇದರ ದ್ವಾರವು 40 ಅಡಿ ಅಗಲ 25ಅಡಿ ಎತ್ತರವಾಗಿದ್ದು ಕಮಾನುದ್ವಾರವನ್ನು ಹೊಂದಿದೆ. ಇದೇ ಒಂದನೇಯ ಬಾಗಿಲು ಮತ್ತು ಪ್ರವೇಶದ್ವಾರವಾಗಿದೆ. ಅಲ್ಲಿಂದ ಮುಂದೆ ತಿರುವುಗಳ ದಾರಿಯಲ್ಲಿ ಸಾಗಿದರೆ ಮತ್ತೊಂದು ದ್ವಾರ ಸಿಗುತ್ತದೆ.ಇಲ್ಲಿ ಕೇವಲ ಕಮಾನು ಅಡಿಪಾಯ ಬಾಗಿಲು ಮುಂತಾದ ಶಿಲಾಕಂಬಗಳನ್ನು ಕಾಣಬಹುದಾಗಿದೆ.

1 ಮತ್ತು 2ನೇ ದ್ವಾರಗಳ ನಡುವೆ ಭದ್ರವಾದ ಪರಿವೀಕ್ಷಣಾ ಕೊಠಡಿ ಇದೆ. ಅಲ್ಲಿಂದ 40ಅಡಿ ಪಶ್ಚಿಮ ಭಾಗದಲ್ಲಿ ಸಾಗಿದರೆ ದಕ್ಷಿಣ ದಿಕ್ಕಿಗೆ ತಿರುಗುವದಾರಿಯಲ್ಲಿ ಪ್ರಮುಖವಾದ 3ನೇ ದ್ವಾರ ಸಿಗುತ್ತದೆ. 2ನೇ ದ್ವಾರವನ್ನು ದಾಟುವಾಗ ಕೋಟೆಯೊಳಗಿನಿಂದ ನುಸಿಳಿ ಬರಬಹುದಾದ ಒಂದು ಗುಪ್ತ ಮಾರ್ಗವಿದೆ. ಇದು 6 ಅಡಿ ಎತ್ತರ 3ಅಡಿ ಅಗಲವಾದ ಬಾಗಿಲಿನಿಂದ ಹಾಯ್ದು 90ಡಿಗ್ರಿ ಯಲ್ಲಿ ತಿರುಗಿ 60ಅಡಿ ಉದ್ದದ ಗುಪ್ತವಾದ ದಾರಿಯನ್ನುಕಾಣಬಹುದು .ಇದನ್ನು ಆಯ್ದು ಬಂದರೆ 2ನೇ ಕೋಟೆಗೆ ಬರಬಹುದು.

ಉತ್ತರ ದಿಕ್ಕಿನ ಬಾಗಿಲು ಒಳಗಡೆಗೆ ಅಂಟಿಕೊಂಡಂತೆ 15*10 ಅಡಿಗಳ ಕೋಣೆಇದ್ದು ಬಾಗಿಲಿಗೆ ಹಗಳಿ

ವಿಶ್ವದಲ್ಲಿ ಶ್ರೇಷ್ಠ ನಮ್ಮ ಭಾರತದ ಅಂದ
ಭಾರತದಲ್ಲಿ ಕಣ್ಣ್ಮನ
ಸೆಳೆಯುವ ನಮ್ಮ ರಾಜ್ಯ ಕರ್ನಾಟಕ ಚೆಂದ...
ಕರುನಾಡ ಇತಿಹಾಸ ತಿಳಿಯಲು ಇನ್ನೂ ಆನಂದ...
ಪಾಕ್ಷಿಕ ಪತ್ರಿಕೆಯಲ್ಲೇ ಕೊಂಡು ಓದಲೂ
ಚೆಂದಕ್ಕಿಂತ ಚಂದ ನಮ್ಮ ಈ ಕರುನಾಡ ಕಂದ.
**–ದೀಪು, ತುಮಕೂರು.**

# ನಕ್ಷತ್ರಾಕಾರದ–ಮಂಜ್ರಾಬಾದ್–ಕೋಟೆ

ಹಾಕುವಾಗ 4–6 ಜನ ಸೈನಿಕರು 25ಉದ್ದನೆಯ ತೊಲೆಯನ್ನು ಈ ಕೋಣೆಯೊಳಗೆ ಅಗಳಿಯನ್ನು ಹಾಯ್ದು ಹೋಗಿ ಮುಂದಿನ ದ್ವಾರದ ಕೋಣೆಯೊಳಗೆ ಭದ್ರಗೊಳ್ಳುವ ತಂತ್ರವನ್ನು ಮಾಡಲಾಗಿದೆ.ಛದ್ಮ ವೇಶದಾರಿಗಳು ಯಾರಾದರು ಕೋಟೆಯೋಳಗೆ ಪ್ರವೇಶಗೊಳ್ಳುವಾಗ ಸಿಕ್ಕಿ ಬೀಳುವ ವ್ಯವಸ್ಥೆಗಾಗಿ ಇದನ್ನು ಮಾಡಲಾಗಿದೆ. ಎಂದು ಹೇಳುತ್ತಾರೆ.

ಹೊಸದಾಗಿ ಈ ಕೋಟೆಯೊಳಗೆ ಪ್ರವೇಶಗೊಳ್ಳುವಾಗ ಟಿಪ್ಪು ಸೈನ್ಯದ ಗುರುತುಳ್ಳ ವ್ಯಕ್ತಿ ಈ ಕೌಂಟರಿನಲ್ಲಿ ತನ್ನ ಗುರುತನ್ನು ತೋರಿಸಿ ಒಳಕ್ಕೆ ಹೋಗಬಹುದಿತ್ತೆನ್ನಿಸುತ್ತದೆ. ಕಲಾ ಕೌಶಲ್ಯದಿಂದಲೂ, ಭದ್ರತೆಯಿಂದ ಸುಂದರ ನಕ್ಷೆಯಿಂದ 3ನೇ ದ್ವಾರವು ಬಹಳ ಕಲಾತ್ಮಕವಾಗಿ ಪ್ರಮುಖವಾಗಿ ಕಂಡುಬರುತ್ತದೆ. 20ಅಡಿ ಎತ್ತರವುಳ್ಳ ಕಮಾನಿನ ಮೇಲೆ ಸುಳುವು ಹೊಳವುಗಳನ್ನು ಮಾಡಲಾಗಿದ್ದು ಹುಲಿಯ ಪಟ್ಟೆಗಳನ್ನು ಕಮಾನಿನ ಮೇಲೆ ಸಿಮೆಂಟ್ ಗಚ್ಚಿನಿಂದ ರೂಪಗೊಳಿಸಲಾಗಿದೆ. ಪ್ರಮುಖವಾದ ಯಾವುದೇ ಚಾರಿತ್ರಿಕ ಸ್ಮಾರಕಗಳಲ್ಲಿ ನುರಿತ ತಜ್ಞರಿಂದ ಸ್ಮಾರಕದ ಮೂಲ ನಕ್ಷೆಯನ್ನು ಕಟ್ಟಡದ ಒಳಗೆ /ಹೊರಗೆ ಬಿಡಿಸಿದ್ದನ್ನು ಕಾಣುತ್ತೇವೆ. ಮೂರನೇ ದ್ವಾರದ ಮೇಲ್ ಗೋಡೆಯು 35ಅಡಿಗಳ ಎತ್ತರವಾಗಿದ್ದು 5ಅಡಿಗಳು ದಪ್ಪವಾಗಿದೆ.

ಈ ಕೋಟೆಗೋಡೆಯ ದಪ್ಪ 10ಅಡಿಯೊಳಗಿದ್ದರೆ 25ಅಡಿಗಳ ಎತ್ತರವಾಗಿದೆ.ಹಿಂಬದಿಯಿಂದ ಈಕೋಟೆಗೋಡೆಯು ಬಹಳ ಕಡಿದಾಗಿ ಮೇಲಕ್ಕೆ ಹೋಗಿದೆ. ಪ್ರತಿಯೋದು ಕೋನಗಳ ಕೇಂದ್ರದಲ್ಲಿ ಒಟ್ಟು 8ಬುರುಜುಗಳಿವೆ, ಪ್ರತಿಯೊಂದು ಬುರುಜಿನಲ್ಲಿ ಕಮಾನಾಕೃತಿಯ ಪ್ರವೇಶದ್ವಾರವಿದ್ದು ಒಳವೃತ್ತ ಸ್ಥಳದಲ್ಲಿ 4ಜನ ನಿಲ್ಲುವಷ್ಟು ಸ್ಥಳವಿದೆ.

ಕೆಲವು ಕಡೆ ಎರಡುಜನ ಮರೆಯಾಗುವಂತಹ ಗೂಡುಗಳಿವೆ. 8 ಬುರುಜುಗಳಲ್ಲಿ ಈಗಾಗಲೆ 2 ಶಿಥಲಗೊಂಡಿರುವುದನ್ನು ಪುನರ್ ನಿರ್ಮಾಣಮಾಡಲಾಗಿದೆ.ಕೋಣೆಯ ಪಕ್ಕದಲ್ಲಿ ಈ ಹಿಂದೆ ತಿಳಿಸಿದಂತೆ ಧಾನ್ಯ ಸಂಗ್ರಹದ ಕೋಣೆಗಳು ಪುನಃ ಸಿಗುತ್ತದೆ. ಮೊದಲನೆಯದರಲ್ಲಿ ದವಸಗಳನ್ನಿಡುವ ಕೋಣೆಗೆ ಇದು ವಿರುದ್ಧ ದಿಕ್ಕಿನಲ್ಲಿದೆ. ಇದರ ನಂತರ ಕುದುರೆಲಾಯಗಳು, ವಿಶ್ರಾಂತಿ ಗೃಹಗಳು ಪಾಕಶಾಲೆಗಳಿವೆ. ಇವೆಲ್ಲ ಕಮಾನುಗಳನ್ನೊಂದಿದೆ. ಇಲ್ಲಿ ಬಿದ್ದ ನೀರು ಹರಿದು ಹೊರಬರಲು ಸಣ್ಣ ಕಾಲುವೆಯೊಂದು ಹೊರಕ್ಕೆಬರುತ್ತದೆ. ಮುಂದೆ ಪೂರ್ವದಿಕ್ಕಿನಲ್ಲಿ 8–10 ಕೋಣೆಗಳನ್ನು ನಿರ್ಮಿಸಬಹುದಾದಷ್ಟು ಸ್ಥಳದಲ್ಲಿ ಅಪೂರ್ಣವಾದ ಕಟ್ಟಡಗಳ ಸುಳಿವುಗಳಿವೆ. ಇವೆಲ್ಲ ನಿರ್ಮಾಣವಾದುದು ಕೇವಲ ಶೇ.60 ಭಾಗದಷ್ಟು ಮಾತ್ರ ಇನ್ನುಳಿದ ಶೇ 40 ಭಾಗ ಕಟ್ಟಿಸಲು ಯೋಚಿಸಿ ಮೊದಲ ಹಂತ ನಿರ್ಮಿಸಿದ ಸಾಕ್ಷಿಗಳು ನಮಗೆ ಗೋಚರವಾಗುತ್ತದೆ.

ಫಿರಂಗಿಗಳನ್ನು ಮೇಲಕ್ಕೆ ಕೊಂಡೊಯ್ಯಲು ಸುಲಭವಾಗಲೆಂದು ಹೀಗೆ ಮಾಡಲಾಗಿದೆ. ಕೋಟೆಯಮೇಲೆ ಅಂಚಿನುದ್ದಕ್ಕು 3ಅಡಿ ಎತ್ತರದ 1 ವರೆ ಅಡಿ ಅಗಲದ ಗೋಡೆಯು ಉತ್ತು ಬಳಸಿದ್ದು 20 ಅಡಿಗೊಮ್ಮೆ ಈ ರೀತಿಯ ಕಿರಿದಾರಿಗಳನ್ನು ಮಾಡಿದ್ದು ಕಡಿದಾದ ಮತ್ತು ಹಿಂದಿನಿಂದ ಏರಲು ಸಾದ್ಯವಿಲ್ಲದಷ್ಟು ಅಪಾಯದಿಂದ ಕೂಡಿವೆ.

ಇವನ್ನು ಒಂದರಪಕ್ಕ ಒಂದನ್ನು ಅಡ್ಡವಾಗಿ ಇಟ್ಟ ಇಟ್ಟಿಗೆಗಳಿಗೆ ಕಾಂಕ್ರೀಟುಹಾಕಿ ಬಿಗಿಗೊಳಿಸಲಾಗಿದೆ. ಪ್ರತಿಯೊಂದು ಈ ರೀತಿ ಮಾದರಿಗಳು ಒಂದುವರೆ ಅಗಲದಿಂದ ಕಡಿದಾಗಿ 4–8–10–12 ಅಡಿಗಳವರೆಗೆ ಕೆಳಮುಖವಾಗಿ ಹೋಗಿವೆ.ಒಟ್ಟು ಕೋಟೆಯ ಕೇಂದ್ರ ಬಿಂದುವಿನಲ್ಲಿ + ಆಕಾರದ 40*40 ಅಡಿಗಳ ಅಳತೆಯ ಕೊಳವಿದ್ದು 40 ಅಡಿಗಳ ಆಳದಿಂದನೀರು ಸಂಗ್ರಹವಾಗುತಿತ್ತು. ಆದ್ದರಿಂದ ತಳಪಾಯ ಕಾಣುತಿದ್ದು ಇದೀಗ ಸ್ವಚ್ಚಗೊಳಿಸಲಾಗಿದೆ.

ನಾಲ್ಕೂದಿಕ್ಕಿನಲ್ಲಿಯೂ 10ಅಡಿ ಅಗಲವಾದ ಮೆಟ್ಟಿಲುಗಳುಳ್ಳ ದಾರಿಯು 20ಅಡಿಗಳ ಕೆಳಗಿನವರೆಗೂ ಹೋಗಿದೆ. ಈ ಕೊಳದ ಸುತ್ತಲೂ ರಕ್ಷಣಾಗೊಡೆ ಇಲ್ಲದೆ ಮಳೆ ಮತ್ತು ಗಾಳಿಗೆ ಮಣ್ಣು ಮತ್ತು ಕೊಳಕುನೀರು ಈ ಕೊಳಕ್ಕೆ ಬಿದ್ದಿದ್ದರ ಪರಿಣಾಮವಾಗಿ ಕೆಳಗೆ ದುರ್ಗಂಧ ನೀರು, ಗಿಡ ಗಂಟೆಗಳು ಬೆಳೆಯಲು ಅವಕಾಶವಾಗುತ್ತದೆ.

ಈ ತರಹದ ಕೊಳವು ಟಿಪ್ಪು ಕಟ್ಟಿಸಿದ ಯಾವ ಕೋಟೆಯಲ್ಲು ಕಾಣಬರುವುದಿಲ್ಲ. ಈ ಕೋಟೆಯು ಗಿರಿದುರ್ಗವಾದ್ದರಿಂದ ಮೇಲಕ್ಕೆ ನೀರನ್ನು ತರುವ ಸಮಸ್ಯೆಯನ್ನು ನೀಗಲಿಕ್ಕಾಗಿ ಈ ರೀತಿ ಮಾಡಲಾಗಿದೆ. ಕೋಟೆಗೆ ಈ ಕೊಳವು ಭೂಷಣ ಪ್ರಾಯವಾಗಿದೆ. ನಕ್ಷತ್ರಗಳ ಮೂಲೆಯಿಂದ ಸಮಾನಾಂತರವಾಗಿ ಈ ಕೊಳವು 180 ಅಡಿಗಳ ಅಂತರದಲ್ಲಿದೆ.

ಈ ಕೊಳದ ಅನತಿದೂರದಲ್ಲಿ 2ಮದ್ದಿನ ಮನೆಗಳಿವೆ. ಇವುಗಳು ಪಿರಮಿಡ್ ಆಕೃತಿಯನ್ನು ಹೋಲುತಿದ್ದು ಕೋಟೆಯ ಒಳಾಂಗಣದ ಸಮತಟ್ಟದಿಂದ 15ಅಡಿಗಳ ಕೆಳಭಾಗದಲ್ಲಿ 6*15 ಅಡಿಗಳ ಒಂದೊಂದು ಅಂಕಣಗಳಿವೆ.ಭೂಮಿಯಮೇಲೆ 8ಅಡಿ ಎತ್ತರದಲ್ಲಿ ತ್ರಿಕೋನಾಕೃತಿಯನ್ನು ಹೊಂದಿದೆ. ಕೋಟೆಯ ಪೂರ್ವದಿಕ್ಕಿನಲ್ಲಿರುವ 5*3 ಅಡಿಗಳ ಉದ್ದಗಲದ 2 ಮದ್ದಿನ ಮನೆಗಳಿಗೆ ಚೌಕಾಕಾರದ ಬಾಗಿಲುಗಳಿವೆ.

ಮೆಟ್ಟಿಲುಗಳಿಂದ ದಕ್ಷಿಣದಿಕ್ಕಿಗೆ ಇಳಿದರೆ ಪೂರ್ವ ದಿಕ್ಕಿನಲ್ಲಿ ಕತ್ತಲೆಯಿಂದ ಆವರಿಸಿದ ಕೋಣೆಗಳಿವೆ. ಮೇಲಿನಿಂದ ಬೆಳಕುಹರಿಯಲು ಕಿರಿಕಿಂಡಿಗಳಿದ್ದರು ಅಗತ್ಯವಿದ್ದಷ್ಟು ಬೆಳಕು ಇಲ್ಲ. ಬೆಳಕಿಗಾಗಿ ಅಲ್ಲಲ್ಲಿ ಮಾಡುಗಳನ್ನು ಮಾಡಲಾಗಿದೆ. ಗಾರೆಯಿಂದ ನಿರ್ಮಿಸಿದ ಈ ಕಟ್ಟಡಕ್ಕೆ ಅಂದೇ ಸುಣ್ಣವನ್ನು ಬಳಿಯಲಾಗಿದ್ದು. ಇಂದಿಗೂ ಕೂಡ ಹೊಳಪುನೀಡುತ್ತದೆ. ಭೂಮಿಯ ಮೇಲೆ ಮದ್ದು ಅರೆಯುವಂತ ಕ್ರಿಯೆಗಳನ್ನು ಮಾಡಿದರೆ ಗಾಳಿ ಬಿಸಿಲು ಮತ್ತು ಕಿಡಿಗಳಿಂದ ಅಪಾಯವಾಗ ಬಹುದೆಂಬ ಕಾರಣದಿಂದ ಮದ್ದು ತಯಾರಿಸುವ ಕೋಣೆಗಳನ್ನು ನೆಲ ಅಂತಸ್ಥಿನಲ್ಲಿ ಮಾಡಿರಬಹುದು.

ಟಿಪ್ಪು ಕಟ್ಟಿಸಿದ್ದ ಅನೇಕ ಕೋಟೆಗಳಲ್ಲಿ ಈ ರೀತಿಯ ವ್ಯವಸ್ಥೆಯನ್ನು ಕಾಣಬಹುದಾಗಿದೆ. ಆದರೆ ಮೇಲಿನಿಂದ ಕೆಳಕ್ಕೆ ಇಳಿಯಲಾಗದ ಜನರು ಇದೇ ಸುರಂಗಮಾರ್ಗ,ಇಲ್ಲಿಂದಲೆ ಬೇರೆಡೆಗೆ ಹೋಗಬಹುದೆಂದು ಊಹಿಸುತ್ತಾರೆ.

ಮೇಲ್ಭಾಗದಲ್ಲಿ ಮದ್ದಿನ ಕಚ್ಚವಸ್ತುಗಳನ್ನು ಸಂಸ್ಕರಿಸಿ ಜವಬ್ದಾರಿಯಿಂದ ಕೆಳಮಳಿಗೆಯಲ್ಲಿ ಶೇಕರಿಸಿಡಲಾಗುತ್ತಿತ್ತು. ಒಟ್ಟಾರೆ ಈ ಕೋಟೆಯು ಪರಿಪೂರ್ಣವಾಗಿ ಕಟ್ಟಲ್ಪಟ್ಟಿದ್ದರೆ ಕರ್ನಾಟಕದಲ್ಲಿಯೇ ವಿಶಿಷ್ಟವಾದ ಭದ್ರವಾದ ಕೋಟೆ ಎನಿಸುತಿತ್ತು. ಶೇ 60ಭಾಗ ಕಲ್ಪನೆಯಂತೆ ಪೂರ್ಣಗೊಳಿಸಿದ್ದು ಇನ್ನು ಶೇ 40ರಷ್ಟು ಭಾಗ ಅಂದರೆ ಒಳ ಕಮಾನುಗಳ ಮುಂದಿನ ಅಂಕಣ ಅಲಂಕರಣಗಳು ಪೂರ್ಣಗೊಳ್ಳಲಿಲ್ಲ. ಇದಕ್ಕೆ ಕಾರಣ ಹಲವು ಇರಬಹುದು.

ಕಲ್ಲಿನಕೋಟೆಗೆ ಅಂಟಿಕೊಂಡಂತೆ 10ಅಡಿ ಅಗಲದ 10ಅಡಿ ಆಳವಾದ, ಕಡಿದಾದ ಕಂದಕವೊಂದಿದ್ದು ಈ ಕಂದಕದಿಂದ 10–12–15–20 ಅಡಿಗಳ ಅಂತರದಲ್ಲಿ ಗುಡ್ಡದ ಅಂಚಿಗೆ ಅಂಟಿಕೊಡಂತೆ 2ಅಡಿ ಅಗಲ 4ಅಡಿ ಎತ್ತರದ ಗಾರೆಯಿಂದ ಭದ್ರಗೊಳಿಸಿದ ಇಟ್ಟಿಗೆಯ ಹೊರಕೋಟೆ ಇದೆ.

ಈಗ ಇದು ಕೂಡ ನಾಮಾವಶೇಷವಾಗುತಿದ್ದು ಕೆಲವುಕಡೆ ಕುರುಹುಗಳೇ ಕಾಣಿಸುತ್ತಿಲ್ಲ. ಈ ಹೊರ ಕೋಟೆಯನ್ನು ಮೂಲಕೋಟೆ ಕಟ್ಟಿಸಿದ ನಂತರದ ದಿನಗಳಲ್ಲಿ ಭದ್ರತೆಯ ದೃಷ್ಟಿಯನ್ನರಿತು ಕಟ್ಟಾಲಾಗಿದೆ.

ಇದರ ಒಳಭಾಗದಲ್ಲಿ ಶಸ್ತ್ರ ಸಜ್ಜಿತ ಸೈನಿಕರು, ಕಾವಲು ಕಾಯುತಿದ್ದರು. ಒಟ್ಟಿನಲ್ಲಿ ಇದೊಂದು ಟಿಪ್ಪುವಿನ ಕಾಲದಲ್ಲಿ ಅಭೇದ್ಯ ಕೋಟೆಯಾಗಿ ಪರಿಣಮಿಸಿತ್ತು. ಈ ಹೊರ ಕೋಟೆಯ ನೈರುತ್ಯ ದಿಕ್ಕಿನ ಒಳಭಾಗದಲ್ಲಿ ಮೂರು ಸಮಾಧಿಗಳಂತಹ ಗುರುತುಗಳಿವೆ. ಇವು ನಶಿಸಿಹೋಗಿ ಈಗ ಕೇವಲ ಮಣ್ಣಿನ ಗುಡ್ಡೆಗಳಾಗಿ ಕಾಣುತ್ತವೆ. ಇವು ಪ್ರಾಯಶಃ ಟಿಪ್ಪು ಕಡೆಯ ಸೈನಿಕರದ್ದಾಗಿವೆ ಎಂದು ಸ್ಥಳೀಯರ ಅಭಿಪ್ರಾಯ.

ಸಮಾದಿಗಳಂತೆ ತೋರುವ ಈ ಮಣ್ಣಿನ ಗುಡ್ಡೆಗಳ ಹಿನ್ನೆಲೆಯಾಗಿ ಒಂದು ವಾಸ್ತವ ಕಥೆಯು ಈ ಭಾಗದಲ್ಲಿ ಪ್ರಚಲಿತವಾಗಿದೆ. ಟಿಪ್ಪುಹುಲಿ ಎಂದೆ ಖ್ಯಾತನಾಗಿದ್ದ ಅಂದಿನ ದಿನಗಳಲ್ಲಿ ಆತನನ್ನಾಗಲೀ, ಅವನ ಸೈನ್ಯದ ಠಿಕಾಣಿಯನ್ನಾಗಲಿ ದಮನಮಾಡಬೇಕೆಂದು ಬ್ರಿಟೀಷ್ ಅಧಿಕಾರಿಗಳು ಹೊಂಚುಹಾಕುತಿದ್ದರು.

ಒಂದುದಿನ ಕೆಲವು ಬ್ರಿಟೀಷ್ ಸೈನ್ಯಾಧಿಕಾರಿಗಳು ಟಿಪ್ಪುವಿನ ಗಟ್ಟಿಯಾದ ಮತ್ತು ಸಂಪದ್ಭರಿತ ಕೋಟೆಯನ್ನು ವಶಪಡಿಸಿಕೊಳ್ಳಲು ಪ್ರಾಯಶಃ ಮಂಗಳೂರು ದಿಕ್ಕಿನಿಂದ ಈ ಮಂಜ್ರಾಬಾದ್ ಕೋಟೆಯಡೆಗೆ 4–6 ಜನ ಸೈನ್ಯಾಧಿಕಾರಿಗಳು ಕುದುರೆಗಳ ಮೇಲೆ ದಾವಿಸಿ ಬರುತಿದ್ದರು. ಈ ಪ್ರಕರಣವು ಕೋಟೆಕಟ್ಟಿಸಿದ ನಂತರದ ಸಂದರ್ಭವಾಗಿರಬಹುದು. ಮೊದಲು ಕೋಟೆಯಮೇಲಿನ ಸೈನಿಕರನ್ನು ಸದೆ ಬಡಿದು ಒಳಗೆನುಗ್ಗಿ ಕೋಟೆಯನ್ನುವಶಪಡಿಸಿಕೊಳ್ಳುವುದರ ಮೂಲಕ ಕೊಲ್ಲಿಸುವ ಯೋಜನೆ ಬ್ರಿಟೀಷರದಾಗಿತ್ತು. ದೂರದಿಂದಲೇ ಬ್ರಿಟೀಷ್ ಅಧಿಕಾರಿಗಳು ಕೋಟೆಯೆಡೆಗೆ ದಾವಿಸಿ ಬರುತ್ತಿರುವುದನ್ನು ಮನಗಂಡ ಸೈನಿಕರು ಕೋವಿಗಳಿಂದ ಸಣ್ಣ ಸಣ್ಣ ತುಪಾಕಿಯಿಂದ ಅದರೆಡೆಗೆ ಗುಂಡುಗಳನ್ನು ಹಾರಿಸಲಾರಂಬಿಸಿದರು. ಆ ಕೂಡಲೆ ಕಾರ್ಯ ಸಫಲವಾಗಲಿಲ್ಲವೆಂದು ಅರಿತ ಕೋಟೆಯ ಮೇಲಿನ ಅಸಂಖ್ಯಾತ ಸೈನಿಕರನ್ನು ಕಂಡು ಬ್ರಿಟೀಷ್ ಸೈನಿಕರು ಓಟಕಿತ್ತರು.

ಈ ಕಡೆ ದಾಳಿಯಿಂದ ಮರಣಹೊಂದಿದ ಟಿಪ್ಪುವಿನ ಸೈನಿಕರ ಶವಗಳನ್ನು ಆಯಾಯ ಸ್ಥಳದಲ್ಲಿಯೇ ಅಂತ್ಯಕ್ರಿಯೆ ಮಾಡಲಾಯಿತು. ಪ್ರಸಕ್ತಮಳೆಗಾಳಿಯ ಒಡೆತಕ್ಕೆ ಸಮಾದಿಗಳು ಹಾಳಾಗಿ ದಿಬ್ಬದಂತೆ ಕಾಣಲಾರಂಬಿಸಿದವು. ಇದರ ಕೆಳಭಾಗದ ನಾಲ್ಕುದಿಕ್ಕುಗಳಲ್ಲಿ ಮಡಿದ ಸೈನ್ಯಾಧಿಕಾರಿಗಳ ಜನನ ಮರಣ ಮತ್ತು ಸೇವೆಯ ವಿವರ ಪರಾಕ್ರಮಗಳೆಲ್ಲವನ್ನು ಬರೆಯಿಸಲಾಯಿತು. ಈ ಸ್ಥೂಪದ ರಕ್ಷಣೆಗಾಗಿ ವರ್ಷಕ್ಕೊಮ್ಮೆ ಸುಣ್ಣ ಬಣ್ಣ ಮಾಡಿಸಲೆಂದು ಒಬ್ಬರಿಗೆ ನೇಮಿಸಲಾಗಿತ್ತಂತೆ.

ಕಾಲ ನಂತರ ಈ ಸ್ಥೂಪದ ಕಡೆ ಗಮನಹರಿಸದೆ ಇರುವುದರಿಂದಾಗಿ ಗೋರಿ ಬಿದ್ದು ಹೋಯಿತು. ಕಲ್ಲುಗಳು ದುರ್ಬಳಕೆಯಾದವು. ಈ ಸಮಾದಿಗೆ ಇಲ್ಲಿಯ ಜನರು ಫರಂಗಿಗೋರಿ ಎಂದು ಕರೆಯುತ್ತಾರೆ. ಈ ಕಾರಣದಿಂದಾಗಿ ಅಧಿಕಾರಿಯ ದಾಖಲೆಗಳು ಇಂದಿನ ಇತಿಹಾಸಕಾರರಿಗೆ ಲಭ್ಯವಾಗಲಿಲ್ಲ.

ಕೋಟೆಯ ಮೇಲೆ ಮಡಿದ ಸೈನಿಕರ ಸಮಾಧಿಯ ಪಕ್ಕದಲ್ಲಿಯೂ ಸೈನಿಕರ ಹೆಸರು ಇತರೆ ವಿಷಯಗಳನ್ನು ಪರ್ಶಿಯನ್ ಭಾಷೆಯಲ್ಲಿ ದಾಖಲಿಸಿ ಶಾಸನವೊಂದನ್ನು ನಿಲ್ಲಿಸಲಾಗಿತ್ತು. 1987 ಪುರತತ್ವ ಇಲಾಖೆಯವರು ಶಾಸನದ ನಕಲನ್ನು ತೆಗೆದುಕೊಂಡು ಹೋಗಿದ್ದರು ಇದರ ವರದಿಯನ್ನುಇನ್ನೂ ಪ್ರಕಟಿಸಿಲ್ಲ.

ಕಾಲಾ ನಂತರದಲ್ಲಿ ಅದುಕೂಡ ನಾಶವಾಗಿ ಟಿಪ್ಪುಸೈನಿಕರ ವಿಷಯಗಳು ಲಭ್ಯವಾಗಿಲ್ಲ. ಈಗ ದೊರೆತಿರುವ ವಿಷಯವು ಬಾಯಿಯಿಂದ ಬಾಯಿಗೆ ತಲೆಮಾರುಗಳಿಂದ ತಿಳಿಯುತ್ತ ಬಂದದ್ದನ್ನು ಇಲ್ಲಿ ದಾಖಲಿಸಲಾಗಿದೆ. ಆದರೆ ಸೈನಿಕರದ್ದೆಂದು ಹೇಳಲಾಗುವ ಈ ಸಮಾದಿಗಳ ಬಗ್ಗೆ ಸಂಶೋಧಕಶ್ರೀವತ್ಸಎಸ್. ವಟಿಯವರು ಇವು ಬ್ರಿಟೀಷರ ಕಾಲದಲ್ಲಿ ಜಮೀನುಗಳ ಅಳತೆಗಾಗಿ ಮಾಡಿದ್ದ ಮೋಜಣಿ ಗುರುತುಗಳು. ಹಾಗಾಗಿ ಸೈನಿಕರನ್ನು ಬೇರೆಡೆಗೆ ದಫನ್ ಮಾಡಿರಬಹುದೆಂದು ಹೇಳುತ್ತಾರೆ.

1956ರ ಪ್ರಾಚ್ಯವಸ್ತು ಸಂರಕ್ಷಣೆ ಕಾಯ್ದೆಯಡಿ ಈ ಕೋಟೆ ಪ್ರಾಚ್ಯ ಇಲಾಖೆಯ ಸ್ಮಾರಕಾವಾಗಿ ಮಾರ್ಪಟ್ಟಿದ್ದು ಇದನ್ನು ಕಾಯಲು ಕಾವಲುಗಾರನನ್ನು ನೇಮಕಮಾಡಲ್ಪಟ್ಟಿದೆ. ಈ ಕೋಟೆಗೆ ಹೋಗಲು ಎನ್. ಹೆಚ್ 75ರ ರಾಷ್ಟೀಯ ಹೆದ್ದಾರಿ 5 ಕಿ.ಮೀ. ತಿರುವು ರಸ್ತೆಗಳನ್ನು ದಾಟಿಹೋದರೆ ಮಂಜ್ರಾಬಾದ್ ಕೋಟೆ ಸಿಗುತ್ತದೆ. ಇಲ್ಲಿ ಹೋಟೆಲ್‌ಗಳು, ಒಂದಿಷ್ಟು ವಾಸದ ಮನೆಗಳು ಸಿಗುತ್ತವೆ. 1923ರಲ್ಲಿಯೇ ತಯಾರಿಸಲ್ಪಟ್ಟ ನಕಾಶೆಯ ಪ್ರಕಾರ ಕೋಟೆಗೆ ಹೋಗುವ ರಸ್ತೆಯು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಎಡ ಭಾಗದಲ್ಲಿದೆ.

ಟಿಪ್ಪು ಸುಲ್ತಾನ್ ಗುಡ್ಡದ ಮೇಲೆ ಗಟ್ಟಿ ಮುಟ್ಟಾದ ಕೋಟೆಯನ್ನೇನೋ ವಿವಿದ ಕಾರಣಕ್ಕಾಗಿ ಕಟ್ಟಿಸಿದ್ದು ನಿಜ. ಕಾಲದ ಹೊಡೆತಕ್ಕೆ ಸಿಲುಕಿದ ಈ ಕೋಟೆ ನಲುಗಿ ಅವಶೇಷವಾಗುವ ಹಂತ ಇದೀಗ ತಲುಪಿದೆ. ಕಮಾನುಗಳು ಬಿರುಕು ಬಿಟ್ಟು ನೀರು ಸೋರುತ್ತಲಿದ್ದು. ಕಳ್ಳಕಾಕರ ಪಾಲಾಗಿ ಮಣ್ಣು ಶೇಕರಗೊಂಡಿದೆ. ಕೆಲವು ಒಳಕೋಣೆಗಳಿಗೆ ಬೆಳಕಿನ ವ್ಯವಸ್ಥೆ ಇಲ್ಲದೆ ಗಲೀಜು ತುಂಬಿ ದುರ್ವಾಸನೆ ಬರುತ್ತಿದೆ.

ಲ್ಯಾಟ್ರಿನ್ ಮಾದರಿಯ ಕೋಣೆಯಲ್ಲಿನ ಶೌಚಲಯದ ಮುಕ್ಕಾಲುಭಾಗ ಮುಚ್ಚಿಹೋಗಿದೆ. ವಿಕೃತ ಪ್ರೇಮಿಗಳಿಂದ ಅಕ್ಷರಗಳು ಕೆತ್ತಲ್ಪಟ್ಟಿದ್ದು ಗೋಡೆಗಳು ವಿರೂಪಗೊಂಡಿವೆ. ಗೈಡ್‌ಗಳು ಒಬ್ಬರು ಈ ಹಿಂದೆ ಇಲ್ಲದಿದ್ದರಿಂದ ಈ ಕೋಟೆಯ ಐತಿಹಾಸಿಕ ವಿವರ ತಿಳಿಯದಾಗಿದೆ.

#ಮಂಜ್ರಾಬಾದ್ ಕೋಟೆಯ ಮೇಲೆ ಬೀಳುವ #ಮಳೆನೀರು ಎರಡು #ಮಹಾಸಾಗರ ಸೇರುತ್ತದೆ

ಕೋಟೆಯ ಮೇಲೆ ಬೀಳುವ ನೀರು ಇಬ್ಬಾಗವಾಗಿ ಅರಬ್ಬಿ ಸಮುದ್ರ ಮತ್ತು ಬಂಗಾಳ ಕೊಲ್ಲಿ ಸೇರುವ ಜಗತ್ತಿನ ಏಕೈಕ ಕೋಟೆ ಎಂದರೇ ಅದು ಸಕಲೇಶಪುರದ ಮಂಜ್ರಾಬಾದ್ ಕೋಟೆಯಾಗಿದೆ.

ಸಮುದ್ರಮಟ್ಟದಿಂದ ಮಂಜ್ರಾಬಾದ್ ಕೋಟೆಯು 988 ಮೀಟರ್ ಎತ್ತರದಲ್ಲಿದೆ. ಪಶ್ಚಿಮ ಘಟ್ಟಗಳ ವ್ಯಾಪ್ತಿಗೆ ಒಳ ಪಡುವ ಮಲೇಯಾದ್ರಿ ಪರ್ವತ ಶ್ರೇಣಿಯಲ್ಲಿದ್ದು, ಪೂರ್ವ ಮತ್ತು ಪಶ್ಚಿಮ ಭೂ ಗಡಿ ರೇಖೆಯ ಮದ್ಯದ ಬೆಟ್ಟದಲ್ಲಿ ನಿರ್ಮಿತವಾಗಿರುವ ಮಂಜ್ರಾಬಾದ್ ಕೋಟೆಯ ಮೇಲೆ ಬೀಳುವ ಮಳೆನೀರು ಪಶ್ಚಿಮ ಮುಖವಾಗಿ ಅರಬ್ಬಿ ಸಮುದ್ರಕ್ಕೂ ಪೂರ್ವ ಮುಖವಾಗಿ ಬಂಗಾಳ ಕೊಲ್ಲಿಗೂ ಸೇರುತ್ತದೆ.

ಮಂಜ್ರಾಬಾದ್ ಕೋಟೆಯ ಪಶ್ಚಿಮಭಾಗದಲ್ಲಿ ಬಿದ್ದ ಮಳೆಯ ನೀರು ಎತ್ತಿನ ಹಳ್ಳ ನಂತರ ಕೆಂಪು ಹಳ್ಳ ನಂತರ ಎಳನೀರು ನದಿ, ಗುಂಡ್ಯನದಿ ಯೊಂದಿಗೆ ಕುಮಾರದಾರ ಮೂಲಕ ನೇತ್ರವತಿ ನದಿಯ ಸೇರಿ ಅನಂತರ ಉಲ್ಲಾಳ ಬಳಿ ಅರಬ್ಬಿ ಸಮುದ್ರ ಸೇರುತ್ತಿದೆ.

ಪೂರ್ವಬಾಗದಲ್ಲಿ ಬಿದ್ದ ನೀರು ಹೇಮಾವತಿ ನದಿಯ ಮೂಲಕ ಕಾವೇರಿ ನದಿಗೆ ಸಂಗಮವಾಗಿ ಚೆನ್ನೈ ಬಳಿ ಬಂಗಾಳ ಕೊಲ್ಲಿ ಸೇರುತ್ತದೆ.

ಒಂದು ನಿರ್ದಿಷ್ಟ ಪ್ರದೇಶಕ್ಕೆ ಬೀಳುವ ಮಳೆಯ ನೀರು ಎರಡು ಸಾಗರಗಳಿಗೆ ಇಬ್ಬಾಗವಾಗಿ ಹರಿಯುತ್ತದೆ ಎನ್ನುವ ಮಾಹಿತಿಯನ್ನು ಆದರಿಸಿ ಈ ಬೆಟ್ಟದ ಮೇಲೆ ಕೋಟೆ ಕಟ್ಟಲು ಕಾರಣವಾಗಿರಬಹುದು.

ಈ ಬಗ್ಗೆ ಸರಕಾರ ಮತ್ತಷ್ಟು ಮಾಹಿತಿ ಸಂಗ್ರಹಿಸುವ ಅಗತ್ಯವಿದೆ.

ನೀರು ಇಬ್ಬಾಗವಾಗಿ ಅರಬ್ಬಿ ಸಮುದ್ರ ಮತ್ತು ಬಂಗಾಳ ಕೊಲ್ಲಿ ಸೇರುವ ಸ್ಥಳವಾಗಿ ಸಕಲೇಶಪುರ ತಾಲ್ಲೂಕು ಬಿಸ್ಲೆ ಸಮೀಪ ಮಂಕನಹಳ್ಳಿಯಲ್ಲಿ ಬ್ರಿಟೀಷರು ಬ್ರಿಡ್ಜ್ ನಿರ್ಮಿಸಿದ್ದು 'ವೇ ಆಫ್ ಬೆಂಗಾಲ್ ಮತ್ತು ಅರಬಿಯನ್ ಸೀ' ಎಂಬ ನಾಮ ಫಲಕವನ್ನು ನೋಡಬಹುದಾಗಿದೆ.

ಸಕಲೇಶಪುರಕ್ಕೆ ಹತ್ತಿರವಾಗಿ ಕಂಡುಬರುವ ಮತ್ತೋಂದು ಪ್ರದೇಶವೆಂದರೇ 4 ಕಿ ಮೀ ದೂರದಲ್ಲಿರುವ ದೋಣಿಗಾಲ್ ಸಮೀಪದ ಮಂಜ್ರಾಬಾದ್ ದರ್ಗಾವಾಗಿದೆ.

ದರ್ಗಾದ ಕಾಣಿಕೆ ಹುಂಡಿ ಮುಂಭಾಗದ ಬೆಂಗಳೂರು ಮತ್ತು ಮಂಗಳೂರು ಹೆದ್ದಾರಿ ಮೇಲೆ ಬೀಳುವ ನೀರು ಇಬ್ಬಾಗವಾಗಿ ಅರಬ್ಬಿ ಸಮುದ್ರ ಮತ್ತು ಹಿಂದೂ ಮಹಾಸಾಗರಕ್ಕೆ ಸೇರುತ್ತದೆ.

ರುದ್ರ ರಮಣೀಯ ಸೂರ್ಯೋದಯ ಮತ್ತು ಸೂರ್ಯಸ್ತಮ:

ಮಂಜ್ರಾಬಾದ್ ಕೋಟೆಯ ಮೇಲೆ ಸೂರ್ಯೋದಯ ಮತ್ತು ಸೂರ್ಯಸ್ತಮ ವೀಕ್ಷಣೆ ಒಂದು ರೋಮಾಂಚನ ಅನುಭವವಾಗಿದೆ. ಮೋಡಗಳ ಮದ್ಯೆ ಮುಂಜಾನೆ ಮೂಡುವ ಸೂರ್ಯನ ಕಿರಣಗಳು ಪಶ್ಚಿಮ ಘಟ್ಟಗಳ ನಿಸರ್ಗ ಸೌಂದರ್ಯದ ಮೇಲೆ ಬೀಳುವ ಮೊದಲು ದೃಷ್ಯದಲ್ಲಿ ಮಂಜುಕಂಡುಬಂದರೆಕೆಲವೇ ಸಮಯದಲ್ಲಿ ಮಂಜು ಕರಗಿ ಕಣ್ಣಿನ ಮುಂದೆ ಪ್ರಕೃತಿ ಸೌಂದರ್ಯದ ರಾಶಿ ತೆರೆದುಕೊಳ್ಳುತ್ತದೆ. ಸಂಜೆಯ ಸೂರ್ಯಸ್ತಮ ಸುಂದರ ಅನುಭವ ನೀಡುತ್ತದೆ.

ದುಖಃಕರ ವಿಚಾರವೆನೆಂದರೇಸೂರ್ಯೋದಯ ಮತ್ತು ಸೂರ್ಯಸ್ತಮ ವೀಕ್ಷಣೆಗೆ ಇಲ್ಲಿ ಅವಕಾಶವಿಲ್ಲದಂತಾಗಿದೆ.

ಮುಖ್ಯವಾಗಿ ಗುಡ್ಡದ ಮೇಲಿನ ಕೋಟೆಯ ಒಳಾವರಣವನ್ನು ವೀಕ್ಷಿಸಬೇಕೆಂದು ವೃದ್ದರು ಹೋಗಿಬರಲು ಗುಡದ ಬುಡದಿಂದ ರೋಪ್ ವೇ ಕಲ್ಪಿಸಿದರೆ ಸಂಪೂರ್ಣವಾಗಿ ಟಿಪ್ಪುವಿನ ಕೋಟೆಯ ಕಲಾ ಕೌಶಲ್ಯದ ಅರಿವಾಗುತ್ತದೆ. ಇದಲ್ಲದೆ ಕೋಟೆಗೆ ಸಂಬಂಧಿಸಿದಂತೆ ಭಿತ್ತಿ ಪತ್ರಗಳು, ಕರ ಪತ್ರಗಳು, ಚಿತ್ರ ಪಟಗಳನ್ನು ಮಾಡಿಸಿ ಪ್ರಚಾರ ಪಡಿಸಿದರೆ ದೇಶ ವಿದೇಶಗಳ ಪ್ರವಾಸಿಗರಿಗೆ ಅರಿವು ಮೂಡಿಸಿದಂತಗುತ್ತದೆ.

ಭಿತ್ತಿಪತ್ರ, ಕರಪತ್ರ, ಭಾವಚಿತ್ರಗಳು ಭಾರತೀಯ ಎಲ್ಲಾ ಭಾಷೆಗಳಲ್ಲಿದ್ದರೆ ಉಪಕಾರ ಮಾಡಿದಂತಾಗುತ್ತದೆ. ಇದಕ್ಕೆಲ್ಲಾ ಸಂಪರ್ಕ ಕಲ್ಪಿಸಬೇಕಾದರೆ ಸಕಲೇಶಪುರ ಕೇಂದ್ರ ಸ್ಥಳದಿಂದ ಕೋಟೆಯ ದರ್ಶನಕ್ಕೆಂದೇ ವಿಶೇಷವಾಗಿ ವಾಹನಗಳನ್ನು ಕಲ್ಪಿಸಬೇಕಿದೆ. ನಿರ್ಮಿಸಬೇಕಾದ ಪುಟ್ಟ ಬಸ್ ನಿಲ್ದಾಣದ ಪಕ್ಕದಲ್ಲಿ ಒಂದು ವಿಶ್ರಾಂತಿ ಗೃಹವನ್ನು ಕಟ್ಟಿಸಿ ಅಲ್ಲಿ ಕೋಟೆಯ ಸಮಗ್ರ ಮಾಹಿತಿ ಮತ್ತು ಭಾವಚಿತ್ರಗಳನ್ನು ಅನಾವರಣ ಮಾಡಿದರೆ ಪ್ರವಾಸಿಗರ ನೆನಪಿನಲ್ಲಿ ಅಚ್ಚೊತ್ತಿದಂತಾಗುತ್ತದೆ. ಮೇಲುಗಡೆ ಕೋಟೆಯನ್ನು ನೋಡಲು ಹೋಗುವ ನೋಡುಗರಿಗೆ ಕುಡಿಯುವ ನೀರಿನ ವ್ಯವಸ್ಥೆಯೊಂದಿಗೆ ಕೋಟೆಯ ಪಶ್ಚಿಮ, ಪೂರ್ವ ದಿಕ್ಕಿನ ಸೌಂದರ್ಯವನ್ನು ವೀಕ್ಷಿಸಲು ಅನುಕೂಲವಾಗುವಂತೆ ವ್ಯೂ ಪಾಯಿಂಟ್ ನಿರ್ಮಿಸಿದರೆ ಬಂದಂತಹವರಿಗೆ ಕೋಟೆಯ ದರ್ಶನದೊಂದಿಗೆ ಗಿರಿ ಶಿಖರಗಳ ಸೃಷ್ಟಿ ಸೊಬಗಿನ ದರ್ಶನವನ್ನು ಮಾಡಿಸಿಕೊಟ್ಟಂತಾಗುತ್ತದೆ.ಈ ಎಲ್ಲಾ ಕಾರ್ಯಗಳು ಕೈಗೂಡಲು ಪ್ರವಾಸೋಧ್ಯಮ ಇಲಾಖೆ, ಕನ್ನಡ ಸಂಸ್ಕೃತಿ ಇಲಾಖೆ, ಪ್ರಾಚ್ಯ ಸಂಶೋಧನಾ ಇಲಾಖೆ ಒಟ್ಟಿಗೆ ಸೇರಿ ಒಮ್ಮನಸ್ಸು ಮಾಡಿದರೆ ಈ ಕೋಟೆಯನ್ನು ಪ್ರವಾಸಿ ತಾಣವನ್ನಾಗಿ ಮಾಡಬಹುದು. ಮಂಜ್ರಾಬಾದ್ ಕೋಟೆಯನ್ನು ಪ್ರವಾಸಿಗರ ಸ್ವರ್ಗವನ್ನಾಗಿಸೋಣ ಬನ್ನಿ.

**ಬರಹಗಾರರು –ರವಿ ನವಲಹಳ್ಳಿ**

ಕರುನಾಡ ಕಂದ
ಸಂಪುಟ–1 | ಸಂಚಿಕೆ–6
ದಿನಾಂಕ: 16–01–2022 | ಪುಟಗಳು: 20

# ಅನುಜ ಚಿತ್ರದ ಪೋಸ್ಟರ್ ಲಾಂಚ್ ಮಾಡಿದ ಮಜಾಭಾರತದ ಖ್ಯಾತ ನಟ ಚಿಲ್ಲರ್ ಮಂಜ



ಕನಸಿನ ಮೂಟೆ ಹೊತ್ತು ಬಣ್ಣದ ಲೋಕಕ್ಕೆ ಕಾಲಿಟ್ಟ ಗಿರಿನಾಡ ಯುವಕ. ಎಸ್. ಎಸ್. ರವಿ ಬಾಚವಾರ್ ಅವರ ಕನಸಿನ ಸಿನಿಮಾ. "ಅನುಜ" ಮೊನ್ನೆಯೆಸ್ಟ ಬೆಂಗಳೂರಿನ ಗಣೇಶ ದೇವಸ್ಥಾನದಲ್ಲಿ "ಅನುಜ" ಚಿತ್ರ ತಂಡದಿಂದ ಟೈಟಲ್ ಬಿಡುಗಡೆ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು. ಟೈಟಲ್ ಬಿಡುಗಡೆ ಕಾರ್ಯಕ್ರಮಕ್ಕೆ ವಿಶೇಷ ಅತಿಥಿಯಾಗಿ ಆಗಮಿಸಿದ ಮಜಾಭಾರತ ಖ್ಯಾತಿಯ ಚಿಲ್ಲರ್ ಮಂಜು ರವರು. ಶುಭ ಹಾರೈಸುವ ಮೂಲಕ ಯಾದಗಿರಿಯ ಯುವ ಪ್ರತಿಭೆಗಳಿಗೆ ಆಸರೆಯಾಗಿ ನಿಂತರು. ಯಾದಗಿರಿ ಜಿಲ್ಲೆಯ ಬಾಚವಾರ ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದ ಎಸ್. ಎಸ್. ರವಿ ಅವರ ನಿರ್ದೇಶನದ ಚಿತ್ರ ಇದಾಗಿದ್ದು ನಾಯಕನ ಪಾತ್ರಕ್ಕು ಸ್ವತಃ ತಾವೆ ಬಣ್ಣ ಹಚ್ಚಲಾಗಿದ್ದಾರೆ. ಇನ್ನು ದಾವಣಗೆರೆ ಮೂಲದ ಯುವತಿ ಅನುಶ್ರುತಿ ನಾಯಕಿಯಾಗಿ ನಟಿಸುತ್ತಿದ್ದು ಕೆಲವೇ ದಿನಗಳಲ್ಲಿ ಚಿತ್ರೀಕರಣ ಆರಂಭಿಸುವುದಾಗಿ ತಿಳಿಸಿದರು.

## ನಾಡಿನ ಸಮಸ್ತ ಜನತೆಗೆ ಗಣರಾಜ್ಯೋತ್ಸವದ ಹಾರ್ದಿಕ ಶುಭಾಷಯಗಳು.



**ಹನುಮೇಶ ಎಸ್ ಹುಳ್ಳಿಹಾಳ್**
ಸಾ॥ ಹುಲಿಹೈದರ
**ಬಿಜೆಪಿ ಯುವ ಮುಖಂಡರು**
ಹುಲಿಹೈದರ ಜಿಲ್ಲಾ ಪಂಚಾಯತ್ ಕ್ಷೇತ್ರ,
ತಾ–ಕನಕಗಿರಿ ಜಿ–ಕೊಪ್ಪಳ

# ಮಸೀದಿ ಬೇಗನೆ ಬಸದಿಯಾಗಲಿ – ಡಾ. ಎಸ್.ಕೆ. ಕೊಪ್ಪ



ವಿಜಯಪುರ – ಜೈನಕವಿ ನಾಗಚಂದ್ರನ ಕುರಿತು ಓದುವುದೆಂದರೆ ಭವ್ಯವಾದ ಒಂದು ಜೀವನವನ್ನೇ ಓದಿದಂತೆ. ರಾಜಾಶ್ರಯ ಪಡೆಯದ, ಶ್ರೀಮಂತನಾಗಿಯೇ ಇದ್ದ ನಾಗಚಂದ್ರನು ತನ್ನ ಸ್ವಂತ ಹಣದಲ್ಲಿ ನಿರ್ಮಿಸಿದ ವಿಜಯಪುರದ ಈಗಿನ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಇರುವ ಮಲ್ಲಿನಾಥನ ಬಸದಿ ಕರೀಮುದ್ದೀನ್ ಮಸೀದಿ ಎಂದು ಕರೆಯಲ್ಪಡುತ್ತಿದೆ. ಮನಸ್ಸಿಗೆ ಬಹಳ ನೋವಾಗುತ್ತದೆ. ಆದಷ್ಟು ಶೀಘ್ರ ಸೌಹಾರ್ದವಾಗಿ ಮಸೀದಿಯು ಬಸದಿ ಎಂದು ಕರೆಯಲ್ಪಟ್ಟರೆ ಅಷ್ಟೇ ಸಾಕು ; ಕವಿ ನಾಗಚಂದ್ರನು ಉಳಿದಂತೆಯೇ ಸರಿ ರನ್ನ, ಪೊನ್ನ, ಜನ್ನರನ್ನು ಉಳಿಸಿ ಬೆಳೆಸಿದಂತೆ ವಿಜಯಪುರದವರೆಲ್ಲರೂ ಕವಿ ನಾಗಚಂದ್ರನನ್ನು ಮರೆಯಾಗಿಸದೇ ಆತನನ್ನು ಹಾಗೂ ಆತನ ಕಾವ್ಯಸಿ–ರಿಯನ್ನು ಮೆರೆಸಬೇಕಿದೆ ಎಂದು ಸಂಶೋಧಕರಾದ ಡಾ. ಎಸ್.ಕೆ. ಕೊಪ್ಪ ಅಭಿಪ್ರಾಯಪಟ್ಟರು.

ಅವರು ನಿನ್ನೆ ಸಂಜೆ ವಿಜಯಪುರದ ಸಿದ್ಧೇಶ್ವರ ದೇವಸ್ಥಾನದ ಆವರಣದಲ್ಲಿನ ಫ.ಗು. ಹಳಕಟ್ಟಿ ಭವನದಲ್ಲಿ ಅಖಿಲ ಕರ್ನಾಟಕ ಜೈನ ನೌಕರರ ಒಕ್ಕೂಟ, ಅಭಿನವ ಪಂಪ ನಾಗಚಂದ್ರ ಪ್ರತಿಷ್ಠಾನ ಹಾಗೂ ಜೈನ ಯುವಕ ಸಂಘದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 'ನಾಗಚಂದ್ರ ಬದುಕು ಬರಹ ಹಾಗೂ ವಿಚಾರ ಸಂಕಿರಣ'ದಲ್ಲಿ ಉಪನ್ಯಾಸ ನೀಡಿ ಮಾತನಾಡಿದರು.

ನವದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾದ ಡಾ. ಬಾಳಾಸಾಹೇಬ ಲೋಕಾಪೂರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಾಗಚಂದ್ರನು ದಕ್ಷಿಣದ ತಲಕಾಡಿನವನು ಎಂದು ತಿಳಿದುಕೊಂಡಿದ್ದ ನಮಗೆಲ್ಲ ಡಾ. ವಿಜಯಾ ದಬ್ಬೆ ಪಿ.ಎಚ್.ಡಿ. ಪ್ರಬಂಧವನ್ನೇ ಮಂಡಿಸಿ ನಾಗಚಂದ್ರನು ವಿಜಯಪುರದ ನೆಲದವನು ಎಂದು ಸ್ಪಷ್ಟವಾಗಿ ದಾಖಲಿಸಿದ್ದಾರೆ. ಖ್ಯಾತ ಸಂಶೋಧಕರಾದ ಡಾ. ಎಂ.ಎಂ. ಕಲಬುರ್ಗಿ ಅವರು ಕೂಡ ತಮ್ಮ ಸಂಶೋಧನಾ ಗ್ರಂಥಗಳಾದ ಮಾರ್ಗ–2 ರಲ್ಲಿ ನಾಗಚಂದ್ರನ ಕಾಲ, ವಾಸಸ್ಥಳ ಹಾಗೂ ಸೇವೆಯ ಕುರಿತು ದಾಖಲಿಸಿದ್ದಾರೆ. ಅವನು ಬರೀ ಜೈನ ಕವಿಯಲ್ಲ. ಕನ್ನಡದಕವಿ, ನಮ್ಮ ನೆಲದ ಕವಿ, ಸಮಸ್ತ ಜನರ ಹೆಮ್ಮೆಯ ಕವಿ ಎಂದು ಅಭಿಪ್ರಾಯಪಟ್ಟರು.

ಕೃತಿ ಪರಿಚಯ ಮಾಡಿದ ಕನ್ನಡ ಉಪನ್ಯಾಸಕ ಶರಣಗೌಡ ಪಾಟೀಲ ಮಾತನಾಡಿ, ನಾಗಚಂದ್ರನನ್ನು ಉಳಿಸಿಕೊಳ್ಳಬೇಕೆನ್ನುವ ಪ್ರಯತ್ನಕ್ಕೆ ದೂರದಲ್ಲೆಲ್ಲೋ ಗೋಷ್ಠಿಗಳು, ಸೆಮಿನಾರಗಳು ನಡೆದರಷ್ಟೇ ಸಾಲದು. ವಿಜಯಪುರದ ನೆಲದಲ್ಲೂ ಪ್ರಮುಖವಾಗಿ ಆಗಬೇಕಿದೆ. ಮಸೀದಿ ಎಂದು ಬರೆಯಲ್ಪಟ್ಟ ಬಸದಿಯ ಒಳಹೋಗಲು ಅತ್ಯಂತ ದುಃಖವೆನಿಸುತ್ತದೆ. ಪಕ್ಕದ ಜಿಲ್ಲೆಯವರು ರನ್ನನನ್ನು ಎತ್ತಿ ಮೆರೆಸಿದಂತೆ ವಿಜಯಪುರಿಗರು ನಾಗಚಂದ್ರನನ್ನು ಮೆರೆಸಬೇಕಿದೆ. ಹಳಗನ್ನಡದಲ್ಲಿನ ಕಾವ್ಯವನ್ನು ಸರಳೀಕರಣಗೊಳಿಸಿ ಈಗಿನ ಸರಳಗನ್ನಡದ ಮೂಲಕ ಇಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ತುರ್ತಾಗಿ ಆಗಬೇಕಿದೆ ಎಂದು ನುಡಿದರು.

ನಾಗಚಂದ್ರ ಪ್ರತಿಷ್ಠಾನದ ಕಾರ್ಯದರ್ಶಿಗಳಾದ ಸಾತಪ್ಪ ಗೊಂಗಡಿ ಪ್ರಾಸ್ತಾವಿಕವಾಗಿ ಮಾತನಾಡಿ, ಮಹಿಳಾ ವಿವಿಯಲ್ಲಿ ನಾಗಚಂದ್ರನ ಪೀಠವಾಗಬೇಕು, ಪಿಯು ಮತ್ತು ಪದವಿ ತರಗತಿಗಳಿಗೆ ಪಠ್ಯವಾಗಬೇಕು ಹಾಗೂ ವಿಜಯಪುರ ವಿಮಾನ ನಿಲ್ದಾಣಕ್ಕೆ ಅಭಿನವಪಂಪ ನಾಗಚಂದ್ರನ ಹೆಸರಿಡಬೇಕೆಂದು ತುಂಬಿದ ಸಭೆಯಲ್ಲಿ ಆಗ್ರಹಿಸಿದರು.

ನಾಗಚಂದ್ರ ಕೃತಿಕರ್ತ ಡಾ. ಆನಂದ ಕುಲಕರ್ಣಿ, ಗದಗಿನ ಸರಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ಅಪ್ಪಣ್ಣ ಹಂಜೆ, ಅಧ್ಯಕ್ಷತೆ ವಹಿಸಿದ್ದ ಬೆಂಗಳೂರಿನ ವಿಧಾನ ಪರಿಷತ್ ಭವನ ಸಹಕಾರ್ಯದರ್ಶಿಗಳಾದ ಡಾ. ಅಜೀತ ಮುರಗುಂಡೆ, ಸಾನಿಧ್ಯ ವಹಿಸಿದ್ದ ಶಿವಬಸವ ಯೋಗಾಶ್ರಮದ ಶಂಭುಲಿಂಗ ಸ್ವಾಮೀಜಿ ಮಾತನಾಡಿದರು.

ವೇದಿಕೆಯ ಮೇಲೆ ಪ್ರತಿಷ್ಠಾನದ ಅಪ್ಪಾಸಾಹೇಬ ಮುತ್ತಿನ, ಇಂಡಿ ಶಹಾ ಪಬ್ಲಿಕ್ ಸ್ಕೂಲಿನ ಅಧ್ಯಕ್ಷ ಡಿ.ಆರ್. ಶಹಾ ಮತ್ತಿತರರು ಇದ್ದರು.

ಇದೇ ಸಂದರ್ಭದಲ್ಲಿ ಸಾಧಕರಿಗೆ ಹಾಗೂ ಪೋಷಕರಿಗೆ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ನೂರಾರು ಸಂಖ್ಯೆಯಲ್ಲಿ ಜೈನ ಸಮಾಜದ ಬಂಧುಗಳು ಹಾಗೂ ಹಿರಿಯ, ಕಿರಿಯ ಸಾಹಿತಿಗಳು ಹಾಜರಿದ್ದರು.

ಶಾಂತವೀರ ಪ್ರಾರ್ಥಿಸಿದರು, ರಾಜೇಂದ್ರಕುಮಾರ್ ಬಿರಾದಾರ್ ನಿರೂಪಿಸಿದರು. ಅನಿಲ ಇರಾಜ್ ಸ್ವಾಗತಿಸಿದರು. ಗುಂಡು ಧನಪಾಲ ವಂದಿಸಿದರು.

ಕರುನಾಡ ಕಂದ
ಸಂಪುಟ–1 । ಸಂಚಿಕೆ–6
ದಿನಾಂಕ: 16–01–2022 । ಪುಟಗಳು: 20

# ಗೋಪಾಲದಾಸರ ಪಾತ್ರಧಾರಿ ಭರವಸೆಯ ಯುವ ನಟ ಪ್ರಭಂಜನ ದೇಶಪಾಂಡೆ

ಕನ್ನಡದ ಹರಿದಾಸ ಸಾಹಿತ್ಯಕ್ಕೆ 'ಹರಿಕಥಾಮೃತಸಾರ' ನೀಡಿದ ದಾಸಶ್ರೇಷ್ಠ ಮಾನ್ವಿಯ ಜಗನ್ನಾಥದಾಸರ ಜೀವನ ಚರಿತ್ರೆಯ, ತಿವಿಕ್ರಮ ಜೋಶಿ ನಿರ್ಮಾಣದ ನಿರ್ಮಾಪಕ ಹಾಗೂ ನಿರ್ದೇಶಕ ಮಧುಸೂದನ್ ಹವಾಲ್ದಾರರ 'ಶ್ರೀ ಜಗನ್ನಾಥದಾಸರು' ಚಲನಚಿತ್ರ ಈಗ ಕನ್ನಡಿಗರ ಜನಮಾನಸದಲ್ಲಿ ಗಮನಸೆಳೆಯುತ್ತಿದೆ. ಕ್ಲಾಸ್ , ಮಾಸ್ ಸಿನೆಮಾಗಳ ಕಾಲಘಟ್ಟದಲ್ಲಿ ಪೌರಾಣಿಕ ,ದಾಸರ, ಶರಣ ಸಂತರ ಜೀವನ ಚರಿತ್ರೆಯ ಚಿತ್ರಗಳು ತೇರೆಮೇಲೆ ಬರುವುದು ಅಪರೂಪವಾಗಿರುವ ದಿನಗಳಲ್ಲಿ 'ಶ್ರೀ ಜಗನ್ನಾಥದಾಸರ' ಚಲನಚಿತ್ರ ಜನಮಾನಸಗೆದ್ದಿರುವುದು 'ಜಗನ್ನಾಥದಾಸರ ಮಹಿಮೆಯೇ' ಸರಿ.. ಈ ಚಿತ್ರ ದಾಸರ ಶರಣ ಚಿತ್ರಗಳು ಹೆಚ್ಚು ಹೆಚ್ಚಾಗಿ ಮೂಡಿಬರಲು ಮುನ್ನುಡಿಯನ್ನು ಬರೆದಿದೆ.

ಶ್ರೀ ಜಗನ್ನಾಥದಾಸರ ಬಾಲ್ಯ , ವಿದ್ಯಾಭ್ಯಾಸ, ಗೃಹಸ್ಥಾಶ್ರಮ , ಪಾಂಡಿತ್ಯದ ಅಹಂಕಾರದಿಂದ ಬರುವ ಉದರ ಶೂಲ, ವಿಜಯದಾಸರು ಮತ್ತು ಗೋಪಾಲದಾಸರಿಂದ ಆಗುವ ಪರಿವರ್ತನೆ , ಸಾಕ್ಷಾತ್ ಪಂಢರಪುರದ ವಿಠ್ಠಲನಿಂದ 'ಜಗನ್ನಾಥ ವಿಠ್ಠಲ' ಎಂದು ಅಂಕಿತ ಪಡೆಯುವವರೆಗೂ 'ಶ್ರೀ ಜಗನ್ನಾಥದಾಸರು' ಚಲನಚಿತ್ರದ ಮೊದಲ ಭಾಗದಲ್ಲಿ ತೋರಿಸಲಾಗಿದೆ.

ಚಿತ್ರದಲ್ಲಿ ಶಿರಿಷ್ ಜೋಶಿ–ಜಗನ್ನಾಥದಾಸರಾಗಿ, ವಿಜಯದಾಸರಾಗಿ–ನಿರ್ಮಾಪಕರಲ್ಲೊಬ್ಬರಾದ ತಿವಿಕ್ರಮ ಜೋಶಿ ಮತ್ತು ಗೋಪಾಲ ದಾಸರಾಗಿ– ಹಸನ್ಮುಖದ ಯುವ ನಟ ಪ್ರಭಂಜನ ದೇಶಪಾಂಡೆ ನಟಿಸಿದ್ದಾರೆ.

ಚಿತ್ರದ ಪ್ರಮುಖ ಪಾತ್ರ ಜಗನ್ನಾಥದಾಸರು ಆಗಿದ್ದರೂ, ಚಿತ್ರದಲ್ಲಿ ಹೆಚ್ಚಿಗೆ ಗಮನಸೆಳೆಯುವದು ನಲವತ್ತೈದು ನಿಮಿಷದ ನಂತರ ಬರುವ ಗೋಪಾಲದಾಸರ ಪಾತ್ರ..! ಗೋಪಾಲದಾಸರ ಪಾತ್ರಧಾರಿ ಪ್ರಭಂಜನ ದೇಶಪಾಂಡೆ



ಅಭಿನಯದಿಂದ 'ಭಾಗಣ್ಣ' ಅರ್ಥಾತ್ 'ಗೋಪಾಲದಾಸರ ಪಾತ್ರ' ಜಗನ್ನಾಥದಾಸರ ಪಾತ್ರಕ್ಕಿಂತ ತುಸು ಹೆಚ್ಚಿಗೆ ಪ್ರೇಕ್ಷಕರನ್ನು ಸೆಳೆದಿದೆ ಎನ್ನಬಹುದು.

ಈ ಮೂಲಕ 'ಪ್ರಭಂಜನ ದೇಶಪಾಂಡೆ' ಎಂಬ ಸ್ಪುರದ್ರೂಪಿ , ಭರವಸೆಯ ಯುವ ನಟ ಕನ್ನಡಿಗರಿಗೆ ಚಿರಪರಿಚಿತರಾಗಿದ್ದಾರೆ.

ಪ್ರಭಂಜನ ದೇಶಪಾಂಡೆ..

ಪ್ರಭಂಜನ ದೇಶಪಾಂಡೆ ಮೂಲತಃ ಬೆಂಗಳೂರಿನವರು. 'ದೇಶಪಾಂಡೆ' ಅಡ್ಡಹೆಸರು ಇರುವದರಿಂದ ಇವರು ಉತ್ತರ ಕರ್ನಾಟಕ ಮೂಲದವರೆಂದು ತಿಳಿಯಬಹುದು. ಎರಡ್ಮೂರು ತಲೆಮಾರಿನಿಂದ ಇವರ ಕುಟುಂಬವು ಬೆಂಗಳೂರಲ್ಲಿ ನೆಲೆಸಿದರೂ ಉತ್ತರ ಕರ್ನಾಟಕ ಭಾಷೆಯ ಸೊಗಡು ಇವರಿಂದ ಮರೆಯಾಗಿಲ್ಲ.

ಬಿಎಸ್ಸಿ , ಎಮ್. ಬಿ. ಎ ಪದವೀಧರಾದ ಪ್ರಭಂಜನ ದೇಶಪಾಂಡೆ ಸ್ವಂತ ಕಂಪನಿಯೊಂದನ್ನು ನಡೆಸುತ್ತಿದ್ದಾರೆ ಮತ್ತು

ನೂರಾರು ಜನರಿಗೆ ಉದ್ಯೋಗ ನೀಡಿದ್ದಾರೆ. ವೃತ್ತಿಯಲ್ಲಿ ಇವರು ಬಿಸಿನೆಸ್ ಮ್ಯಾನ್ , ಪ್ರವೃತ್ತಿಯಲ್ಲಿ ಅಪ್ಪಟ ಕಲಾವಿದರು ಹಾಗೂ ಗಾಯಕರು.

ಶಿವರಾಮ್ ಕಾರಂತರ ಕಾದಂಬರಿ ಆಧಾರಿತ ಟಿಎಸ್ ನಾಗಾಭರಣ ನಿರ್ದೇಶನದ 'ಚಿಗುರಿನ ಕನಸುಗಳು' ಚಿತ್ರದ ನಾಲ್ಕೈದು ಪಾತ್ರಗಳಿಗೆ ಧ್ವನಿಕೊಟ್ಟಿದ್ದಾರೆ. ಅನೇಕ ಜಾಹೀರಾತುಗಳಿಗೂ ಇವರು ಧ್ವನಿ ನೀಡಿದ್ದಾರೆ. ಅನೇಕ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ

ಗೋಪಾಲ ದಾಸರ ಪಾತ್ರಕ್ಕೆ ಆಯ್ಕೆ..

ತಿವಿಕ್ರಮ ಜೋಶಿ ನಿರ್ಮಾಣದ 'ಜಗನ್ನಾಥ ದಾಸ' ಚಲನಚಿತ್ರದಲ್ಲಿ ಜಗನ್ನಾಥದಾಸರ ಗುರುಗಳಾದ ಗೋಪಾಲ ದಾಸರ ಪಾತ್ರಕ್ಕೆ ಪ್ರಭಂಜನ ದೇಶಪಾಂಡೆ ಆಯ್ಕೆಯಾಗಿದು ಬಲು ರೋಚಕದ ಸಂಗತಿ. ಜಗನ್ನಾಥ ತಾಯಿ ಪಾತ್ರಧಾರಿ ಕಲಾವಿದೆ 'ಪದ್ಮಕಲಾ' ಮತ್ತು ಪ್ರಭಂಜನ ಮನೆ ಇರುವುದು ಮೇಲಕೆಳಗೆ.

ಜಗನ್ನಾಥದಾಸರ ಕುರಿತು ಮಧುಸೂದನ್ ಹವಾಲ್ದಾರ್ ಚಿತ್ರಮಾಡುತ್ತಿರುವುದು ಪದ್ಮಕಲಾ ಹೇಳಿದಾಗ, ಪ್ರಭಂಜನ ಚಿತ್ರದಲ್ಲಿ ಚಿಕ್ಕ ಪಾತ್ರಕ್ಕಾಗಿ ತಮ್ಮ ಭಾವಚಿತ್ರವನ್ನು ಕೊಟ್ಟಿರುತ್ತಾರೆ. ಪ್ರಭಂಜನ ಆಯ್ಕೆಯಾಗಿದ್ದು 'ಗೋಪಾಲದಾಸರ' ಪಾತ್ರಕ್ಕೆ..!

ಚಿತ್ರದ ನಿರ್ಮಾಪಕ ಹಾಗೂ ನಿರ್ದೇಶಕ ಮಧುಸೂದನ್ ಹವಾಲ್ದಾರ್ 'ನೀವು ಗೋಪಾಲದಾಸರ ಪಾತ್ರಕ್ಕೆ ಒಪ್ಪುವಿರಿ' ಎಂದಾಗ ಪ್ರಭಂಜನರಿಗೆ ಆಶ್ಚರ್ಯವಾಗುತ್ತೆ..! ದಾಸವರಣ್ಯರ ಚಿತ್ರವಾಗಿದ್ದರಿಂದ ಯಾವುದೇ ಪಾತ್ರವಾದರೂ ಸರಿ.. ಮಾಡಲು ನಿರ್ಧಾರಿಸಿಯಾಗಿದ್ದ ಅವರು, ಗೋಪಾಲದಾಸರ ಪಾತ್ರವೆಂದಾಗ ಬಹಳ ಸಂತೋಷದಿಂದಲೇ ಒಪ್ಪಿಕೊಂಡರು.

ದಾಸರ ಪಾತ್ರ ನಿಭಾಯಿಸುವುದು ಅಷ್ಟು ಸುಲಭವಲ್ಲ, ಗೋಪಾಲ ದಾಸರ ಪಾತ್ರಕ್ಕೆ ಆಯ್ಕೆಯಾದಮೇಲೆ ಅನೇಕ ಪೂರ್ವ ತಯಾರಿಗಳನ್ನು ಪ್ರಭಂಜನ ಮಾಡಿಕೊಂಡರು. ದಾಸರ ಹಾಡುಗಳನ್ನು ಹೇಳುವುದು, ಸಂಭಾಷಣೆ ಕಂಠಪಾಠ ಮಾಡುವುದು , ಧ್ಯಾನಸ್ಥರಾಗಿ ಗಂಟೆಗಟ್ಟಲೆ ಕೂಡುವುದು ರೂಢಿಸಿಕೊಂಡರು. ಅನೇಕ ತಯಾರಿಗಳನ್ನು ಮಾಡಿಕೊಂಡು ' ಗೋಪಾಲದಾಸರ' ಪಾತ್ರದ ಪರಕಾಯ ಪ್ರವೇಶಮಾಡಿದ್ದರಿಂದ ಸಹಜವಾದ ಅಭಿನಯ ಚಿತ್ರದಲ್ಲಿ ಕಾಣಬಹುದು.

ಜಗನ್ನಾಥದಾಸರಿಗೆ ಗೋಪಾಲದಾಸರು ನಲವತ್ತು ವರ್ಷ ಆಯಸ್ಸನ್ನು ರೊಟ್ಟಿಯ ಮೂಲಕ ನೀಡುತ್ತಾರೆ. ಈ ಸನ್ನಿವೇಶದಲ್ಲಿ ಪ್ರಭಂಜನ–ಶಿರಿಷ್ ಅಭಿನಯ ಪ್ರೇಕ್ಷಕರನ್ನು ಭಾವುಕರನ್ನಾಗಿ ಮಾಡುತ್ತದೆ. ಹಾಡುಗಳಲ್ಲಿ ಪ್ರಭಂಜನ ಲೀಲಾಜಾಲವಾಗಿ ಅಭಿನಯಿಸಿದ್ದಾರೆ ಇಡೀ ಚಿತ್ರದಲ್ಲಿ ಭಾಗಣ್ಣ ಅರ್ಥಾತ್ ಗೋಪಾಲದಾಸರ ಪಾತ್ರ ಹೆಚ್ಚು ಗಮನಸೆಳಯುತ್ತದೆ ಎಂದರೇ ಗೋಪಾಲ ದಾಸರ ಪಾತ್ರಧಾರಿಯಾದ ಮಂದಸ್ಮಿತ ಪ್ರಭಂಜನ ದೇಶಪಾಂಡೆಯಿಂದ ಅಂದರೆ ತಪ್ಪಾಗಲಾರದು..

ಚಿತ್ರನೋಡಿದ ಪ್ರೇಕ್ಷಕರು ಗೋಪಾಲದಾಸರ ಪಾತ್ರಧಾರಿಯಾದ ಪ್ರಭಂಜನ ದೇಶಪಾಂಡೆ ಕಾಲಿಗೆರಿಗೆ ನಮಸ್ಕರಿಸುವ ದೃಷ್ಯ ಶ್ರೀರಾಘವೇಂದ್ರ ಮಹಿಮೆ ಧಾರವಾಹಿಯ ರಾಘವೇಂದ್ರ ಸ್ವಾಮಿಗಳ ಪಾತ್ರಧಾರಿಯಾದ ಪರೀಕ್ಷತರನ್ನು ನೆನಪಿಸುತ್ತದೆ.

ಮುಂದಿನ ಚಿತ್ರಗಳು

ಸದ್ಯ 'ಜಗನ್ನಾಥದಾಸ' ಚಿತ್ರದ ಎರಡನೇ ಭಾಗ ಬರಲಿದೆ ನಂತರ ಪ್ರಭಂಜನ ಮಧುಸೂದನ್ ಹವಾಲ್ದಾರ್ ನಿರ್ದೇಶನದ ನಮ್ಮ ಬಾಗಲಕೋಟೆಯ 'ಪ್ರಸನ್ನ ವೆಂಕಟದಾಸರ' ಚಿತ್ರದಲ್ಲಿ ಪ್ರೆಸನ್ನ ವೆಂಕಟದಾಸರ ಪಾತ್ರಕ್ಕೆ ಆಯ್ಕೆಯಾಗಿದ್ದಾರೆ. ಗೋಪಾಲದಾಸರಾಗಿ ಕಂಡ ಪ್ರಭಂಜನ ದೇಶಪಾಂಡೆ ಮುಂಬರುವ ದಿನಗಳಲ್ಲಿ ಪ್ರಸನ್ನ ವೆಂಕಟದಾಸರಾಗಿ ತೆರೆಮೇಲೆ ಕಾಣಿಸಿಕೊಳ್ಳಲಿದ್ದಾರೆ.

**– ಶ್ರೀರಂಗ ಪುರಾಣಿಕ – 9663872037**
**ವಿಜಯಪುರ (ಬಿಜಾಪುರ)**






ಕರುನಾಡ ಕಂದ
ಸಂಪುಟ-1 । ಸಂಚಿಕೆ-6
ದಿನಾಂಕ: 16-01-2022 । ಪುಟಗಳು: 20

# ಗಾಂಧಿವಾದದ ಅಗತ್ಯವನ್ನು ಮನಗಾಣಿಸುತ್ತಿರುವ ಕೊರೋನಾ

ಬ್ರಿಟಿಷರ ವಿರುದ್ಧ ನಡೆಯುತ್ತಿದ್ದ ಭಾರತೀಯ ಸ್ವತಂತ್ರ ಸಂಗ್ರಾಮದ ನೇತೃತ್ವ ವಹಿಸಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಕರ್ನಾಟಕದ ಬೆಳಗಾವಿಗೆ ಬರುತ್ತಾರೆ.

ಆ ಸಂದರ್ಭದಲ್ಲಿ ಊಟಕ್ಕೆ ಅಂತ ಕುಳಿತಿರುವ ಹಸಿಗಡಲೆ ಹಾಗೂ ಹಾಲು ಸೇರಿಸುತ್ತಾ.ಅವರನ್ನು ನೋಡಿದ ಹುಡುಗನೊಬ್ಬ:ತಾತ.ನೀವೇಕೆ ರೊಟ್ಟಿ.ಪಲ್ಯ ತಿನ್ನುವುದಿಲ್ಲ? ಎಂದು ಪ್ರಶ್ನಿಸುತ್ತಾನೆ.

ಅದಕ್ಕುತ್ತರವಾಗಿ ಗಾಂಧಿ: ನಾವು ಬಡವರು ಮಗು. ರೊಟ್ಟಿ. ಪಲ್ಯ ತಿನ್ನುವಷ್ಟು ಶಕ್ತಿ ನಮಗಿಲ್ಲ. ಹೀಗಾಗಿ ಹಸಿಕಡಲೆ ತಿಂದು ಹಾಲು ಕುಡಿಯುತ್ತಿದ್ದೇನೆ ಎನ್ನುತ್ತಾರೆ .ಆ ಹುಡುಗನು ಕಡು ಬಡವನೇ. ಅವನಿಗೆ ಗಾಂಧಿ ಹೇಳಿದ ಮಾತು ಅಚ್ಚರಿ ಹುಟ್ಟಿಸುತ್ತದೆ ..

ಹಾಗಂತಲೇ ಮನೆಗೆ ಹೋದನು ತನ್ನ ತಾಯಿಯ ಬಳಿ. ಮಹಾತ್ಮ ಗಾಂಧಿ. ಕೂಡ ನಮ್ಮಂತೆಯೇ ಬಡವರಿದ್ದಾರೆ ಎಂದು ಘಟನೆಯನ್ನು ವಿಸ್ತರಿಸುತ್ತಾನೆ. ಆಗ ತಾಯಿ ವಿಷಾದದ ನಗೆ ನಕ್ಕು.: ಗಾಂಧೀಜಿಯವರ ಬಡತನ ಬಡತನಕ್ಕೊಂದು ಭದ್ರತೆ ಇದೆ ಆದರೆ ನಮಗೆ ನಮ್ಮ ಬಡತನಕ್ಕೆ ಭದ್ರತೆ ಇಲ್ಲ ಎನ್ನುತ್ತಾಳೆ.


ಈ ಘಟನೆಯನ್ನು ಸಾಂಕೇತಿಕವಾಗಿ ಗಮನಿಸುತ್ತಾ ನಾವು ಮುಖ್ಯ ವಿಷಯಕ್ಕೆ ಬರೋಣ. ಅಂದ ಹಾಗೆ ಬಡತನಕ್ಕೆ ಸಂಬಂಧಿಸಿದಂತೆ ಆ ತಾಯಿ ಮಾಡುವ ವ್ಯಾಖ್ಯಾನ ಅದ್ಭುತವಾದದ್ದು. ಯಾಕೆಂದರೆ ಗಾಂಧೀಜಿಯವರ ಬೆನ್ನ ಹಿಂದಿದ್ದವರು ಯಾರು? ಟಾಟಾ. ಬಿರ್ಲಾ ರಂತಹ ಮಹಾನ್ ಉದ್ಯಮಿಗಳು.

ಮನಸ್ಸು ಮಾಡಿದ್ದಿದ್ದರೆ ಗಾಂಧೀಜಿ ಐಷಾರಾಮಿ ಜೀವನ ಸಾಗಿಸಬಹುದು ಇತ್ತು. ಆದರೆ ಅದನ್ನು ಒಪ್ಪದೇ ಗಾಂಧಿ ಬಡತನವನ್ನು ಆಚರಿಸಿದರು. ಮುಂದೆ ಸ್ವಾತಂತ್ರ್ಯ ಬಂದ ನಂತರ ಈ ದೇಶದಲ್ಲಿ ಗಾಂಧಿವಾದದ ವಿರುದ್ಧ ಪಾಶ್ವಾತ್ಯ ವಾದ ಎದ್ದು ನಿಂತಿತ್ತು. ಇದೀಗ ಅದು ಜಾಗತೀಕರಣದ ರೂಪದಲ್ಲಿ ತನ್ನೆಲ್ಲ ಶಕ್ತಿಯೊಂದಿಗೆ ಅಸ್ತಿತ್ವವಿದೆ.

ಆದರೆ ಕೊರೋನಾ ಎಂಬ ಮಾರಕ ರೋಗ ಜಗತ್ತಿನುದ್ದಕ್ಕೂ ಹರಡುತ್ತಿರುವ ಈ ಸನ್ನಿವೇಶದಲ್ಲಿ ಮತ್ತೆ ಗಾಂಧಿ ವಾದಕ್ಕೆ ಶಕ್ತಿ ಬಂದಿದೆ. ಗಾಂಧಿವಾದವನ್ನು ಅನುಸರಿಸಿದೆ ಈ ವ್ಯವಸ್ಥೆಗೆ ಶಕ್ತಿ ಇಲ್ಲ ಎಂಬಂತಾಗಿದೆ.

ಗಾಂಧಿವಾದದ ಕೂಡ ಬಹಳ ಸರಳವಾದದ್ದು. ಅವರೇನು ಹೇಳಿದ್ದಾರೋ? ಅದನ್ನೇ 3000 ಸಾವಿರ ವರ್ಷಗಳ ಮುನ್ನ ಯಹೂದಿಯರು ಪ್ರವಾದಿ ಮೋಶೆ ಹೇಳಿದ್ದರು. ಬದುಕು ನೆಮ್ಮದಿಯಾಗಿರಲು ಪೂರಕವಾಗಿ ಅವರು ನೀಡಿದರು 10 ಆಜ್ಞೆಗ್ಗಳನ್ನು ಸಂಕ್ಷಿಪ್ತವಾಗಿ ಜಗತ್ತಿನ ಮೊಟ್ಟ ಮೊದಲ ಸಂವಿಧಾನ ಅನ್ನ ಬಹುದು.

ಮೋಶೆಯವರು ಹೇಳಿದ್ದನ್ನೇ ಹಲ ಶತಮಾನಗಳ ನಂತರ ಬಂದ ಬುದ್ಧ ವಿಸ್ತರಿಸುತ್ತಾನೆ. ಆಸೆಯೇ



ದುಃಖಕ್ಕೆ ಕಾರಣ ಎಂಬುದರಿಂದ ಹಿಡಿದು ಬಂದ ಬುದ್ಧ ಹೇಳುವ ಹಲವು ಮಾತುಗಳು ಕೂಡ ಮನುಷ್ಯನ ಬದುಕಿಗೆ ಅಗತ್ಯವಾದ ಸಂವಿಧಾನವೇ.

ಮುಂದೆ ಇದು ಯೇಸು ಕ್ರಿಸ್ತರು. ಮಹಮದ್ ಪೈಗಂಬರ್ ಅವರ ಕಾಲದಲ್ಲಿ ವಿಸ್ತ್ರತವಾಗಿ ಇರುತ್ತದೆ. ಕ್ರಿಸ್ತಶಕ 12ನೇ ಶತಮಾನದಲ್ಲಿ ಬಂದ ಬಸವಣ್ಣ ಅದಕ್ಕೆ ಮತ್ತಷ್ಟು ವ್ಯವಸ್ಥಿತ ರೂಪ ನೀಡುತ್ತಾರೆ. ಮೋಶೆ ಹಾಗೂ ಬಸವಣ್ಣನವರನ್ನು ಒಟ್ಟಿಗೆ ನಿಲ್ಲಿಸಿಕೊಂಡು ನೋಡಿದರೆ ವಿಸ್ಮಯವಾಗುತ್ತದೆ.

ಕಳಬೇಡ. ಕೊಲಬೇಡ. ಹುಸಿಯ ನುಡಿಯಲು ಬೇಡ. ಇದಿರ ಹಳಿಯಲು ಬೇಡ. ತನ್ನ ಬಣ್ಣಿಸಬೇಡ. ಇದೇ ಕೂಡಲಸಂಗಮನೊಲಿಸುವ ಪರಿ ಎಂದು ಬಸವಣ್ಣ ಏನು ಹೇಳುತ್ತಾರೋ? ಇದರ ಮೂಲದಲ್ಲಿ ಮೋಶೆಯವರ ಧ್ವನಿ ಇದೆ. ಅಂದಹಾಗೆ ಮೋಶೆ ಹಾಗೂ ಬಸವಣ್ಣವರ ನಡುವಣ ಕಾಲದ ಅಂತರ ಸುಮಾರು 24 ಶತಮಾನ.

ಈ ಎಲ್ಲಾ ಮಹಾನುಭಾವರನ್ನು ಅರಿತಿದ್ದ ಗಾಂಧಿ. ಅವರು ಹೇಳಿದ್ದನ್ನೇ ಇನ್ನಷ್ಟು ವ್ಯವಸ್ಥಿತವಾಗಿ ಹೇಳಿದರು. ಅಂದರೆ ಗಾಂಧಿವಾದ ಎಂಬುದು ಸ್ವಯಂ ಆಗಿ ಈ ಜಗತ್ತಿನ ವಿಶೇಷ ವಾದವಲ್ಲ. ಅದು ಜ್ಞಾನದ ಮುಂದುವರಿದ ಭಾಗ.

ಆದರೆ ಗಾಂಧಿವಾದವನ್ನು ಸಾಕಷ್ಟು ಅಪಮಾನಕ್ಕೆ ಗುರಿ ಮಾಡಲಾಯಿತು. ಅದೊಂದು ಪೊಳ್ಳುವಾದ ಎಂದು ಜರಿಯಲಾಯ್ತು . ಆದರೆ ಯಾರೇನೇ ಉಪೆಕ್ಷ ಮಾಡಿದರು ಗಾಂಧಿವಾದ ಎಂಬುದು ಸೂರ್ಯನಷ್ಟೇ ಪ್ರಕಾರ. ಮನುಷ್ಯನ ಬದುಕಿಗೆ ಅಗತ್ಯವಾದುದನ್ನು ಹೇಳುವ ಗಾಂಧಿವಾದವನ್ನು ಅನುಸರಿಸುವುದು ಅನಿವಾರ್ಯ ಎಂಬುದು ಕಾಲ ಕಾಲಕ್ಕೆ ಅರಿವಿಗೆ ಬರುತ್ತಲೇ ಇದೆ.

ನೀನು ಬದುಕು. ಮತ್ತೊಬ್ಬರನ್ನು ಬದುಕಲು ಬಿಡು. ಸರಳವಾದ ದಷ್ಟು ನೆಮ್ಮದಿಯಿಂದಿರುವೆ ಎನ್ನುವಂತಹ ಪ್ರಾಥಮಿಕ ಅಂಶಗಳಿಂದ ಹಿಡಿದು ಗಾಂಧಿ ಏನು ಹೇಳಿದರೋ? ಅದು ಈ ಜಗತ್ತು ಕಂಡ ಅನೇಕ ಮಹಾನುಭಾವರು ಹೇಳಿದ ಮಾತುಗಳ ಆದ್ದರಿಂದ ಗಾಂಧಿವಾದ ಎಂಬುದು ಸತ್ಯದ ಮುಂದುವರಿಕೆ ಮಾತ್ರ.

ಇರಲಿ. ಈಗ ಕೋರೋನಾ ಎಂಬ ಮಹಾಮಾರಿಯ ವಿಷಯಕ್ಕೆ ಬರೋಣ. ತನ್ನ ಅಕ್ಟೋಪಸ್ ಹಿಡಿತದಿಂದ ಇಡೀ ಜಗತ್ತು ತಲ್ಲಣಗೊಳ್ಳುವಂತೆ ಮಾಡಿರುವ ಕೊರೋನ ಇವತ್ತು ಜಗತ್ತಿನ ಆರ್ಥಿಕತೆಗೆ ಹೊಡೆತ ನೀಡಿದೆ. ಸಹಜವಾಗಿ ಕರ್ನಾಟಕದ ಆರ್ಥಿಕತೆಯೂ ತಳ ಕಚ್ಚುವ ಸ್ಥಿತಿಗೆ ತಲುಪಿದೆ. ಅಂದಹಾಗೆ ರಾಜ್ಯದ ಬಜೆಟ್ ಗಾತ್ರ 2ಲಕ್ಷ. 37 ಸಾವಿರ ಕೋಟಿ. ಇಷ್ಟು ಹಣದ ಬಹುದೊಡ್ಡ ಮೂಲವೆಂದರೆ ಸ್ವಂತ ಶಕ್ತಿಯಿಂದ ಸಂಗ್ರಹಿಸುವ ತೆರಿಗೆ ಮತ್ತು ಎತ್ತುವುದು.

ಮುಂದಿನ ಸಾಲಿಗೆ ಸಂಬಂಧಿಸಿದಂತೆ ವಿವಿಧ ಮೂಲಗಳಿಂದ ರಾಜ್ಯ ಮಾಡಲಿರುವ ಪ್ರಮಾಣ 52 ಸಾವಿರ ಕೋಟಿ ರೂಪಾಯಿ.

ಅದಕ್ಕೆ ಕೆ ಈ ಪರಿಸ್ಥಿತಿ ಬಂತು? ಎಂದರೆ ಕೇಂದ್ರ ಸರ್ಕಾರ ಜಿ ಎಸ್ ಟಿ ಭಾಬ್ತಿ ನಲ್ಲಿ. ಜಿ ಎಸ್ ಟಿ ಪರಿಹಾರದ ರೂಪದಲ್ಲಿ ರಾಜ್ಯಕ್ಕೆ ನೀಡಬೇಕಾದ ಹತ್ತಿರ 12000 ಸಾವಿರ ಕೋಟಿ ರೂಪಾಯಿಯಷ್ಟು ಹಣ ಕೊಟ್ಟಿಲ್ಲ. 15ನೇ ಹಣಕಾಸು ಆಯೋಗ ನಮಗೆ ನಿಗದಿ ಮಾಡಿದ ಹಣದಲ್ಲಿ ಕೋತ ಮಾಡಿರುವುದರಿಂದ ಮತ್ತು ವಿವಿಧ ಯೋಜನೆಗಳಿಗೆ ಒದಗಿಸುವ ಅನುದಾನವನ್ನು ಕಡಿಮೆ ಮಾಡುವುದರಿಂದ ಒಟ್ಟಾರೆಯಾಗಿ 30 ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಕಡಿತವಾಗಿದೆ.

ಇದೇ ಕಾಲಕ್ಕೆ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನದ ಪ್ರಮಾಣ ಶೇಕಡ 6. 8 ರಿಂದ 5.8 ಕೆ ಬಂದಿದೆ. ಇದನ್ನು ಇನ್ನಷ್ಟು ವಿಸ್ತಾರವಾಗಿ ನೋಡೋಣ. ಈಗ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನದ ಪ್ರಮಾಣ 100 ಲಕ್ಷ ಕೋಟಿ ರೂಪಾಯಿಗಳಷ್ಟು ಇತ್ತು ಎಂದರೆ ಅದರಲ್ಲಿ 10 ರಿಂದ 15 ರಷ್ಟಿತ್ತು ಪ್ರಮಾಣದ ಕೊರತೆಯಾಗುವ ಎಂದರ್ಥ.

ಕೃಷಿ. ಕೈಗಾರಿಕೆ ಹಾಗೂ ದೇವಾಲಯಗಳ ಮೂಲಕ ಕರ್ನಾಟಕ 100 ಲಕ್ಷ ಕೋಟಿ ರೂಪಾಯಿಗಳಷ್ಟು ಆಂತರಿಕ ಉತ್ಪನ್ನ ಹೊಂದಿದೆ ಎಂದರೆ ಅದರಲ್ಲಿ 15 ಲಕ್ಷ ಕೋಟಿ ರೂಪಾಯಿಗಳಷ್ಟು ಖೋತಾ ಆಗುತ್ತಿದೆ ಎಂದರ್ಥ.

ಜಿ ಡಿ ಪಿ ಎಲ್ಲಿ ಇಂತಹ ಕೊರತೆ ಆಯಿತು ಎಂದರೆ ರಾಜ್ಯ ಸರ್ಕಾರ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿರುವ ಬರುವಂತಹ ಹಣದ ಪ್ರಮಾಣ ಕಡಿಮೆಯಾಗುತ್ತದೆ. ಹೀಗಾಗಿ ಬಜೆಟ್ಗೆ ಕೊರತೆ ಬೀಳುವ ಹಣವನ್ನು ಸಾಲದ ರೂಪದಲ್ಲಿ ಸರಿದೂಗಿಸಬೇಕು ಆಗುತ್ತದೆ. ಹೀಗೆ ಅದು ಮಾಡಲಿರುವ ಸಾಲದ ಪ್ರಮಾಣ 52 ಸಾವಿರ ಕೋಟಿ ರೂಪಾಯಿಗಳು.

ಇದು ಕೋರೋಣ ಹೊಡೆತಕ್ಕೆ ವ್ಯವಸ್ಥೆ ತಲ್ಲಣಿಸುವ ಮುಂದಿನ ಪರಿಸ್ಥಿತಿ. ಆದರೆ ಈಗಿನ ಸ್ಥಿತಿ ನೋಡಿದರೆ ಆರ್ಥಿಕ ಪರಿಸ್ಥಿತಿ ದೊಡ್ಡ ಮಟ್ಟದಲ್ಲಿ ಹೊಡೆತ ತನ್ನಲ್ಲಿದೆ. ಕುಸಿದ ಆರ್ಥಿಕ ಚಟುವಟಿಕೆಗಳ ಹಿನ್ನೆಲೆಯಲ್ಲಿ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನದ ಪ್ರಮಾಣ ಶೇಕಡಾ 4ಕ್ಕೆ ತಿಳಿಸಬಹುದು.

ಇದರ ಪರಿಣಾಮವಾಗಿ ಸರ್ಕಾರ ಒಂದೇ ವರ್ಷದಲ್ಲಿ 52 ಸಾವಿರ ಕೋಟಿ ರೂಪಾಯಿಗಳ 72 ಸಾವಿರ ಕೋಟಿ ರೂಪಾಯಿಗಿಂತ ಅಧಿಕ ಸಾಲ ಮಾಡಬೇಕಾಗಬಹುದು.

ಒಂದು ಬಜೆಟ್ನ ಮೂರನೇ ಒಂದು ಭಾಗದಷ್ಟು ಹಣವನ್ನು ಸಾಲ ಮಾಡಿ ಸರಿದೂಗಿಸಬೇಕು ಆಗುತ್ತದೆ ಎಂದರೆ ಪರಿಸ್ಥಿತಿ ಮತ್ತಷ್ಟು ಹೀನಾಯ ವಾಗಲಿದೆ. ಇಂತಹ ಪರಿಸ್ಥಿತಿಯನ್ನು ಸರಿದೂಗಿಸುವುದು ಹೇಗೆ? ಅನ್ನುವ ಪ್ರಶ್ನೆ ಎದುರಾದರೆ ಸರಕಾರ ಮುಖ ಮುಚ್ಚಿಕೊಳ್ಳಬೇಕಾದ ಸ್ಥಿತಿ ಬರುತ್ತದೆ. ಗಾಂಧಿವಾದದ ಹೆಚ್ಚು ಪ್ರಸ್ತುತವಾಗುವುದು ಇಂತಲ್ಲಿ. ಸರ್ಕಾರಗಳು ದುರ್ಬಲವಾದ ಸನ್ನಿವೇಶದಲ್ಲಿ ಇದು ಅನಿವಾರ್ಯ ಕೂಡ. ಹೀಗಾಗಿ ಸರಳ ಬದುಕನ್ನು ಅಪ್ಪಿಕೊಳ್ಳಬೇಕು ಎಂಬುದು ಹೊರತುಪಡಿಸಿ ಬೇರೆ ಆಯ್ಕೆಗಳು ವ್ಯವಸ್ಥೆಯ ಮುಂದಿಲ್ಲ.

ಅರ್ಥ. ಆರ್ಥಿಕವಾಗಿ ಮೇಲು ಹಂತದಲ್ಲಿರುವ. ಮೇಲ್ಮಧ್ಯಮ ಹಂತದಲ್ಲಿರುವ ಜನ ಕೆಳ ಮಾಧ್ಯಮ ಹಾಗೂ ತಳಹಂತದ ಜನರ ಮಧ್ಯೆ ಹೆಚ್ಚು ಜವಾಬ್ದಾರಿಯಿಂದ ಬದುಕಬೇಕಾಗುತ್ತದೆ.

ಜಾಗತೀಕರಣದ ಕಾಲಘಟ್ಟದಲ್ಲಿ ಆಮಿಷಗಳ ನಡುವೆ ಬದುಕುತ್ತಿರುವ ಜನಸಮುದಾಯವನ್ನು ಅಂತಹ ಆಮಿಷಗಳಿಂದ ದೂರವಿರಿಸಲು ಪೂರಕವಾದಂತೆ ಹಣವಿದ್ದರೂ ಬದುಕಬೇಕು. ಇಲ್ಲದೆ ಹೋದರೆ ಉಳ್ಳವರು. ಇಲ್ಲದವರ ನಡುವಣ ತಾರತಮ್ಯ ಅತಿಯಾಗಿ ವ್ಯವಸ್ಥೆ ಅವವ್ಯಸ್ಥೆ ಕೋಪಕ್ಕೆ ತಲುಪುತ್ತದೆ.

ಅಂತಹ ಸನ್ನಿವೇಶದಲ್ಲಿ ಸಮಾಜ ಸಂಘರ್ಷಕ್ಕೆ ಮೂರು ಮುಖಾಮುಖಿ ಆಗಬೇಕಾಗುತ್ತದೆ. ಸಂಘರ್ಷವಿಲ್ಲದೆ ಬರಬೇಕು ಎಂದರೆ ಉಳ್ಳವರು. ಇಲ್ಲದವರು ಎಲ್ಲರೂ ಸೇರಿ ಸರಳವಾಗಿ ಬದುಕುವ ಅನಿವಾರ್ಯತೆ ಇದೆ. ಮತ್ತು ಪರಸ್ಪರ ವನ್ನು ಅವಲಂಬಿಸಿ ಮುನ್ನಡೆಯಬೇಕಾಗಿದೆ.

ಇದನ್ನು ಪರಿಣಾಮಕಾರಿಯಾಗಿ ಹೇಳಬಲ್ಲ ಶಕ್ತಿ ಇರುವುದು ಗಾಂಧಿ ಮಾರ್ಗಕ್ಕೆ. ಒಂದು ವ್ಯವಸ್ಥೆ ಆರ್ಥಿಕವಾಗಿ ಪಾತಾಳಕ್ಕೆ ಕುಸಿದಾಗ ಅದರ ನೆಮ್ಮದಿಗೆ ಬೇಕಿರುವುದು ಅದು. ಹೀಗಾಗಿ ಎಲ್ಲರೂ ಬಗ್ಗೆ ಚಿಂತಿಸಬೇಕಾದ ಅಗತ್ಯವಿದೆ..

**– ರಾಹುಲ್ ಮಡಿವಾಳರ್**

## ಮಾನವೀಯತೆ ಮೆರೆದ ಜಾಫ಼ರ್ ಹಾಗೂ ಪೋಲಿಸ್ ಅಧಿಕಾರಿಗಳು





ಯಾದಗಿರಿ: ಜಿಲ್ಲೆಯ ಹೊಸಳ್ಳಿ ಕ್ರಾಸ್ ಹತ್ತಿರ ಆಕಳೊಂದು ತನ್ನ ಕಂದಮ್ಮನಿಗೆ ರಸ್ತೆಯಲ್ಲೇ ಜನುಮ ನೀಡಿತ್ತು, ಬೆಳಿಗ್ಗೆ ಸುಮಾರು 5 ಗಂಟೆಯ ಸಮಯದಲ್ಲಿ ಜನ್ಮ ನೀಡಿ ಬಲಹೀನವಾಗಿದ್ದರಿಂದ ಕಂದಮ್ಮನ ಹತ್ತಿರ ಹೋಗಿ ಹಾಲುಣಿಸಲು ಸಾಧ್ಯವಾಗಿಲ್ಲ, ಅಲ್ಲದೆ ಬೆಳಗಿನ ಜಾವ ಇರುವುದರಿಂದ ಜನ ಸಹಾಯವೂ ಇಲ್ಲದೆ ಕಂದಮ್ಮನು ಕೆಲವೇ ಕ್ಷಣದಲ್ಲಿ ಅಸುನೀಗುವ ಕರುಣಾಜನಕ ಪರಿಸ್ಥಿತಿ ಎದುರಾಗಿ-ತ್ತು, ಇದರ ಮಧ್ಯದಲ್ಲೇ ದೂರದಿಂದ ಗಮನಿಸುತ್ತಾ ಇದ್ದ ಬೀದಿ ನಾಯಿಗಳು ಕರುವನ್ನು ಕಿತ್ತು ತಿನ್ನಲು ಮುಗಿಬೀಳುತ್ತಿರುವ ಸ್ವಲ್ಪ ಹೊತ್ತಲ್ಲೇ ಆಪತ್ಬಾಂಧವ ಬಂದ ಜಾಫರ್ ಅದೇ ದಾರಿಯ ಟಮ್ ಟಮ್ ವಾಹನದಲ್ಲಿ ಪ್ರಯಾಣಿಸುತ್ತಿದ್ದರು ಈ ದೃಶ್ಯ ವನ್ನು ನೋಡಿ ಕೂಡಲೇ ಗಾಡಿ ನಿಲ್ಲಿಸಿ, ನಾಯಿಗಳನ್ನು ಹೊಡೆದೋಡಿಸಿ ಕರುವನ್ನು ಪ್ರಾಣಾಪಾಯದಿಂದ ಬಿಡಿಸಿದರು ಹಾಗೂ ಎಸ್.ಪಿ. ವೇದಮೂರ್ತಿ ರವರನ್ನು ಸಂಪರ್ಕ ಮಾಡಿದಾಗ ಅವರು ಪೊಲೀಸ್ ಸಿಬ್ಬಂದಿಗಳನ್ನು ಕೂಡಲೇ ಸ್ಥಳಕ್ಕೆ ಕಳುಹಿಸಿದರು, ಮತ್ತು ಪಶು ವೈದ್ಯಕೀಯ ಚಿಕಿತ್ಸೆ ನೀಡಿ ಇಬ್ಬರೂ ಮಾನವೀಯತೆಗೆ ಮಾದರಿಯಾದರು.



ಕರುನಾಡ ಕಂದ
ಸಂಪುಟ–1 । ಸಂಚಿಕೆ–6
ದಿನಾಂಕ: 16–01–2022 । ಪುಟಗಳು: 20

# ಪದಾಧಿಕಾರಿಗಳ ಆಯ್ಕೆ



ಅಖಿಲಭಾರತ ಕ್ರಾಂತಿಕಾರಿ ವಿದ್ಯಾರ್ಥಿ ಸಂಘಟನೆ–ಏಐಆರ್ ಎಸ್ ಓ ತಾಲೂಕು ಸಮಿತಿ ಮಾನವಿ ತಾಲೂಕು ಸಮಿತಿಯನ್ನು ಸಿಪಿಐ(ಎಂಎಲ್) ರೆಡ್ ಸ್ಟಾರ್ ತಾಲೂಕು ಸಮಿತಿ ಕಾರ್ಯದರ್ಶಿಯಾದ ಯಲ್ಲಪ್ಪ ಉಟಕನೂರು ಇವರ ನೇತೃತ್ವದಲ್ಲಿ ಪದಾಧಿಕಾರಿಗಳ ಆಯ್ಕೆ.

ಪದಾಧಿಕಾರಿಗಳ ವಿವರ : ಅಧ್ಯಕ್ಷರಾಗಿ ಅವಿನಾಶಗೌಡ ಮಾನವಿ, ತಾಲೂಕು ಉಪಾಧ್ಯಕ್ಷರಾಗಿ ಈರೇಶ್ ಮುಷ್ಟೂರು, ಕಾರ್ಯಾಧ್ಯಕ್ಷರಾಗಿ ಪ್ರಭುಲಿಂಗ ಪೋತ್ನಾಳ್, ಪ್ರಧಾನ ಕಾರ್ಯದರ್ಶಿಯಾಗಿ ಆಂಜನೇಯ ಹರವಿ, ಕಾರ್ಯದರ್ಶಿಯಾಗಿ ಸಾಗರ್ ಪೋತ್ನಾಳ,ಖಜಾಂಚಿಯಾಗಿ ವಿನೋದ್ ಮಾಡಗಿರಿ, ತಾಲೂಕು ಸಮಿತಿ ಸದಸ್ಯರನ್ನಾಗಿ ಸಂದೀಪ್ ಖಾನಾಪೂರ, ಶಿವರಾಜ್ ಜಾನೇಕಲ್, ಶ್ರೀಶೈಲ್ ಉದ್ಬಾಳ್, ಮಲ್ಲೇಶ ಉಟಕನೂರು, ಅಮರೇಶ ಪೋತ್ನಾಳ್ ಇವರನ್ನು ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆಗೊಳಿಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿ ಸಂಘಟನೆಯ ರಾಜ್ಯ ಸಮಿತಿ ಸದಸ್ಯರಾದ, ಬುಜ್ಜಿ ಭೋವಿಗೌಡ ಪೋತ್ನಾಳ್ ಮತ್ತು ಬಸವರಾಜ ಸೇ–ರಿದಂತೆ ಮಾನವಿ ತಾಲೂಕಿನ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮುಂದಿನ ದಿನಮಾನಗಳಲ್ಲಿ ನೂತನ ವಿದ್ಯಾರ್ಥಿ ಸಂಘಟನೆಯು ಕೇಂದ್ರ ಸರಕಾರ ಜಾ–ರಿಗೆ ತಂದ ನೂತನ ಶಿಕ್ಷಣ ನೀತಿ (ಎನ್ ಇಪಿ) ಯ ವಿರುದ್ಧ, ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ, ಕೋಮುವಾದದ ವಿರುದ್ಧ ಬಲಾಢ್ಯ ಚಳುವಳಿಯನ್ನು ಕಟ್ಟಲು ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಯಿತು. ಹಾಗೆಯೇ ವಿದ್ಯಾರ್ಥಿ ಸಂಘಟನೆಯ ಸದಸ್ಯತ್ವವನ್ನು ತಾಲೂಕಿನ ಎಲ್ಲಾ ಶಾಲಾ–ಕಾಲೇಜುಗಳಲ್ಲಿ ನೀಡಲು ತೀರ್ಮಾನಿಸಲಾಯಿತು.

– ವರದಿ–ಬಸವರಾಜ್ ಬಡಿಗೇರ್

# ಜೆಡಿಎಸ್ ಪಕ್ಷಕ್ಕೆ ಸೇರ್ಪಡೆ



ದೇವದುರ್ಗ: ತಾಲೂಕಿನ ತಳವಾರದೊಡ್ಡಿ,ನಾಮಾನಾಯ್ಕ ತಾಂಡಾದ ಗ್ರಾಮಸ್ಥರು ಕಾಂಗ್ರೆಸ್, ಬಿಜೆಪಿ ಪಕ್ಷವನ್ನು ತೊರೆದು ಕರೇಮ್ಮ ಜಿ ನಾಯಕ ಅವರ ಸಮ್ಮುಖದಲ್ಲಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು. ನಂತರ ಮಾತನಾಡಿದ ಜೆಡಿಎಸ್ ಕಲ್ಯಾಣ ಕರ್ನಾಟಕ ವೀಕ್ಷಕರು ಮತ್ತು ಮುಖಂಡರಾದ ಕರೇಮ್ಮ ಜಿ ನಾಯಕ ಈಗಿನ ಬಿಜೆಪಿ, ದುರಾಡಳಿತ ಮತ್ತು ಕಾಂಗ್ರೆಸ್ ಒಂದಾಣಿಕೆ ರಾಜಕೀಯವನ್ನು ಕಂಡು ನಮ್ಮ ಪಕ್ಷದ ತತ್ವ ಸಿದ್ಧಾಂತಗಳನ್ನು ಮೆಚ್ಚಿ ಪಕ್ಷಕ್ಕೆ ಸೇರಿರುವುದು ಸಂತೋಷದ ವಿಚಾರ ಎಂದರು. ಇದೇ ಸಂದರ್ಭದಲ್ಲಿ ಜೆಡಿಎಸ್ ತಾಲೂಕು ಮಹಿಳಾ ಘಟಕದ ಅಧ್ಯಕ್ಷರಾದ ರೇಣುಕಾ ಮಯೂರಸ್ವಾಮಿ, ಪುರಸಭೆ ಸದಸ್ಯ ಶಾಲಂ ಉದ್ದಾರ ಜೆಡಿಎಸ್ ನಗರ ಘಟಕ ಅಧ್ಯಕ್ಷ ದಾವೂದ್,ನಗರ ಘಟಕದ ಯುವ ಅಧ್ಯಕ್ಷರಾದ ಮಾರುತಿ ನಾಯಕ್, ಜೆಡಿ–ಎಸ್ ಮುಖಂಡರಾದ ಮಯೂರ್ ಸ್ವಾಮಿ,ಈಶಪ್ಪ ಗೌಡ, ಜನಾರ್ದನ ಕೋಟೆ,ಪ್ರಭುನಾಯಕ ಸೇರಿದಂತೆ ಇನ್ನಿತರರು ಇದ್ದರು.

– ವರದಿ–ಬಸವರಾಜ

# ಸಣ್ಣ ಆಗುವ ಸುಲಭ ವಿಧಾನ




ತೂಕ ಇಳಿಸಲು ದೇಹದಲ್ಲಿನ ಕೊಬ್ಬಿನ ಅಂಶ ತೆಗೆಯಬೇಕು ಅದಕ್ಕಾಗಿ ಡಯಟ್ ಮಾಡುವಾಗ ನಾವು ತಿನ್ನುವ ಅಹಾರದಲ್ಲಿ ಎಣ್ಣೆ ಯನ್ನು ಬಳಸದೆ ಡಯಟ್ ಮಾಡಬೇಕು.ಈ ಡಯಟ್ ನಲ್ಲಿ ಬಿಸಿ ನೀರನ್ನು ಹೆಚ್ಚು ಸೇವಿಸಬೇಕು ಬೆಳಗಿನ ತಿಂಡಿಗೆ ಓಟ್ಸ್ ತಿನ್ನಬೇಕು ಮತ್ತೆ ಏನನ್ನು ಸೇವಿಸುವಂತಿಲ್ಲ ಹಸಿವಾದರೆ ಮೋಸಂಬಿ,ಕಲ್ಲಂಗಡಿ ಹಣ್ಣನ್ನು ತಿನ್ನಬಹುದು ಮಧ್ಯಾಹ್ನ ಊಟಕ್ಕೆ ರಾಗಿ ರೊಟ್ಟಿ ಅಥವಾ ರಾಗಿ ಮುದ್ದೆ ತಿನ್ನಬೇಕು ಮತ್ತು ರಾತ್ರಿ ರಾಗಿ ಮುದ್ದೆ.ರಾಗಿ ಮತ್ತು ಓಟ್ಸ್ ನಲ್ಲಿ ಹೆಚ್ಚು ಪ್ರೊಟೀನ್ ಇರುವುದ–ರಿಂದ ಸಣ್ಣ ಆಗಲು ಹೆಚ್ಚು ಸಹಾಯ ಮಾಡುತ್ತದೆ.ಈ ತರಹದ ಡಯಟ್ ನಿಂದ ಸಣ್ಣ ಆದಮೇಲೆ ಮತ್ತೆ ಬೇಗನೇ ದಪ್ಪಾ ಅಗುವದಿಲ್ಲ ಈ ಡಯಟ್ ನಿಂದಾ ಬೇಗನೆ ಆಯಾಸ ಆಗುವುದಿಲ್ಲ. ದೇಹಕ್ಕೆ ಪ್ರೊಟೀನ್ ನೀಡುವುದರಿಂದ ದೇಹದಲ್ಲಿನ ಕೊಬ್ಬು ಕರಗುತ್ತದೆ . ಇದರ ಜೊತೆ ಸ್ವಲ್ಪ ವಾಕಿಂಗ್ ಮತ್ತು ವ್ಯಾಯಾಮ ಮಾಡಿದರೆ ಇನ್ನು ಬೇಗ ಸಣ್ಣ ಆಗಬಹುದು.ಈ ಡಯಟ್ ಹೆಚ್ಚು ಆರೋಗ್ಯಕರವಾಗಿದೆ.ಈ ಡಯಟ್ ಅನುಸರಿಸಿ ಮತ್ತು ಆರೋಗ್ಯವಾಗಿರಿ.

– ಪೂಜಾ ಕಿರಣ್. ತುಮಕೂರು

# ಅಧಿಕಾರಿಗಳ ನಿರ್ಲಕ್ಷ್ಯ

ಜೇವರ್ಗಿ: ಪಟ್ಟಣದ ಹೃದಯ ಭಾಗವಾದ ಪ್ರವಾಸಿ ಮಂದಿರದಲ್ಲಿ ಕುಸಿಯುವ ಹಂತದಲ್ಲಿರುವ ನೀರಿನ ಟ್ಯಾಂಕ್,ಸರಿ ಸುಮಾರು 35 ವರ್ಷದ ಹಳೆಯ ಟ್ಯಾಂಕ್ ಇದ್ದು ಬಹಳಷ್ಟು ಬಿರುಕುಗಳಿಂದ ಕೂಡಿದೆ ಇದು ಯಾವಾಗ ಬೇಕಾದರೂ ಕುಸಿಯಬಹುದು ಇದರಿಂದ ಸಾರ್ವಜನಿಕರು ಬಹಳ ಆತಂಕದಿಂದ ತಿರುಗಾಡುವ ಸ್ಥಿತಿ ಬಂದಿದೆ ಮತ್ತು ಹಲವಾರು ಬಾರಿ ಅಧಿಕಾರಿಗಳಿಗೆ ಮನವಿ ಪತ್ರ ಕೊಟ್ಟರೂ ಯಾರೊಬ್ಬರೂ ಈ ಬಗ್ಗೆ ಗಮನ ಹರಿಸದೆ ನಿರ್ಲಕ್ಷ್ಯ ತೋರಿದ್ದಾರೆ. ಒಂದು ವೇಳೆ ಈ ಟ್ಯಾಂಕ್ ಕುಸಿತದಿಂದ ಏನಾದರೂ ಅನಾಹುತ ಆದರೆ ಇದಕ್ಕೆ ಯಾರು ಹೊಣೆ ಎಂದು ತಾಲ್ಲೂಕು ವಿಷ್ಣು ಸೇನಾ ಸಮಿತಿಯ ಅಧ್ಯಕ್ಷರಾದ ಬಸವರಾಜ ಬಿ ಬಾಗೇವಾಡಿ ಮತ್ತು ಅಂಬ್ರೀಶ ಟಿ ಆರ್ ದುರಸ್ಥಿಗೆ ಒತ್ತಾಯಿಸಿದ್ದಾರೆ.

– ವರದಿ–ಚಂದ್ರಶಾಗೌಡ ಎಸ್ ಪಿ



ನಾಡಿನ ಸಮಸ್ತ ಜನತೆಗೆ ಗಣರಾಜ್ಯೋತ್ಸವದ
ಹಾರ್ದಿಕ ಶುಭಾಷಯಗಳು.




# ಕ.ಸಾ.ಪ ಅಧ್ಯಕ್ಷರ ಆಯ್ಕೆ



ಜೇವರ್ಗಿ: ತಾಲ್ಲೂಕಿನ ನೂತನ ಕಸಾಪ ಅಧ್ಯಕ್ಷರಾಗಿ ಆಯ್ಕೆಯಾದ ಶಿವಶರಣಪ್ಪ ಕೆ ಬಿರೆದಾರ ರವರಿಗೆ ಸಕ್ರೀಯ ವಕೀಲರಾದ ಸಿದ್ದು ಬಿ ಯಂಕಂಚಿ,ಸಾಮಾಜಿಕ ಹೋರಾಟಗಾರ ಸಂಗಮೇಶ ಸಂಕಾಲಿ,ಕ್ಷೇತ್ರ ಶಿಕ್ಷಣಾಧಿಕಾರಿ ಹಣಮಂತ್ರಾಯ ಹರನಾಳ ಹಾಗೂ ಇತರರು ಸೇರಿ ಸನ್ಮಾನಿಸಿ ಹರ್ಷ ವ್ಯಕ್ತ ಪಡಿಸಿದರು. ಮುಂದಿನ ದಿನಗಳಲ್ಲಿ ಎಲ್ಲಾ ಜವಾಬ್ದಾರಿಗಳನ್ನು ನಿಮ್ಮ ಸಹಕಾರದೊಂದಿಗೆ ನಡೆಸಿಕೊಂಡು ಹೋಗುತ್ತೇನೆಂದು ಎಸ್ ಕೆ ಬಿರೆದಾರ ಅವರು ಹೇಳಿದರು.

–ಚಂದ್ರ ಶಾ ಗೌಡ ಎಸ್.ಪಿ

ಕರುನಾಡ ಕಂದ
ಸಂಪುಟ–1 । ಸಂಚಿಕೆ–6
ದಿನಾಂಕ: 16–01–2022 । ಪುಟಗಳು: 20

# ಡಾ.ವಿಷ್ಣು ಸೇನಾ ಸಮಿತಿಯ ತಾಲೂಕ ಘಟಕ ವತಿಯಿಂದ ಸಾಹಸಸಿಂಹ ಡಾ.ವಿಷ್ಣುವರ್ಧನ್ ರವರ 12 ನೇ ಪುಣ್ಯ ಸ್ಮರಣೆಯ ಆಚರಣೆ



ದೇವದುರ್ಗ :ಸಾರ್ವಜನಿಕ ಆಸ್ಪತ್ರೆಯಲ್ಲಿ ಒಳ ಮತ್ತು ಹೊರ ರೋಗಿಗಳಿಗೆ ಅಭಿನವ ಭಾರ್ಗವ ಸಾಹಸ ಸಿಂಹ ಡಾ ವಿಷ್ಣುವರ್ಧನ ಅವರ ಪುಣ್ಯಸ್ಮರಣೆಯ ಸವಿನೆನಪಿಗಾಗಿ ಡಾ ವಿಷ್ಣು ಸೇನಾ ಸಮಿತಿಯಿಂದ ಹಾಲು ಮತ್ತು ಬ್ರೆಡ್ ವಿತರಣೆ ಮಾಡಲಾಯಿತು,

ಈ ಸಂಧರ್ಭದಲ್ಲಿ ಡಾ.ವಿಷ್ಣು ಸೇನಾ ಸಮಿತಿ ತಾಲೂಕು ಘಟಕದ ಅಧ್ಯಕ್ಷರಾದ ಅಯ್ಯಣ್ಣ ಕಟ್ಟಿಮನಿಯವರು ಮಾತನಾಡಿ ಡಾ ವಿಷ್ಣು ಅವರು ಇಲ್ಲದೇ ಇಂದಿಗೆ 12 ವರ್ಷಗಳಾಗಿದ್ದರು ಇವತ್ತಿಗೂ ವಿಷ್ಣು ಅಪ್ಪಾಜಿ ನಮ್ಮ– ನಿಮ್ಮೆಲ್ಲರ ಮನದಲ್ಲಿ ಹಚ್ಚು ಹಸಿರಾಗಿ ಉಳಿದಿದ್ದಾರೆ ದೇಶವಿದೇಶಗಳಲ್ಲಿ ಅಪಾರ ಅಭಿಮಾನಿಗಳನ್ನು ಹೊಂದಿರುವ ಅಪ್ಪಾಜೀಯವರು ಪ್ರತಿಯೊಬ್ಬ ಅಭಿಮಾನಿಗಳ ಹೃದಯದಲ್ಲಿ ಗಟ್ಟಿಯಾಗಿ ನೆಲೆಸಿದ್ದಾರೆ ಎಂದು ಡಾ ವಿಷ್ಣು ಸೇನಾ ಸಮಿತಿಯ ತಾಲೂಕು ಅಧ್ಯಕ್ಷ ಅಯ್ಯಣ್ಣ ಕಟ್ಟಿಮನಿಯವರು ಹೇಳಿದರು,

ನಂತರ ಡಾ ವಿಷ್ಣು ಸೇನಾ ಸಮಿತಿಯ ಗೌರವ ಅಧ್ಯಕ್ಷರಾದ ರಾಮಣ್ಣನಾಯಕ ಮಾತನಾಡಿ ವಿಷ್ಣುವರ್ಧನ ಅವರು ಅಭಿಮಾನಿಗಳ ಪಾಲಿನ ಆರಾಧ್ಯ ದೈವ ಮತ್ತು ಎಲ್ಲರನ್ನೂ ಒಂದೇ ರೀತಿಯಲ್ಲಿ ಗೌರವಿಸುವ ವ್ಯಕ್ತಿತ್ವದ ಗುಣವುಳ್ಳ ಮೇರು ನಟರು. ಚಿತ್ರರಂಗದಲ್ಲಿ ಅಭಿನಯ ಅಲ್ಲದೇ ನಾಡು ನುಡಿ ಸಾಹಿತ್ಯ ಭಾಷೆಗೆ ಒತ್ತುಕೊಟ್ಟ ಮಹಾನಟರು ನಮ್ಮ ಅಪ್ಪಾಜೀಯವರ ವ್ಯಕ್ತಿತ್ವದ ಗುಣಗಳು ಅವರು ನಡೆದು ಬಂದ ಕಷ್ಟದ ದಾರಿಯಲ್ಲಿ ಬಂದ ಸಾಧನೆ ನಮ್ಮಗೆಲ್ಲಾ ಮಾದರಿ ಆಗಿದ್ದಾವೆ ಅವರು ತಮ್ಮ ಕುಟುಂಬ ವರ್ಗವನ್ನು ಮತ್ತು ನಮ್ಮನ್ನು ಹಾಗೂ ಅಪಾರ ಅಭಿಮಾನಿ ಬಳಗವನ್ನು ಅಗಲಿ ಇಂದಿಗೆ ಬರೋಬ್ಬರಿ 12 ವರ್ಷಗಳ ಆದರೂ ಈ 12 ವರ್ಷಗಳಲ್ಲಿ ಅವರನ್ನು ಅಭಿಮಾನಿಗಳು ನೆನೆಯದ ದಿನವಿಲ್ಲವೆಂದು ರಾಮಣ್ಣನಾಯಕ ಹೇಳಿದರು,

ಈ ಸಂಧರ್ಭದಲ್ಲಿ ಡಾ.ವಿಷ್ಣುಸೇನಾ ಸಮಿತಿಯ ಕಾರ್ಯಾರ್ದಕ್ಷ ಮಹಮ್ಮದ್ ಪಾನ್ ಶಾಪ್, ಕೋಶ್ಯಾಧ್ಯಕ್ಷ ವೆಂಕೋಬ ನನ್ನೂರೆ, ಆಸ್ಪತ್ರೆಯ ವೈದ್ಯಾಧಿಕಾರಿ ಡಾ ರಾಜಕುಮಾರ ಹುಲಿಮನಿ, ಪ್ರಧಾನ ಕಾರ್ಯದರ್ಶಿ ನಿರಂಜನ ಮಸರಕಲ್, ಸಂಘಟನಾ ಕಾರ್ಯದರ್ಶಿ ನಾಗರಾಜ ಮಜ್ಗಿ, ಹಾಗೂ ಅಪ್ಪಾಜಿಯವರ ಹಿರಿಯ ಅಭಿಮಾನಿ ಮೈನುದ್ದಿನ್ ಕಾಟಮಳ್ಳಿ, ಕರ್ನಾಟಕ ರಕ್ಷಣಾ ಸೇನೆ ಅಧ್ಯಕ್ಷ ಟಿ.ಜಯರಾಜ, ಕರವೇ ಗೌರವ ಅಧ್ಯಕ್ಷ ಪೊಮಣ್ಣ ಪವಾರ , ಕರಸೇ ಪ್ರಧಾನ ಕಾರ್ಯದರ್ಶಿ ಶಿವಪುತ್ರ ಉಪ್ಪಾರ ಹಾಗೂ ಡಾ.ವಿಷ್ಣು ಸೇನಾ ಸಮಿತಿಯ ಪದಾಧಿಕಾರಿಗಳು ಅಭಿಮಾನಿಗಳು ಉಪಸ್ಥಿತರಿದ್ದರು.

–ಹನುಮಂತ ರಾಥೋಡ್

# ಕಾಂಗ್ರೇಸ್ ನ ಸಂಸದ ಡಿ ಕೆ ಸುರೇಶ ಗೂಂಡಾ ವರ್ತನೆ ಶಿಗ್ಗಾವಿಯಲ್ಲಿ ಬಿಜೆಪಿ ಪ್ರತಿಭಟನೆ




ಶಿಗ್ಗಾಂವ್– ಕಾಂಗ್ರೆಸ್ ನ ಸಂಸದ ಡಿ ಕೆ ಸುರೇಶ್ ಹಾಗೂ ಅವರ ಸಂಬಂಧಿ ಕಾಂಗ್ರೆಸ್ ಒಐಅ ರವಿಯಿಂದ ರಾಮನಗರದಲ್ಲಿ ವೇದಿಕೆ ಮೇಲೆ ಗೂಂಡಾ ವರ್ತನೆ ಖಂಡಿಸಿ ಶಿಗ್ಗಾವಿಯ ಚನ್ನಮ್ಮ ಸರ್ಕಲ್ ನಲ್ಲಿ ಬಿಜೆಪಿ ಯುವ ಮೋರ್ಚಾ ವತಿಯಿಂದ ಸಂಸದ ಡಿ ಕೆ ಸುರೇಶ ಅವರ ಭಾವಚಿತ್ರ ಸುಡುವ ಮೂಲಕ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಅದ್ಯಕ್ಷ ಶಿವಾನಂದ ಮ್ಯಾಗೇರಿ, ಪುರಸಭೆ ಅದ್ಯಕ್ಷೆ ರೂಪಾ ಬನ್ನಿಕೊಪ್ಪ, ನರಹರಿ ಕಟ್ಟಿ, ಬಸನಗೌಡ ರಾಮನಗೌಡ, ಮಲ್ಲೇಶಪ್ಪ ಹರಿಜನ್, ಉಷಾ ಬಿಳೆಕುದುರಿ, ಮಂಜುನಾಥ್ ಬ್ಯಾಹಟ್ಟಿ, ಸಿದ್ದಾರ್ಥ ಗೌಡ ಪಾಟೀಲ್, ಆನಂದ ಸುಬೇದಾರ್, ದಯಾನಂದ ಅಕ್ಕಿ, ಶಿವರಾಜ್ ರಾಯಣ್ಣನವರ, ಕಾಶಿನಾಥ್ ಕಳಿಮನಿ, ವಿನಯ್ ಮುಂಡಗೋಡ, ಪ್ರತೀಕ್ ಕೊಳೆಕಾರ್, ಚೇತನ ಕಲಾಲ್ ಸೇರಿದಂತೆ ಬಿಜೆಪಿ ಮುಖಂಡರು ಪ್ರತಿಭಾಟನೆಯಲ್ಲಿ ಭಾಗಿಯಾಗಿದ್ದರು.

–ಮಂಜುನಾಥಗೌಡ ಪಾಟೀಲ

# ಪ್ರಧಾನಮಂತ್ರಿಗಳ ಭದ್ರತಾ ಕಾರ್ಯದಲ್ಲಿ ಪಂಜಾಬ್ ಸರ್ಕಾರ ವಿಫಲ:ವಜಾಗೊಳಿಸಲು ಬಿಜೆಪಿ ಪಕ್ಷ ಪಟ್ಟು



ಪ್ರಧಾನಮಂತ್ರಿಗಳ ಭದ್ರತಾ ಕಾರ್ಯದಲ್ಲಿ ವಿಫಲಗೊಂಡಿರುವ ಬಗ್ಗೆ ಪಂಜಾಬ್ ಸರ್ಕಾರವನ್ನು ವಜಾಗೊಳಿಸುವಂತೆ ಯಾದಗಿರಿ ಜಿಲ್ಲೆಯಲ್ಲಿ ಬಿಜೆಪಿ ಪಕ್ಷದ ಪಟ್ಟು

ದಿ 6 –1–2022 ರಂದು ಯಾದಗಿರಿ ನಗರದ ಸುಭಾಷ ವೃತ್ತದಲ್ಲಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷರಾದ ಶ್ರೀ ಮೌನೇಶ ರವರ ನೇತೃತ್ವದಲ್ಲಿ ಪಂಜಾಬ್ ಸರ್ಕಾರದಲ್ಲಿ ದೇಶದ ಪ್ರಧಾನಮಂತ್ರಿಗಳಿಗೆ ವಿರೋಧವಾಗಿ ಭದ್ರತೆಯನ್ನು ಮಾಡಬೇಕಾದ ಸಂದರ್ಭದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲಗೊಂಡಿದೆ ಎಂದು ತೀವ್ರವಾಗಿ ಖಂಡಿಸುತ್ತಾ ಕೂಡಲೇ ಪಂಜಾಬ ಸರ್ಕಾರವನ್ನು ವಜಾಗೊಳಿಸಬೇಕೆಂದು ತಾಲ್ಲೂಕಿನ ತಹಸೀಲ್ದಾರ್ ರವರ ಮುಖಾಂತರ ಮಾನ್ಯ ರಾಜ್ಯ ಪಾಲರಿಗೆ ಮನವಿ ಪತ್ರವನ್ನು ರವಾನಿಸಲಾಯಿತು.

ಈ ಸಂಧರ್ಭದಲ್ಲಿ ಬಿಜೆಪಿ ಪಕ್ಷದ ಜಿಲ್ಲಾಧ್ಯಕ್ಷ ಡಾ. ಶರಣಭೂಪಾಲರೆಡ್ಡಿ,

ನಗರಸಭೆ ಅಧ್ಯಕ್ಷ ವಿಲಾಸ ಬಿ ಪಾಟೀಲ, ಉಪಾಧ್ಯಕ್ಷೆ ಪ್ರಭಾವತಿ ಮಾರುತಿ ಕಲಾಲ್, ಸದಸ್ಯರಾದ ಹಣಮಂತ ಇಟಗಿ, ಅಂಬಯ್ಯ ಶಾಬಾದಿ, ಸ್ವಾಮಿದೇವ ದಾಸನಕೇರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದೇವೇಂದ್ರನಾಥ ನಾದ, ಮಲ್ಲಣ್ಣಗೌಡ ಗುರುಸುಣಗಿ, ಮಲ್ಲು ಕೋಲಿವಾಡ, ಮಂಜುನಾಥ್ ಗುತ್ತೇದಾರ್, ಶ್ರೀಕಾಂತ್ ಬಾಚ್ವಾರ್, ನಾಗೇಂದ್ರ ಗಮಗ, ವಿಶ್ವ ಅಬ್ಬೇತುಮಕೂರ್, ರಮೇಶ್ ಶಿರವಾಳ, ಮಹೇಶ್ ಮಡಿವಾಳ, ಶಂಕರ ಸೋನಾರ, ಶರಣು ಆಶನಾಳ, ಚಂದ್ರಶೇಖರ್ ಕಡೆಸೂರ, ಹಣಮಂತ ವಲ್ಯಾಪುರೆ, ಮಲ್ಲಿಕಾರ್ಜುನಗೌಡ ಅನಸೂಗುರ, ರಿಯಾಜ್ ಕೊಲ್ಲೂರ, ಮಂಜುನಾಥ ಗುತ್ತೇದಾರ, ಶ್ರೀಧರ್ ರಾಯಚೂರು, ಸಿದ್ದು ಅಡಕಿ, ಅಜಯ ಮಡ್ಡಿ, ಖತಲಪ್ಪ ನಾಯಕೊಡಿ, ಸಾಬು ಚಂದ್ರಕಿ, ಮಲ್ಲು ಸ್ವಾಮಿ ಗುಡಿಮಠ, ಜನಾರ್ಧನ, ಶರಣುಗೌಡ ಐಕೂರ, ಮಲ್ಲು ತಳಕ, ಶಿವು ನಂದೇಪಲ್ಲಿ, ಬಂಗಾರಪ್ಪ ನಾಯಕ, ಶರಣು, ಬಸು ಬಳಿಚಕ್ರ, ಇಮಾನವೇಲ್ ಜಿಮ್ಮಿ, ಸಿದ್ದು ತಳಕ ಹಾಗೂ ಇನ್ನಿತರ ಪ್ರಮುಖ ಮುಖಂಡರುಗಳು ಹಾಗೂ ಕಾರ್ಯಕರ್ತರುಗಳು ಉಪಸ್ಥಿತರಿದ್ದರು.

–ಕನಕರಾಜ

ನಾಡಿನ ಸಮಸ್ತ ಜನತೆಗೆ ಗಣರಾಜ್ಯೋತ್ಸವದ ಹಾರ್ದಿಕ ಶುಭಾಷಯಗಳು.




## ಕ್ಷಮಿಸು ಗೆಳತಿ ಈ ಗೆಳೆಯನನ್ನು

ಕ್ಷಮಿಸು ಗೆಳತಿ ಈ ಗೆಳೆಯನನ್ನು
ನಿನ್ನನ್ನು ತೊರೆದು ಹೋದವನನ್ನು
ಮರೆತು ಬಿಡು ಗೆಳತಿ ನೀ ನನ್ನನ್ನು
ನಾ ನೀಡಿದ ಮೋಸದ ಒಲವನ್ನು.

ಹೇಳಲಾಗದ ಕಾರಣಗಳು ಹಲವು
ತಿಳಿಸಲಾಗದ ನೋವುಗಳು ಹಲವು
ಎಲ್ಲವೂ ನನಗೆ ನೀಡಿರಲು ನೋವು
ನಿಂಗೆ ನೀಡಲಾರೆ ಪ್ರೀತಿಯ ಹೂವು.

ಒಂದಾಗಲಾರದೆ ದೂರವಾಗೋಣ
ನೆನಪುಗಳಲ್ಲಿ ಸದಾ ಉಳಿಯೋಣ
ಮತ್ತೊಮ್ಮೆ ಕ್ಷಮಿಸು ನೀ ನನ್ನನ್ನು
ಮನಸಾರೆ ಮನ್ನಿಸು ನನ್ನೊಲವನ್ನು.

–ಸುನಿಲ್ ಲೇಖಕ್ ಎನ್
ಬೆಂಗಳೂರು ಗ್ರಾಮಾಂತರ

ಕರುನಾಡ ಕಂದ
ಸಂಪುಟ-1 | ಸಂಚಿಕೆ-6
ದಿನಾಂಕ: 16-01-2022 | ಪುಟಗಳು: 20

# ಆಸಕ್ತಿ ಇದ್ದರೆ ಕಲಿಯಲು ಎಲ್ಲಾ ವಿಷಯವೂ ಸುಲಭ



ಶಿಗ್ಗಾವಿ:ಎಲ್ಲಾ ವಿಷಯಗಳನ್ನು ಚೆನ್ನಾಗಿ ಮನನ ಮಾಡಿಕೊಂಡು ಅಂದಿನ ವಿಷಯಗಳನ್ನು ಅಂದೇ ಅಭ್ಯಾಸ ಮಾಡಿರಿ ಎಂದು ತಾಲೂಕಾ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಭಯ್ಯ ಕೆ ಚಿಕ್ಕಮಠ ಹೇಳಿದರು. ಪಟ್ಟಣದ ಚನ್ನಪ್ಪ ಕುನ್ನೂರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ತಾಲೂಕ ಮಟ್ಟದ ವಿಜ್ಞಾನ ವಿಷಯದ ರಸಪ್ರಶ್ನೆ ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡಿದ ಅವರು ಯಾವುದೇ ವಿಷಯ ಕಷ್ಟ ಅಲ್ಲ ಏಕೆಂದರೆ ಎಲ್ಲರೂ ವಿಜ್ಞಾನ ಮತ್ತು ಗಣಿತ ಕಷ್ಟದ ವಿಷಯ ಎನ್ನುತ್ತಾರೆ ಆದರೆ ನೂರಕ್ಕೆ ನೂರು ಅಂಕಗಳನ್ನು ಪಡೆಯಲು ಸಹಕಾರಿಯಾಗುವ ವಿಷಯವೆಂದರೆ ಅದು ವಿಜ್ಞಾನ ಮತ್ತು ಗಣಿತ ಅಲ್ಲದೇ ತಾಲೂಕ ಮಟ್ಟದಲ್ಲಿ ಆಯ್ಕೆಯಾದ ವಿಧ್ಯಾರ್ಥಿಗಳು ಜಿಲ್ಲಾ ಮಟ್ಟದಲ್ಲಿ ಉತ್ತಮವಾಗಿ ನಿಮ್ಮ ಪ್ರತಿಭೆಯನ್ನು ಹೊರಹಾಕಿ ತಾಲೂಕಿಗೆ ಕೀರ್ತಿ ತರುವ ಕೆಲಸವಾಗಬೇಕು ಎಂದರು.ಶಿಕ್ಷಣ ಸಂಯೋಜಕ ಬಸವರಾಜ ಮಾಳಗಿ ಮಾತನಾಡಿ ಇಂದಿನ ಯುವಕರೇ ನಾಳಿನ ಪ್ರಜೆಗಳು ಆ ನಿಟ್ಟಿನಲ್ಲಿ ತಾಲೂಕಿನ ಎಲ್ಲ ಮಕ್ಕಳು ಉತ್ತಮವಾಗಿ ವಿದ್ಯಾರ್ಜನೆ ಮಾಡಿ ಬೇರೆ ಚಟುವಟಿಕೆಗಳಿಗೆ ಕಾಲಹರಣ ಮಾಡದೇ ವಿದ್ಯಾಭ್ಯಾಸವನ್ನು ನಿರಂತರವಾಗಿ ಮಾಡಿದಲ್ಲಿ ಪ್ರಯತ್ನಕ್ಕೆ ಫಲ ಸಿಗುವುದು ಶತಸಿದ್ಧ ಎಂದರು. ಅಧ್ಯಕ್ಷತೆ ವಹಿಸಿ ಪ್ರಾಚಾರ್ಯ ಶಿವು ಹಾವೇರಿ ಮಾತನಾಡಿ ನಮ್ಮ ದೇಶದಲ್ಲಿರುವ ಸಂಸ್ಕೃತಿಗೆ ಬೆಲೆ ಕಟ್ಟಲಾಗದು ಇಂದು ವಿದೇಶಿಯರು ನಮ್ಮ ಸಂಸ್ಕೃತಿಗೆ ಮಾರು ಹೋಗುತ್ತಿದ್ದಾರೆ ನಾವು ವಿದೇಶಿಯರ ಸಂಸ್ಕೃತಿಗೆ ಮಾರು ಹೋಗುತ್ತಿದ್ದೇವೆ ಆದ್ದರಿಂದ ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕು ಅಂದರೆ ನಾವು ಶಿಕ್ಷಣಕ್ಕೆ ಹೆಚ್ಚಿನ ಮಾನ್ಯತೆ ನೀಡಬೇಕು ಹಾಗೂ ನಿಮ್ಮಲ್ಲಿರುವ ಪ್ರತಿಭೆಯನ್ನು ದೇಶ ಮಟ್ಟಕ್ಕೆ ಪ್ರಸರಿಸುವಂತಹ ವಿದ್ಯಾರ್ಥಿಗಳು ನೀವಾಗಬೇಕು ಎಂದರು. ಕನ್ನಡ ಮಾಧ್ಯಮದಲ್ಲಿ ಆದಿತ್ಯಾ ಕಟ್ಟಿಮನಿ, ರಕ್ಷಿತಾ ಮುಳಗುಂದ, ಅಕ್ಷತಾ ಟೊಪ್ಪನವರ,ಲತಾ ಬೆನ್ನೂರ, ಗೌರಮ್ಮ.ಆಯ್.ಎಮ್, ಅಂಬಿಕಾ ಸಾವಳಗಿ, ಆಂಗ್ಲ ಮಾಧ್ಯಮದಲ್ಲಿ ನಿಖಿತಾ ಕ್ವಾಟಿ, ತನುಶ್ರೀ ಮಾಳವಾದೆ, ಸಹನಾ ಪಾಟೀಲ ವಿಜೇತರಾದರು.ಈ ಸಂದರ್ಭದಲ್ಲಿ ಬಸವರಾಜ ಮಮದಾಪೂರ, ಆರ್.ಹೆಚ್.ಕೊರಡೂರ, ವಿಕ್ರಮ ಮರಾಠೆ, ಶೇಖರಗೌಡ ಪರಸಾಪೂರ, ಸುನೀಲ ಮ್ಯಾಗೇರಿ ಸೇರಿದಂತೆ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಶಿಕ್ಷಕಿ ಮಂಜುಳಾ ಪಾಟೀಲ ಪ್ರಾರ್ಥಿಸಿದರು, ಶಿಕ್ಷಕ ಎಸ್.ಎಫ್.ಜಂಗ್ಲೇಪ್ಪನವರ ಸ್ವಾಗತಿಸಿದರು, ವಿಜ್ಞಾನ ವೇದಿಕೆಯ ಕಾರ್ಯದರ್ಶಿ ಡಿ.ಆರ್. ತೋಟಗೇರ ವಂದಿಸಿದರು, ಶಿಕ್ಷಕ ಮಾರುತಿ ಲಮಾಣಿ ಕಾರ್ಯಕ್ರಮ ನಿರ್ವಹಿಸಿದರು.

-ಮಂಜುನಾಥ ಗೌಡ ಪಾಟೀಲ್

# 365ದಿನ 22 ಸಸಿ ನೆಡುವ ವನಸಿರಿ ಸಂಕಲ್ಪ-ವನಸಿರಿ ಅಮರೇಗೌಡ ಮಲ್ಲಾಪುರ ವನಸಿರಿ ಸಂಸ್ಥಾಪಕ ಅಧ್ಯಕ್ಷರು



ಸಿಂಧನೂರು ತಾಲೂಕಿನ ಸರ್ಕಾರಿ ಪ್ರೌಢಶಾಲೆ ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ತಿಮ್ಮಾಪುರ್ ಶಾಲೆ ಆವರಣದಲ್ಲಿ ವನಸಿರಿ ಫೌಂಡೇಶನ್ ವತಿಯಿಂದ 22 ಸಸಿ ನೆಡಲಾಯಿತು.

365 ದಿನ 22 ಸಸಿ ನೆಡುವ ಉದ್ಘಾಟನೆಯನ್ನು ಪ್ರೌಢ ಶಾಲೆಯ ಮುಖ್ಯಗುರುಗಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಗುರುಗಳು ಗಿಡ ನೆಡುವ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಪ್ರೌಢಶಾಲೆ ಮುಖ್ಯ ಗುರುಗಳಾದ ಚಂದ್ರಮೌಳೇಶ್ವರ. ಅಮರೇಶ್ ಶಿಕ್ಷಕರು. ಸರ್ಕಾರಿ ಪ್ರಾಥಮಿಕ ಗುರುಗಳಾದ ವಿರುಪಾಕ್ಷಪ್ಪ. ರಂಗನಾಥ್ ಶಿಕ್ಷಕರು. ಪ್ರಕಾಶ್ ಶಿಕ್ಷಕರು. ಶರಣೆಗೌಡ



ಹೇಡಿಗಿನಾಳ. ಗಿರಿಸ್ವಾಮಿ ಹೇಡಿಗಿನಾಳ.ವಿಶ್ವನಾಥ್ ಪಾಟೀಲ್ ಹರ್ಲಾಪುರ್. ವೆಂಕಟರಡ್ಡಿ ಹೇಡಿಗಿನಾಳ. ರಾಜು ಬಳಗಾನೂರ. ವೀರಭದ್ರಯ್ಯಸ್ವಾಮಿ ತಿಮ್ಮಪುರ್. ವನಸಿರಿ ಮುದಿಯಪ್ಪ. ಸರ್ಕಾರಿ ಪ್ರೌಢಶಾಲೆಯ ಸರ್ವ ಶಿಕ್ಷಕರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರು. ವನಸಿರಿ ಫೌಂಡೇಶನ್ ಸರ್ವ ಸದಸ್ಯರು ಹಾಗೂ ಶಾಲೆಯ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

# ಪಂಚಮಸಾಲಿ ಸಮಾಜದ ನಾಲ್ಕನೇ ಹಂತದ ಪ್ರತಿಜ್ಞಾ ಪಂಚಾಯತ ರಾಜ್ಯ ಅಭಿಯಾನ ಹಾಗೂ ಪಾದಯಾತ್ರೆಯ ವರ್ಷಾಚರಣೆ

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ, ಧಾರವಾಡ ಜಿಲ್ಲಾ ಕುಂದಗೋಳ ತಾಲೂಕಿನ ಲಿಂಗಾಯತ ಪಂಚಮಸಾಲಿ ಸಮಾಜದ ನಾಲ್ಕನೇ ಹಂತದ ಪ್ರತಿಜ್ಞಾ ಪಂಚಾಯತ ರಾಜ್ಯ ಅಭಿಯಾನ ಹಾಗೂ ಪಾದಯಾತ್ರೆಯ ವರ್ಷಾಚರಣೆ ಮತ್ತು ಹೀರೆಗುಂಜಳ ಗ್ರಾಮದ ವತಿಯಿಂದ ರಾಷ್ಟ್ರಮಾತೆ ವೀರರಾಣಿ ಕಿತ್ತೂರು ಚೆನ್ನಮ್ಮ ಅವರ 243ನೇ ಜಯಂತೋತ್ಸವ ಹಾಗೂ ವಿಜಯೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮವು ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಮಹಾಸ್ವಾಮಿಗಳು ಕೂಡಲಸಂಗಮ ಮತ್ತು ಶ್ರೀ ತ್ರಿವಿಧ ದಾಸೋಹಿ ಪರಮಪೂಜ್ಯ ಬಸವಣ್ಣ ಅಜ್ಜನವರು ಕಲ್ಯಾಣಪುರಮಠ ಕುಂದಗೋಳ ಇವರ ದಿವ್ಯ ಸಾನಿಧ್ಯದಲ್ಲಿ ಜರುಗಿತು. ಕಾರ್ಯಕ್ರಮದ ಪೂರ್ವದಲ್ಲಿ ವಿವಿಧ ಕಾಲಾತಂಡದೊಂದಿಗೆ ಹಾಗೂ 108 ಕುಂಭಮೇಳ ಹೊತ್ತ ಮಹಿಳೆಯರೊಂದಿಗೆ ರಾಷ್ಟ್ರಮಾತೆ ವೀರರಾಣಿ ಕಿತ್ತೂರು ಚೆನ್ನಮ್ಮನವರ ಭಾವಚಿತ್ರವನ್ನು ಗ್ರಾಮದ ತುಂಬ ಮೆರವಣಿಗೆ ಮಾಡಲಾಯಿತು.

ರಾಷ್ಟ್ರಮಾತೆ ವೀರರಾಣಿ ಕಿತ್ತೂರು ಚೆನ್ನಮ್ಮನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮಿಜಿಯವರು, ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಪಡೆಯುವ ಹೋರಾಟದಲ್ಲಿ



ಕುಂದಗೋಳ ತಾಲೂಕಿನ ಪಾತ್ರ ದೊಡ್ಡದಿದೆ. ಆ ಕಾರಣದಿಂದ ಲಿಂಗಾಯತ ಪಂಚಮಸಾಲಿ ಸಮಾಜದ ನಾಲ್ಕನೇ ಹಂತದ ಪ್ರತಿಜ್ಞಾ ಪಂಚಾಯತ ಬೃಹತ್ ರಾಜ್ಯ ಅಭಿಯಾನ ಇಲ್ಲಿ ಜರುಗಿಸಲಾಗುತ್ತದೆ, ಇದು ಬಹಳ ಬೇಗನೆ ನಡೆಯಬೇಕಿತ್ತು ಹಲವಾರು ಕಾರಣಾಂತರಗಳಿಂದ ಇಂದು ನಡೆಯುತ್ತಿದೆ. 2022 ಜನೇವರಿ 14 ನೇ ತಾರಿಕಿಗೆ 2ಎ ಮೀಸಲಾತಿ ಪಡೆಯಬೇಕೆಂಬ ಹೋರಾಟ ಒಂದು ವರ್ಷ ಪೂರೈಸಿದೆ. ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಲು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ರವರು ಸಮ್ಮತಿ ಸೂಚಿಸಿದ್ದಾರೆ ಇದು ಖುಷಿ ಪಡುವ ವಿಷಯವಾಗಿದೆ.

ಆದರೆ ನಮಗೆ 2ಎ ಮೀಸಲಾತಿ ಅಧಿಕೃತವಾಗಿ ಸಿಗುವವರೆಗು ನಾವೆಲ್ಲರೂ ಸೇರಿ ಒಗ್ಗಟ್ಟಿನಿಂದ ನಮ್ಮ ಹೋರಾಟ ಮಾಡಬೇಕು. ಈ ತರಹದ ಸಭೆ ಸಮಾವೇಶಗಳು ರಾಜ್ಯದ ತುಂಬೆಲ್ಲ ನಡೆಯಬೇಕು. ನಮ್ಮೆಲ್ಲರ ಗುರಿ 2ಎ ಮೀಸಲಾತಿ ಪಡೆಯುವುದು ಒಂದೇ ಆಗಿರಬೇಕು ಎಂದು ಹೇಳಿದರು.

ಮಹಾಸ್ವಾಮಿಗಳ ಉದ್ದೇಶ ಮಠಕಟ್ಟಿ ಆಶೀರ್ವಾದ ಮಾಡುವುದು ಅಷ್ಟೇ ಅಲ್ಲದೆ ಸಾಮಾನ್ಯ ಜನರ ನೋವು ತೊಂದರೆಗೆ ಪರಿಹಾರ, ಮಧ್ಯಮ ವರ್ಗದ ಮಕ್ಕಳಿಗೆ ಒಳಿತು ಆಗಬೇಕೆನ್ನುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. ರಾಜ್ಯದಲ್ಲಿ ಬಹಳ ಕಡೆ ಪಾದಯಾತ್ರೆ ಮಾಡಿ ಸರಕಾರ ಎಚ್ಚರಿಸುವ ಕೆಲಸ ಮಾಡುತ್ತಿದ್ದಾರೆ ಎಂದು ತಾಲೂಕಿನ ಮಾಜಿ ಶಾಸಕರು ಎಂ ಎಸ್ ಅಕ್ಕಿ ಹೇಳಿದರು.

ಕರ್ನಾಟಕದಲ್ಲಿ ಹೆಚ್ಚು ಭಾಗ ಲಿಂಗಾಯತ ಪಂಚಮಸಾಲಿ ಸಮಾಜ ಹೊಂದಿದೆ ಈ ಸಮಾಜದಲ್ಲಿ ಬಡವರಿದ್ದಾರೆ ಆದ ಕಾರಣ ಸರಕಾರ ನಮ್ಮ ಸಮಾಜವನ್ನು ಗಮನಿಸಿ 2ಎ ಮೀಸಲಾತಿ ನೀಡಬೇಕು. ಅದರಂತೆ ರಾಜ್ಯದಲ್ಲಿ ಇರುವ ನಮ್ಮ ಸಹೋದರ ಸಮಾಜದವರು ಸರಕಾರಕ್ಕೆ ಒತ್ತಾಯಮಾಡಿ ತಮ್ಮ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು ಎಂದರು.

ನಾವು ನಮ್ಮ ಗುರಿ ತಲುಪಲು ಮಾನಸಿಕವಾಗಿಯೂ ದೈಹಿಕವಾಗಿಯೂ ಗಟ್ಟಿಯಾಗಿ ಹೋರಾಟಕ್ಕೆ ಇಳಿಯಬೇಕು. ಹೊಲ ಇದೆ ಎಂಬ ಕಾರಣಕ್ಕೆ ನಮಗೆ 2ಎ ಮೀಸಲಾತಿ ಕೊಡಲು ನಿರಾಕರಿಸಿದ್ದಾರೆ. ಆದರೆ ಇಂದಿನ ಅತಿವೃಷ್ಟಿ ಮತ್ತು ಅನಾವೃಷ್ಟಿ ಇಂದ ಯಾವ ಬೆಳೆಯು ಬರುತ್ತಿಲ್ಲ. ಹೊಲ ಇದ್ದವನಿಗಿಂತ ಒಬ್ಬ ಮನೆ ಕಟ್ಟುವ ಗೌಂಡಿ ಸಾಹುಕಾರ ಇರುವದು ಕಾಣಬಹುದು. 2ಎ ಮೀಸಲಾತಿಯಿಂದ ಬಹಳ ಅವಕಾಶ ಒಲಿದು ಬರುತ್ತವೆ. ಮಕ್ಕಳ ಕಲ್ಯಾಣ ವಿಧ್ಯಾಭ್ಯಾಸ ದೃಷ್ಟಿ ಇಂದ 2ಎ ಮೀಸಲಾತಿ ನೀಡಬೇಕೆಂದು ಮುಖ್ಯಮಂತ್ರಿಗಳಿಗೆ ತಿಳಿಸಿದ್ದೇವೆ ಎಂದು ಧಾರವಾಡ ಪಶ್ಚಿಮ ಕ್ಷೇತ್ರದ ಶಾಸಕರು ಅರವಿಂದ ಬೆಲ್ಲದ ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ವೇ.ಮೂ. ಸಿದ್ರಾಮಯ್ಯ ಚ. ಹಿರೇಮಠ. ಪಂಚಗೃಹ ಹಿರೇಮಠ ಹಿರೇಗುಂಜಳ, ಅರವಿಂದಪ್ಪ ಕಟಗಿ, ಶಿವಪ್ಪ ಕಮತ (ದೇಸಾಯಿ), ಶೇಕಪ್ಪ ಕಮಡೊಳ್ಳಿ, ಸುಭಾಸ್ ಪೂಜಾರ್, ನಿರೂಪಣೆ ಚನ್ನವೀರಪ್ಪ ಫ. ಕೊಡ್ಲಿ ಮತ್ತು ಊರಿನ ಗುರು-ಹಿರಿಯರು ಪ್ರಮುಖರು ಉಪಸ್ಥಿತರಿದ್ದರು.

- ಪ್ರವೀಣ್ ಎಸ್. ಕಾಲವಾಡಮಠ ಕುಂದಗೋಳ.

ಕರುನಾಡ ಕಂದ
ಸಂಪುಟ–1 । ಸಂಚಿಕೆ–6
ದಿನಾಂಕ: 16–01–2022 । ಪುಟಗಳು: 20

# ಕೊಳಕು ನಾರುತ್ತಿರುವ ಹಿರೇಗುಂಜಳ ಬಸ್ ನಿಲ್ದಾಣದ ಮೂತ್ರಾಲಯಗಳು.






ಕುಂದಗೋಳ ತಾಲೂಕಿನ ಹಿರೇಗುಂಜಳ ಗ್ರಾಮ ಪಂಚಾಯತಿಗೆ ಒಳಪಡುವ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿರುವ ಸಾರ್ವಜನಿಕ ಮೂತ್ರಾಲಯಗಳು ಸರಿಯಾದ ನಿರ್ವಹಣೆ ಇಲ್ಲದೆ ಹೊಲಸೆದ್ದು ಕೊಳಕು ನಾರುತ್ತಿವೆ. ಜನಸಾಮಾನ್ಯರು ಪ್ರಯಾಣ ಮಾಡುವ ಸಮಯದಲ್ಲಿ ಮೂತ್ರ ವಿಸರ್ಜನೆ ಅವಸರದಲ್ಲಿ ಇದ್ದಾಗ. ಈ ಮೂತ್ರಾಲಯಗಳಿಗೆ ತೆರಳಿ ಅವರು ಮೂತ್ರ ವಿಸರ್ಜನೆ ಮಾಡದೆ ಮರಳಿ ಬರುತ್ತಾರೆ. ಏಕೆಂದರೆ ಅಲ್ಲಿ ಬರುತ್ತಿರುವ ದುರ್ವಾಸನೆ ಮತ್ತು ಆ ಮೂತ್ರಾಲಯಗಳಲ್ಲಿ ಗುಂಪಾಗಿ ಬಿದ್ದಿರುವ ಹೊಲಸಿನ ಕಾರಣದಿಂದ.

ಇಲ್ಲಿಯ ಮೂತ್ರಾಲಯಗಳಲ್ಲಿ ಬೇಡದಿರುವ ವಸ್ತುಗಳೇ ತುಂಬಿವೆ, ಜನರು ವಿಸರ್ಜನೆ ಮಾಡಿದಂತಹ ಮೂತ್ರಗ ಸರಿಯಾಗಿ ಹೊರಗಡೆ ಹೋಗುವದಿಲ್ಲ ಅಲ್ಲಿಯೇ ನಿಂತು ನೀರಿನ ಕೆರೆಯಂತಾಗಿ ಬಿಡುತ್ತದೆ ಒಳಗೆ ಹೋಗುವಾಗ ಹೋಗುವಾಗ ಮತ್ತು ಹೊರಗೆ ಬರುವಾಗ ಆ ಮೂತ್ರವನ್ನು ಜಿಗಿದು ದಾಟಿಕೊಂಡು ಹೋಗಬೇಕು. ಇಲ್ಲಿ ಹೇಗೋ ಪುರುಷರು ಗಟ್ಟಿ ಮನಸ್ಸಿನಿಂದ ಮೂತ್ರವಿಸರ್ಜನೆ ಮಾಡಿ ಬರುತ್ತಾರೆ. ಆದರೆ ಮಹಿಳೆಯರ ಪಾಡು ಹೇಳಲಾಗದು.

ಈ ಕೆಟ್ಟ ವಾಸನೆ ಮತ್ತು ಹೊಲಸಿನಿಂದ ಅವರು ಮೂತ್ರಾಲಯಕ್ಕೆ ಹೋಗುವುದೇ ಇಲ್ಲ. ಇದ–ರಿಂದ ಪ್ರಯಾಣಿಕರು ಗ್ರಾಮದ ಆಡಳಿತ ವರ್ಗಕ್ಕೆ ಕಂಡಿತವಾಗಿಯು ಹಿಡಿಶಾಪ ಹಾಕುವರು.

ಜನರು ಬಸ್ ನಿಲ್ದಾಣದ ಒಳಗೆ ಬಸ್ ಗಾಗಿ ಕಾಯುತ್ತಿರುವಾಗ ಈ ಮೂತ್ರಾಲಯದ ಗಬ್ಬುವಾಸನೆ ಅಲ್ಲಿ ಕುಳಿತುಕೊಳ್ಳಲು ಬಿಡುವುದಿಲ್ಲ. ಬಸ್ ನಿಲ್ದಾಣದ ಅಕ್ಕಪಕ್ಕ ನಿಂತಾಗ ಈ ಕೆಟ್ಟವಾಸನೆ ತಲೆ ತಿರುಗುವಂತೆ ಮಾಡಿಬಿಡುತ್ತದೆ. ಇದರ ಬಗ್ಗೆ ಹಲವು ಸಾರಿ ಪಂಚಾಯತಿ ಮತ್ತು ಪಂಚಾಯತಿ ಅಧ್ಯಕ್ಷರ ಗಮನಕ್ಕೆ ತಂದರು ಅವರು ಯಾವುದೇ ತರಹದ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳದೇ ಇರುವುದು ಶೋಚನೀಯವಾಗಿದೆ.

ಇದು ಇದೊಂದೇ ಗ್ರಾಮದ ಕಥೆಯಲ್ಲ ಎಲ್ಲ ಗ್ರಾಮಗಳ ಕಥೆಯು ಇದೇ ಆಗಿದೆ. ಬಸ್ ನಿಲ್ದಾಣಕ್ಕೆ ಪ್ರಯಾಣಿಕರು ಮತ್ತು ಬಸ್ಸುಗಳು ಎಷ್ಟು ಮುಖ್ಯವೋ, ಅಷ್ಟೇ ಮುಖ್ಯವಾಗಿವೆ ಮೂತ್ರಾಲಯಗಳು.ಆ ಮೂತ್ರಾಲಯಗಳ ಸ್ವಚ್ಛತೆ ಎಂಬುದು ಅದಕ್ಕಿಂತ ಮುಖ್ಯವಾಗುತ್ತದೆ.

– ಪ್ರವೀಣ್ ಎಸ್ ಕಾಲವಾಡಮಠ

## ವಿದೇಶಿಯ ಪಕ್ಷಿಗಳಿಗೆ ಪ್ರೀತಿಯಿಂದ ಸ್ವಾಗತ ಕೋರುತ್ತಿದೆ ಶಿರಹಟ್ಟಿಯ ಮಾಗಡಿ ಕೆರೆ/ಪಕ್ಷಿಧಾಮ



ಪಕ್ಷಿಗಳ ತಾಣ ಎಂದೆ ಪ್ರಸಿದ್ಧವಾಗಿರುವ ಮಾಗಡಿ ಕೆರೆ ಇದು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕು ಮಾಗಡಿ ಎಂಬ ಗ್ರಾಮದಲ್ಲಿದೆ

ಮಾಗಡಿಯ ಉಡಚಮ್ಮ ದೇವಾಲಯದ ಮುಂಭಾಗದಲ್ಲಿರುವ ಕೆರೆ 134 ಎಕರೆ ವಿಸ್ತೀರ್ಣವನ್ನು ಹೊಂದಿದೆ ಇಲ್ಲಿಗೆ ಪ್ರತಿ ವರ್ಷ ನವೆಂಬರ್ ತಿಂಗಳಿನಿಂದ ಫೆಬ್ರುವರಿ ತಿಂಗಳವರೆಗೆ ಆಸ್ಟ್ರೇಲಿಯಾ. ಚೀನಾ. ಬರ್ಮಾ. ಮಂಗೋಲಿಯ ಇತರೆ ದೇಶಗಳಿಂದ ಸಾವಿರಾರು ಪಕ್ಷಿಗಳು ವಲಸೆ ಬರುತ್ತವೆ

ಮಾಗಡಿ ಕೆರೆ ಪರಿಸರ ವ್ಯವಸ್ಥೆಯ ಸೇವೆಗಳು ಮನರಂಜನೆ ಆವಾಸಸ್ಥಾನ ಪ್ರವಾಹ ನಿಯಂತ್ರಣ ಮಾಲಿನ್ಯ ತಡೆ ಮತ್ತು ಇತರೆ ಸೇವೆಗಳು ಉಪಸ್ಥಿತಿ ಇವೆ

ಕೆಲವು ಪಕ್ಷಿಗಳ ನಾಮಗಳು ಕಪ್ಪು ತಲೆಯ. ಕೆಂಬರಲು ಗದ್ದೆ. ಮಿಂಚುಳ್ಳಿ ,ಚಿಕ್ಕ ತೆನೆ ಬಾತು ,ಬೂದು ಸಿಪಿಲೆ .ಚಲುಕ ಬಾತು. ಬಿಳಿ ಬಾತು. ಹಾವಕ್ಕಿ ಇತರೆ ಜಾತಿ ಪಕ್ಷಿಗಳು ಇವೆ,

ಇಲ್ಲಿ ಪಕ್ಷಿಗಳು ತಮ್ಮದೇ ಆದ ಸ್ವತಂತ್ರ ತೆಯಿಂದ ನಲಿಯುತ್ತಾ . ಹಾರುತ್ತ ಕೆರೆಯ ಸೌಂದರ್ಯವನ್ನು ಹೆಚ್ಚಿಸುತ್ತಿದೆ. ನೋಡುಗರಿಗೆ ತಣಿಸುತ್ತ ಮತ್ತು ಮನ ಮೋಹಕವಾಗಿ ಗೋಚರಿಸುತ್ತದೆ.

ಇಲ್ಲಿ ಕೆಲವು ಸೂಚನಾ ಫಲಕಗಳನ್ನು ಗಮನಿಸಬಹುದಾಗಿದೆ .ಅದು ಮಾಗಡಿ ಕೆರೆ ಸಂರಕ್ಷಣಾ ಮೀಸಲು: ಇದರಲ್ಲಿ ಮಾಗಡಿ ಕೆರೆಯು ನೀರಾವರಿ ಮತ್ತು ದೇಶಿಯ ಉದ್ದೇಶಕ್ಕಾಗಿ ನಿರ್ಮಿಸಲಾದ ಮಾನವ ನಿರ್ಮಿತ ಕೆರೆಯಾಗಿದೆ

80 ವರ್ಷಗಳಷ್ಟು ಹಳೆಯದಾದ ಈ ಕೆರೆ 53847 ಹ್ಯಾಕ್ಟರ್ (134.15 ಎಕರೆ) ಪ್ರದೇಶದಲ್ಲಿ ವ್ಯಾಪಿಸಿದೆ. ಇದು ಮಾಗಡಿ ಮತ್ತು ಹೊಳಲಪುರ ಎರಡು ಗ್ರಾಮಗಳಿಗೆ ಹೊಂದಿಕೊಂಡಿದೆ. ಕೆರೆಯು ಮಳೆಯಾಶ್ರಿತ ವಾಗಿದೆ ಮತ್ತು ಸುತ್ತಮುತ್ತಲಿನ ಭೂಮಿಯು ಜಲಾನಯನ ಪ್ರದೇಶವಾದ ಕಾರ್ಯನಿರ್ವಹಿಸುತ್ತದೆ ಎಂದು ಈ ಕೆರೆ ನೂರಾರು ವಲಸೆ ಸ್ಥಳ ಮತ್ತು ಗೂಡುಕಟ್ಟುವ ಪಕ್ಷಿಗಳು ಹಾಗೂ ವಿವಿಧ ಜಲಚರ ಪ್ರಾಣಿಗಳ ಆ ವಾಸವಾಗಿದೆ

ಭಾರತ ಸರಕಾರವು ಮಾಗಡಿ ಕೆರೆ ವಲಸೆ ನೀರಿನ ಪಕ್ಷಗಳ ಸೂಕ್ಷ್ಮ ಆವಾಸಸ್ಥಾನ ವೆಂದು ಗುರುತಿಸಿದೆ ಮತ್ತು ಪ್ರಮುಖ ಪ್ರದೇಶ ಎಂದು ಪಕ್ಷಿ ಪ್ರದೇಶ ಎಂದು ಗುರುತಿಸಲಾಗಿದೆ. ಕೆರೆಯ ಮಹತ್ವ ಮತ್ತು ಅದರ ಪರಿಸರ ಪ್ರಮುಖ್ಯತೆಯನ್ನು ಪರಿಗಣಿಸಿ ರಾಜ್ಯ ಸರ್ಕಾರವು ಈ ಕೆರೆಯನ್ನು 2013ರಲ್ಲಿ ಮಾಗಡಿ ಕೆರೆ ಸಂರಕ್ಷಣಾ ಮೀಸಲು ಎಂದು ಕರೆದರು

190ಕ್ಕೂ ಹೆಚ್ಚು ಜಾತಿಯ ಪಕ್ಷಿಗಳು ನೆಲೆಯಾಗಿವೆ

ಇಲ್ಲಿ ಪಕ್ಷಿಗಳು ಮತ್ತು ಗ್ರಾಮಸ್ಥರು ಸಾಮರಸ್ಯದಿಂದ ಬದುಕುತ್ತಾರೆ ಮತ್ತು ಪಕ್ಷಿಗಳನ್ನು ರಕ್ಷಿಸುತ್ತಾರೆ. ಇಲ್ಲಿ ಚಳಿಗಾದಲ್ಲಿ ಸುಮಾರು 4000 ದಿಂದ್ 5000 ಬಾರ್ ಹೆಡ್ ಗೂಸ ಜಾತಿಯ ಪಕ್ಷಿಗಳು ಭೇಟಿ ಕೊಡುತ್ತವೆ

ಜಾಗತಿಕವಾಗಿ ಅಳಿವಿನಂಚಿನಲ್ಲಿರುವ 26 ಪಕ್ಷಿಗಳಲ್ಲಿ 3 ಪಕ್ಷಿಗಳಾದ ಯುರೋಪಿಯನ್ 1ಸ್ಪೂನ್ ಬಿಲ್ 2ಕಾಲ್ ಡಾಕ್ 3 ಹರಿ ಗ್ರೀನ್ ಪಾಲ್ಕರ್ ಈ ಕೆರೆಗೆ ಭೇಟಿ ನೀಡುತ್ತವೆ

ಚಳಿಗಾಲದಲ್ಲಿ ಮಂಗೋಲಿಯಾ ಮತ್ತು ಟಿಬೆಟ್ ನಂತಹ ಸ್ಥಳಗಳಿಂದ ಸಾವಿರಾರು ಸಂಖ್ಯೆಯಲ್ಲಿ 'ಬಾರ್ ಏಡೆಡ್ ಡೆತ್'ಹೆಬ್ಬಾತುಗಳು ಪ್ರಬಲ ಹಿಮಾಲಯವನ್ನು ದಾಟಿ ಬರುವಾಗ ಮಾರ್ಚ್ ಆರಂಭದ ಇರುವಾಗ ಮಾಗಡಿ ಕೆರೆಯು ನೋಡಲು ಅತಿ ರಮಣೀಯವಾಗಿರುತ್ತದೆ.

ಈ ಪಕ್ಷಿಗಳು ವಲಸೆ ಸಮಯದಲ್ಲಿ ಹೆಬ್ಬಾತುಗಳು ಒಂದೇ ದಿನದಲ್ಲಿ 1609 ಕಿಲೋಮೀಟರ್ ಗಿಂತ ಹೆಚ್ಚು ಹಾರಲು ಸಾಧ್ಯವಾಗುತ್ತದೆ. ಅವು ಎಷ್ಟು ಪ್ರಬಲರಾಗಿದ್ದಾರೆಂದರೆ ಹಾರಿ ಹೋಗದೆ ಕ್ರಾಸ್ ವಿಂಡ್ ಗಳಲ್ಲಿ ಹಾರಲು ಸಾಧ್ಯವಾಗುತ್ತದೆ ತು ವಿ ಆಕಾರದ ರಚನೆಯಲ್ಲಿ ಹಾರುತ್ತದೆ ಮತ್ತು ಅಂತರವನ್ನು ಕಾಪಾಡಿಕೊಳ್ಳಲು ಪರವಾಗಿ ಪಕ್ಷಿಗಳ ದೃಷ್ಟಿ ಘೋಷವಾಗಿ ಮತ್ತು ಸ್ವರದಿಂದ ಪರಸ್ಪರ ಸಂವಹನ ನಡೆಸುತ್ತವೆ

ಈ ಸಮಯದಲ್ಲಿ ಸೂರ್ಯ ಮುಳುಗುತ್ತಿದ್ದಂತೆ ಈ ಹೆಬ್ಬಾತುಗಳು ಸುತ್ತಮುತ್ತಲಿನ ನೆಲಗಡಲೆಯ ಮತ್ತು ಭತ್ತದ ಗದ್ದೆಗಳಿಗೆ ತೆರಳಿ ಪ್ರತಿದಿನ ಬೆಳಗ್ಗೆ ಸಾವಿರಾರು ಸಂಖ್ಯೆಯಲ್ಲಿ ಸರೋವರಕ್ಕೆ ಇಳಿಯುತ್ತ ಹಗಲಿನಲ್ಲಿ ಅವುಗಳು ನಿದ್ರಿಸುತ್ತವೆ

ಸರೋವರಕ್ಕೆ ಇವುಗಳ ಆಗಮನವನ್ನು ಸ್ಥಳೀಯರು ಸುಮಾರು 15 ವರ್ಷಗಳ ಕಾಲ ದಾಖಲಿಸಿದ್ದಾರೆ ಇದು ವಿಶ್ವದ ಜಾತಿ ಪಕ್ಷಗಳು ಸೇರುವ ದೊಡ್ಡ ಪ್ರದೇಶಗಳಲ್ಲಿ ಒಂದಾಗಿದೆ

ಇಲ್ಲಿ ಬೇಟಿ ನೀಡಿದ ಕರುನಾಡ ಕಂದ ಪಾಕ್ಷಿಕ ಪತ್ರಿಕೆ ವರದಿಗಾರರು ರಾಜು &ರಾಕೇಶ್ ಆ ಪಕ್ಷಿಗಳನ್ನು ನೋಡಿ ಮನುಷ್ಯರು ಇಷ್ಟು ಸ್ವಾತಂತ್ರ್ಯವಾಗಿ ಇರಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಡುತ್ತಾರೆ

**–ರಾಕೇಶ್,ರಾಜು**

## ಕಾಲೇಜಿಗೆ ಉದ್ಘಾಟನೆಯ ಭಾಗ್ಯ ಯಾವಾಗ..?





ಕೊಪ್ಪಳ: ಜಿಲ್ಲೆಯ ಕುಕನೂರು ತಾಲೂಕಿನ ಮಂಗಳೂರು ಗ್ರಾಮದಲ್ಲಿ 2017_18 ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ನಿರ್ಮಾಣವಾದ ಸರಕಾರಿ ಪದವಿ ಪೂರ್ವ ಕಾಲೇಜ್ ಕೆಲಸ ಮುಗಿದು ವರ್ಷವಾದರೂ ಉದ್ಘಾಟನೆಯಾಗದೇ ಹಾಗೇ ಇದೆ ಈ ಜಾಗದಲ್ಲಿ ಬಿಯರ್ ಬಾಟಲ್, ಗುಟ್ಕಾ ಪಾಕೇಟ್ ಗಳನ್ನು ನಾವು ಕಾಣಬಹುದು ಜೊತೆಗೆ ಕಿಡಕಿಯ ಗಾಜುಗಳು ಒಡೆದಿವೆ .ಕ್ಲಾಸ್ ರೂಮ್ ಗಳಲ್ಲಿ ಗಲೀಜಿನ ವಾತಾವರಣ ಕಾಣುತ್ತಿದೆ ಹೇಳುವವರಿಲ್ಲ ಕೇಳುವವರಿಲ್ಲ ಅನೇಕ ಪ್ರದೇಶಗಳಲ್ಲಿ ಕಾಲೇಜುಗಳು ಇರುವುದಿಲ್ಲ ಆದರೆ ಮಂಗಳೂರಿನಲ್ಲಿ ಕಾಲೇಜುಇದ್ದರೂ ಇಲ್ಲದಂತೆ ಆಗಿದೆ ಈ ಕಟ್ಟಡವು ಉದ್ಘಾಟನೆಯಾಗದೆ ಹಾಗೇ ಬಿದ್ದು ಹೋಗುವ ಸಂಭವನೀಯತೆ ಕಾಣುತ್ತಿದೆ ಎಂದು ವಿದ್ಯಾರ್ಥಿಗಳು ಸಾರ್ವಜನಿಕರು ಮಾತನಾಡುತ್ತಿದ್ದಾರೆ ಸಂಬಂಧ ಪಟ್ಟ ಅಧಿಕಾ–ರಿಗಳು ಗಮನಹರಿಸಬೇಕಾಗಿದೆ .

**ವರದಿ:ರವಿ ನಿಂಗಪ್ಪ ಆಗೋಲಿ.**

## ಸಾಹಿತಿಗಳ ಪರವಾಗಿ ಅಭಿನಂದನಾ ಸಮಾರಂಭ



ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬಾಗಲಕೋಟೆ ನೂತನ ಜಿಲ್ಲಾಧ್ಯಕ್ಷರಾಗಿ ಜಯ ಸಾದಿಸಿದ ಸ್ನೇಹ ಜೀವಿ ಶ್ರೀ ಶಿವಾನಂದ ಜಿ ಶೇಲ್ಲಿಕೇರಿ ಇವರಿಗೆ ಜಮಖಂಡಿ ತಾಲೂಕ ಸಾಹಿತಿಗಳ ಪರವಾಗಿ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ನಾಡಗೀತೆಯನ್ನು ವೈ.ವೈ. ಕೊಕ್ಕನವರ ಗುರುಗಳು ಹಾಡಿದರು ಸ್ವಾಗತವನ್ನು ಸಂತೋಷ ತಳಿಕೇರಿ ಇವರು ಮಾಡಿದರು ಘನ ಅಧ್ಯಕ್ಷತೆಯನ್ನು c ಝುಲಕಿ ವಹಿಸಿ ಪ್ರಾಸ್ತವಿಕ ನುಡಿಗಳನ್ನು, b ಮಟೊಳಿ ಮಾಡಿದರು ಬಸವ ಚೇತನ ಕಾಲೇಜಿನ ಆಡಳಿತಾಧಿಕಾರಿ t p ಗಿರಡ್ಡಿ ಮತ್ತು ನೀಲಗುಂದ m c ಗೊಂದಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

ಕರುನಾಡ ಕಂದ
ಸಂಪುಟ–1 । ಸಂಚಿಕೆ–6
ದಿನಾಂಕ: 16–01–2022 । ಪುಟಗಳು: 20

# ಮುಗಿಲುಮುಟ್ಟಿದ ರೈತರ ಸಂಕಷ್ಟ

ಉರಿಯುತ್ತಿರುವ ಗಾಯದ ಮೇಲೆ ಬರೆ ಎಳೆದಂತೆ ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿಯೇ ಅನ್ನದಾತರ ಹಲವು ಸಮಸ್ಯೆಗಳು ಹೆಚ್ಚಾಗುತ್ತಿವೆ. ಭಾರತ ಹಳ್ಳಿಗಳಿಂದ ಕೂಡಿದ ದೇಶ ಭಾರತದ ಶೇಕಡಾ 65.07% ಜನಸಂಖ್ಯೆ ಹಳ್ಳಿಗಳಲ್ಲಿ ವಾಸಿಸುತ್ತಿದ್ದು ಬೇಸಾಯವನ್ನೇ ಮುಖ್ಯ ಕಸುಬನ್ನಾಗಿ ಸಿಕೊಂಡಿದ್ದಾರೆ. ಕಳೆದ ಎರಡು ವರ್ಷಗಳಿಂದ ಕೋವಿಡ್ ಪರಿಣಾಮದಿಂದಾಗಿ ಆರ್ಥಿಕವಾಗಿ, ಮಾನಸಿಕವಾಗಿ ಅನೇಕ ರೀತಿಯಲ್ಲಿ ರೈತರು ಬಹಳ ತೊಂದರೆ ಅನುಭವಿಸಿದ್ದು ಇನ್ನೇನು ಸ್ವಲ್ಪ ಚೇತರಿಸಿಕೊಳ್ಳುವಷ್ಟರಲ್ಲೇ ಅತಿವೃಷ್ಟಿ, ಅಕಾಲಿಕ ಮಳೆ, ಪ್ರವಾಹಗಳು ಮುಂತಾದ ಸಮಸ್ಯೆಗಳು ಹೆಚ್ಚಿದ್ದು ರೈತ ಸಮುದಾಯವನ್ನು ಮತ್ತಷ್ಟು ಕುಗ್ಗಿಸಿವೆ. ಇದಲ್ಲದೆ ರೈತರು ಬೆಳೆದ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಂಬಲ ಬೆಲೆ ಇಲ್ಲ. ಇದೆಲ್ಲದರ ಮಧ್ಯೆ ಯಾರಿಗೂ ತಿಳಿಯದೆ ರೈತರ ಆತ್ಮಹತ್ಯೆ ಪ್ರಕರಣಗಳು ದಿನೇದಿನೇ ಹೆಚ್ಚುತ್ತಿದೆ ಇಂತಹ ಅದೆಷ್ಟೋ ಅನ್ನದಾತರ ಸಮಸ್ಯೆಗಳಿಗೆ ಅಂತ್ಯ ಎಂದೋ ಆ ದೇವರೇ ಬಲ್ಲ!

2021ರಲ್ಲಿ ರಾಜ್ಯದ ಹಲವು ಕಡೆ ಅಕಾಲಿಕ ಭಾರಿ ಮಳೆಯಾಗಿದ್ದು ಮೆಕ್ಕೆಜೋಳ, ರಾಗಿ, ಮತ್ತು ಅನೇಕ ರೀತಿಯ ತರಕಾರಿ ಬೆಳೆಗಳು ಅತಿಹೆಚ್ಚು ಹಾಳಾಗಿವೆ. ಈ ವರ್ಷದ ಅಕ್ಟೋಬರ್ ನವೆಂಬರ್ ತಿಂಗಳುಗಳಲ್ಲಿ ಅಕಾಲಿಕ ಭಾರಿ ಮಳೆಯಿಂದಾಗಿ ರಾಜ್ಯದಲ್ಲಿ 7.9 ಹೆಕ್ಟೇರ್ ಗಳಲ್ಲಿ ಕೃಷಿ ಬೆಳೆಗಳು, 1.25 ಲಕ್ಷ ಹೆಕ್ಟೇರ್ ನಲ್ಲಿ ತೋಟಗಾರಿಕೆ ಬೆಳೆಗಳು, 243 ಹೆಕ್ಟೇರ್ ರೇಷ್ಮೆ ಬೆಳೆಗಳು ಹಾನಿಗೊಳಗಾಗಿವೆ. ಅಲ್ಲದೇ ಸುಮಾರು 74 ಸಾವಿರಕ್ಕೂ ಹೆಚ್ಚು ಹೆಕ್ಟೇರ್ ತೋಟ ಗಾಳಿ ಮಳೆಯಿಂದ ನೆಲಸಮವಾಗಿದೆ ಎಂದು ರಾಜ್ಯ ಸರ್ಕಾರ ಅಂ–ದಾಜಿಸಿದೆ. ರಾಜ್ಯದಲ್ಲಿ 1.5 ಲಕ್ಷ ರೈತರಿಗೆ ಅಕಾಲಿಕ ಮಳೆಯಿಂದ ರಾಗಿ ಬೆಳೆ ಕೈಗೆ ಬಂದಂತಹ ತುತ್ತು ಬಾಯಿಗೆ ಸಿಗದಂತಾಗಿದೆ.ದೇಶದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಹಲವು ವರ್ಷಗಳಿಂದ ಹೆಚ್ಚುತ್ತಿದ್ದು 2020ರಲ್ಲಿ ಸುಮಾರು 5.5 79 ಲಕ್ಷ ಭಾರತೀಯ ರೈತರು ಆತ್ಮಹತ್ಯೆಯಿಂದ ಸಾವನ್ನಪ್ಪಿದ್ದಾರೆ ಎಂದು ರಾಷ್ಟ್ರೀಯ ಅಪರಾಧ ಬ್ಯೂರೋ ವರದಿ ಪ್ರಕಟಿಸಿದೆ. 2017 –18 ನೇ ಕೆಲವು ಅಂಕಿ ಅಂಶಗಳ ಅಂದಾಜಿನ ಪ್ರಕಾರ ಪ್ರತಿದಿನ ಸರಾಸರಿ ಹತ್ತಕ್ಕಿಂತ ಹೆಚ್ಚು ರೈತರು ನಮ್ಮ ದೇಶದಲ್ಲಿ ಆತ್ಮಹತ್ಯೆಯಿಂದ ಸಾಯುತ್ತಿದ್ದಾರೆ. ಕಳೆದ ಎರಡು ದಶಕಗಳಲ್ಲಿ ಭಾರತದಲ್ಲಿ ಸರಿ ಸುಮಾರು 12 ಲಕ್ಷ ಜನ ಹಾವು ಕಡಿತದಿಂದ ಸಾವನ್ನಪ್ಪಿದ್ದಾರೆ ಇದರಲ್ಲಿ ಶೇಕಡಾ 90ಕ್ಕೂ ಅಧಿಕ ಜನ ರೈತರಾಗಿದ್ದಾರೆ.

ಕೆಲವು ದಿನಗಳ ಹಿಂದೆ ಸಾಮಾಜಿ–ಕ ಜಾಲತಾಣಗಳಲ್ಲಿ ಬಹಳಷ್ಟು ಸದ್ದು ಮಾಡಿದ ಒಂದು ವಿಷಯವೆಂದರೆ ಒಬ್ಬ ರೈತನು ತಾನು ಬೆಳೆದ ಈರುಳ್ಳಿ ಮಾರಲು ಮಾರುಕಟ್ಟೆಗೆ ಬಂದಿರುತ್ತಾನೆ ಈರುಳ್ಳಿ ಮಾಡಿದ್ದರಿಂದ ಆತನಿಗೆ ಬಂದ ಹಣ ಕೇವಲ 1000 ರೂ ಮಾತ್ರ ಆತ ತನ್ನ ಹಳ್ಳಿಯಿಂದ ನಗರಕ್ಕೆ ಈರುಳ್ಳಿ ತರಲು ಖರ್ಚಾಗಿದ್ದು 2500ರೂ ಈ ರೀತಿಯಾದರೆ ಕೃಷಿಯನ್ನೇ ಅವಲಂಬಿಸಿರುವ ರೈತ ಬದುಕುವುದಾದರೂ ಹೇಗೆ? ಪ್ರತಿದಿನ ಲಕ್ಷಾಂತರ ರೈತರು ಇಂತಹ ಅದೆಷ್ಟೋ ಸಮಸ್ಯೆಗಳನ್ನು ಎದು–ರಿಸುತ್ತಿದ್ದಾರೆ."ನೇಗಿಲ ಹಿಡಿದು ಹೊಲದೊಳು ಹಾಡುತ ಉಳುವಾ ಯೋಗಿಯ ನೋಡಲ್ಲಿ"–ಎಂಬ ಕುವೆಂಪುರವರ ಮಾತನ್ನು"ನೇಗಿಲ ಹಿಡಿದು ಹೊಲದೊಳು ಬೇಡುತ ಅಳುವಾ ಯೋಗಿಯ ನೋಡಲ್ಲಿ"ಎಂದು ಹೇಳುವ ಪರಿಸ್ಥಿತಿ ಬಂದೊದಗಿದೆ. ಸರ್ಕಾರಗಳು ರೈತರ ಸಮಸ್ಯೆಗಳನ್ನು ನಿವಾ–ರಿಸಲು ಅನ್ನದಾತನನ್ನು ಸ್ವಾಭಿಮಾನಿಯನ್ನಾಗಿಸಲು ಹಲವು ಯೋಜನೆಗಳನ್ನು ರೂಪಿಸಿದ್ದರೂ ಆ ಯೋಜನೆಗಳು ಅರ್ಹ ಫಲಾನುಭವಿಗಳ ಮನೆ ಬಾಗಿಲಿಗೆ ತಲುಪುತ್ತದೆ ಎಂದು ಆಡಳಿತ ವ್ಯವಸ್ಥೆ ಒಮ್ಮೆ ಯೋಚಿಸಬೇಕಿದೆ.ಪ್ರತಿವರ್ಷ ಪ್ರಕೃತಿ ವಿಕೋಪದಿಂದ ಬೆಳೆ ಹಾನಿಯ ಬಗೆಗಿನ ವರದಿ ರೈತರಿಂದ ಪಡೆದು ಪರಿಹಾರವನ್ನು ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಮಾಡುತ್ತೇವೆ ಎಂದು ಹೇಳುವ ಸರ್ಕಾರಗಳು ಪರಿಹಾರದ ಹಣ ಯಾವ ಜನಪ್ರತಿನಿಧಿಗಳ ಬ್ಯಾಂಕ್ ಖಾತೆಗೆ ಜಮಾ ಆಗಿದೆ ಎಂದು ಒಮ್ಮೆ ಪರಿಶೀಲಿಸಬೇಕಿದೆ. ಕಳೆದ ಒಂದು ವರ್ಷದಿಂದ ವ್ಯಾಪಕ ವಿರೋಧ ಪ್ರತಿಭಟನೆ ಕಾರಣವಾಗಿದ್ದ ವಿವಾದಾತ್ಮಕವಾದ ಮೂರು ಕೃಷಿ ಕಾಯ್ದೆಗಳನ್ನು ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಕೇಂದ್ರಸರ್ಕಾರ ರದ್ದುಪಡಿಸಿದೆ ಈ ಕೃಷಿಕಾಯ್ದೆಗಳನ್ನು ರದ್ದುಪಡಿಸಲು ರೈತರಿಂದ ವರ್ಷಾನುಗಟ್ಟಲೆ ಹೋರಾಟ ಮತ್ತು ಜೀವಹಾನಿಗಳ ಅಗತ್ಯವಾದರೂ ಬೇಕಿತ್ತೇ? ಬೆಂಕಿಪಟ್ಟಣ, ಗುಂಡುಸೂಜಿ ಯಂತಹ ಸಣ್ಣ ಸಣ್ಣ ವಸ್ತುಗಳಿಂದ ಹಿಡಿದು ದೊಡ್ಡ ದೊಡ್ಡ ವಸ್ತುಗಳಿಗೆಲ್ಲ ವಸ್ತುಗಳನ್ನು ತಯಾರಿಸುವ ಕಂಪನಿಗಳು ಒಂದು ನಿರ್ದಿಷ್ಟ ಬೆಲೆ ನಿಗದಿಪಡಿಸುತ್ತಾರೆ ಆದರೆ ಜಗತ್ತಿಗೆ ಅನ್ನನೀಡುವ ರೈತನು ತಾನು ಬೆಳೆದ ಬೆಳೆಗಳಿಗೆ ಸ್ವತಃ ಒಂದು ನಿರ್ದಿಷ್ಟ ಬೆಲೆ ನಿಗಧಿ ಪಡಿಸುವ ವ್ಯವಸ್ಥೆಯನ್ನು ನಮ್ಮ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಏಕೆ ಕಲ್ಪಿಸುತ್ತಿಲ್ಲ? ಇಡೀ ವರ್ಷ ಬಿಸಿಲೆನ್ನದೆ, ಮಳೆಯೆನ್ನದೆ, ಚಳಿಯೆನ್ನದೆ , ಹಗಲು–ರಾತ್ರಿಯೆನ್ನದೆ ಕಷ್ಟಪಟ್ಟು ಬೆಳೆದು ಮಾರಲು ಮಾರುಕಟ್ಟೆಗೆ ತಂದರೆ ಐದು ರೂಪಾಯಿಗೆ ಹತ್ತು ರೂಪಾಯಿಗೆ ಎಂದು ಚೌಕಾಸಿಮಾಡಿ ರೈತರ ಬೆವರ ಹನಿಗೆ ಬೆಲೆ ಇಲ್ಲದಂತೆ ಮಾಡುವುದು ಸರಿಯೇ?

ಪ್ರತಿ ಜೀವಿ ಜೀವಿಸಲು ಅತಿ ಮುಖ್ಯವಾಗಿ ಬೇಕಿರುವುದು ಆಹಾರ ಆ ಆಹಾರ ಧಾನ್ಯಗಳನ್ನು ಬೆಳೆಯುವ ರೈತನು ಸಮಸ್ಯೆಗೆ ಸಿಲುಕಿದರೆ ಹೇಗೆ? ಅನ್ನದಾತನ ಸಾಮಾನ್ಯ ತೊಂದರೆ ಸಂಕಷ್ಟಗಳನ್ನುಬಗೆಹರಿಸದೆ ಹೋದರೆ ನಮ್ಮ ದೇಶದ ಪ್ರಗತಿಗೆ, ಚಂದ್ರಯಾನ, ಮಂಗಳಯಾನ ಗಳಂತಹ ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿನ ಪ್ರಗತಿಗೆ, ರಾಷ್ಟ್ರೀಯ ರೈತರ ದಿನ ಆಚರಿಸಿ ರೈತನೇ ರಾಷ್ಟ್ರದ ಬೆನ್ನೆಲುಬು, ಜೈಕಿಸಾನ್ ಎಂದು ಹೇಳುವುದಕ್ಕೆ ಯಾವುದೇ ಅರ್ಥ–ವಿರುವುದಿಲ್ಲ. ಆದ್ದರಿಂದ ಎಲ್ಲಕ್ಕಿಂತ ಮುಖ್ಯವಾಗಿ ರೈತರ ಸಮಸ್ಯೆಗಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಆಡಳಿತ ವ್ಯವಸ್ಥೆ ಇನ್ನೂ ಹೆಚ್ಚಿನ ಗಮನಹರಿಸಬೇಕಾಗಿದೆ.

**ದಿಲೀಪ್ ಚಕ್ರವರ್ತಿ ಕೆ ಹೆಚ್, ಮಧುಗಿರಿ, ಕಾಳೇನಹಳ್ಳಿ**

## ಮೆರವಣಿಗೆ

ಸರಿಯಾಗಿರಬೇಕು ನಮ್ಮಯ ನಡಿಗೆ!
ಹೊಂದಿಕೊಂಡಿರಬೇಕು ಆಡುವ ನುಡಿಗೆ!
ಸಂಸ್ಕೃತಿ ಸಂಸ್ಕಾರ ಸೇರಿರಲಿ ಮುಡಿಗೆ!
ಮಾನವತೆಯ ಸೊರತೆ ಸ್ಫುರಿಸಲಿ ಅಡಿಗಡಿಗೆ!
ಒಡೆಯದಂತಿರಬೇಕು ನಂಬಿಕೆಯ ಗಡಿಗೆ!
ಎಲ್ಲರ ಎದೆಯೊಳಗೆ ಒಲವಿನ ಬರವಣಿಗೆ!
ವಿಶ್ವ ಭ್ರಾತೃತ್ವದೆಡೆಗೆ ನಮ್ಮಯ ಮೆರವಣಿಗೆ!
ಶುಭವ ಕೋರೋಣ ಉನ್ನತಿಯ ತೇರಿಗೆ!!

**– ಗುಣವಂತೇಶ್ವರ. – ನಾರಾಯಣ. ಶಾಸ್ತ್ರಿ.**
**ಸರಕಾರಿ ಪ್ರೌಢಶಾಲೆ. ಕುಂಬಾರಹಳ್ಳಿ.**

## ಸುರಿಮಳೆ

ಎಷ್ಟೇ ತಿಳಿದರೂ ತಿಳಿದವರಂತೆ ಇರುವುದು.
ಏರು–ಪೇರಿನ ಮಜಲನ್ನು ಕಂಡವರು.
ಸತತ ಪ್ರಯತ್ನದಿಂದ ಅನುಭವ ನೋಡುವರು.
ಯಶಸ್ವಿ ಕಲಿಕೆಯು ವ್ಯಕ್ತಿತ್ವವನ್ನು ರೂಪಿಸುವುದು.

ತಾನು ಕಲಿತು ತನ್ನವರನ್ನು
ತನ್ನಂತೆ ಮಾಡುವ ಶಕ್ತಿ.
ತೀರ್ಥರೂಪದಲ್ಲಿ ನಿಂತು ಸಲಹೆ.
ತಿಳಿ ಹೇಳುವ ಔದಾರ್ಯತೆ. ಖಖ

ಕಷ್ಟಗಳೇ ದಾರಿದೀಪದಂತೆ ಅಗೋಚರದ
ಮಿನುಗು.
ಶ್ರೇಷ್ಠ ಮನುಜನ ದಂತಕತೆಯು ಜೇನಾಗು.
ಕೊರಗು.
ಪೆಟ್ಟಿನ ಹಾದಿ ಹುಡುಕುವ ಸೊಬಗು.
ಮಾದರಿಯ ಸಂಕೇತದ ವಿನ್ಯಾಸದ ರಂಗು.

ಅಮೃತದ ಸಿಂಚನವೂ ಲಭ್ಯವೆಂಬ ಮುತ್ತು.
ಅನಂತದೆಡೆಗೆ ಸಾಗುವ ನಾವಿಕನ ರಹದಾರಿ.
ಅನುಕೂಲದ ಆದರ್ಶವೂ ಹೆಜ್ಜೆಯ ಸಪ್ಪಳದಂತೆ.
ಅನುಭವದ ಸಾಗರದಲ್ಲಿ ಹವಳದ ಸುರಿಮಳೆ.

**ಕಾವ್ಯನಾಮ : ಅರಸು**
**– ದೇವರಾಜು ಬಿ ಎಸ್.ಹೊಸಹೊಳಲು.**

## ಪ್ರಪ್ರಿಪೇಟೈ

ಇದೊಂದು ಸಾಮಾಜಿಕ ಪಿಡುಗು
ಭಯಂಕರ ವೈರಸ್ ಓಮಿಕ್ರಾನ್
ತನ್ನ ತಮಟೆ ಬಾಜಾ ಭಜಂತ್ರಿ
ಬಾರಿಸಿದ್ದೇ ಬಾರಿಸಿದ್ದು!

ಯಾರೆನೆಂದರೂ ಹಲ್ಕಿಸಿವ
ಉಗುಳಿದರೂ ಮೊಗದ
ಪೌಡರ್ ಅಳಿಸಿ ಹೋಗದಂತೆ
ಒರೆಸಿಕೊಳ್ಳುವ ಊಸರವಳ್ಳಿ !

ತನ್ನದೇ ಹೊಗಳಿಕೆಯ ಸದಾ
ಬಯಸಿ ಬಯಸಿ ಉಸಿರುವ
ಅರವಳಿಕೆಯ ಸದಾ ಮೆದುಳಿಗೆ
ಅಳವಡಿಸಿರುವ ಪಿಂಡಾಂಡಣು!

ಏನು ಹೇಳಲಿ ನಿನ್ನ ಬಳಿ ನಾ ಬಂದು
ಕೇಳು ಜನಮೇ ಜಯ ನೋಡು ನೀ
ಇದು ಸತ್ತವರ ನೆರಳಿನ ಛಾಯೆ
ಸಂಬಂಜಾ ದೊಡ್ಡದು ಕಣೋ!

ಆ ಊರು ಈ ಊರಿನ ಜಡಭರತ
ಅಮಾಸೆಯ ಒಡಲಾಳದ ಸಾಕವ್ವ
ಪರ್ವವೆಂಬೋ ಮಹಾಭಾರತದ
ಭೈರಪ್ಪ ಅನಂತನ ಸಂಸ್ಕಾರ!

ಎಲ್ಲ ಎಲ್ಲ ಸೇರಿ ಮಿಸ್ಸಳ ಭಾಜಿ
ಬಂತು ಬಂತದೋ ಬಂತು ಅದೆಲ್ಲಿ
ಬಂತು ಅದು ಇದ್ದಲ್ಲೇ ಇತ್ತು
ಬಕಬಾರಲೇ ಬಿತ್ತು ಕಲಬೆರಕೆ ಕಸ !

ಎಲ್ಲರಿಗೂ ಸಲಾಮು ಹೇಳುವೆ ನಾ
ತಲೆ ಬಾಗಿ ಕ್ರಿಸ್ತನ ಮುಂದೆ ಕೃಷ್ಣನ
ಮೊಂಬತ್ತಿ ಹಚ್ಚಿ ಧೂಪಾರತಿ ಬೆಳಗಿ
ನಿಲಾಂಜನದ ಕಾಂತಿಯ ಸೊಬಗೇ !

**–ಶ್ರೀನಿವಾಸ ಜಾಲವಾದಿ,ಸುರಪುರ**

## ತುಸು ಸಂಜೆಯಾಗಲಿ ಬಿಡು.....

ತುಸು ಸಂಜೆಯಾಗಲಿ ಬಿಡು...
ನೀಲಿ ಮುಗಿಲಲಿ ತುಸು ಕೆಂಪೇ ರಲಿ ಬಿಡು
ಭಾನು ಬಾನಿನಾಚೆ ಮರೆಯಾಗಲು ಬಿಡು
ಒಂಚೂರು...
ಹಕ್ಕಿ ಗೂಡಿಗೆ ಮರಳಿ ಬರಲಿ ಬಿಡು............
ನಿನ್ನ ಸೇರುವ ತವಕ ನನ್ನಲ್ಲೋ ಅಡಗಿದೆ.......
ತುಸು ಸಂಜೆಯಾಗಲಿ ಬಿಡು....

ಕಾತುರವ ಬಿಡು....
ಕಾದಿರುವೆ ಕನಸಿನೂರಿನ...
ಕಡಲ ತಡಿಯಲಿ....
ಹೊಂಗೆ ಮರದಡಿಯಲಿ....
ತುಸು ಸಂಜೆಯಾಗಲಿ ಬಿಡು

ಕಾವ್ಯರಸ ನೆತ್ತಿಗೇರಿ......
ಮದವೇರಲು ಬಿಡು.....
ಕನಸಿನೂರಿನ ಕಾವ್ಯ ಕನ್ನಿಕೆ....
ಬೆಳದಿಂಗಳು ಸಮೀಪಿಸಿ....
ನಿನ್ನ ಕೆನ್ನೆ ತುಸು ರಂಗೇರಿ.....
ಹೊಸ ನಾದ ಹೊಮ್ಮಲಿ ಬಿಡು..

ತುಸು ಸಂಜೆಯಾಗಿಲಿ ಬಿಡು....
ಭಾನು ಸರಿದು ಬಾನು ಕೆಂಪೇರಿದೆ ಬಿಡು

–ಮಂಜುನಾಥ್ ರಾಥೋಡ್
ಆಂಗ್ಲ ಭಾಷಾ ಶಿಕ್ಷಕರು
ವಿಜಯಪುರ

## ಇಲ್ಲಿ ಹುಡಿಕಿದರೆ ಎಲ್ಲಾ ಐತಿ

ಇಲ್ಲಿ ಹುಡಿಕಿದರೆ ಎಲ್ಲಾ ಐತಿ
ಅದೇ ನನ್ನ ಊರು ಕೊಪ್ಪಳ ಐತಿ

ಇದು ಭತ್ತದ ನಾಡು ಗಂಗಾವತಿ ಐತಿ
ಇಲ್ಲಿ ಎತ್ತ ನೋಡಿದರು ಭಾಷೆ ಮುತ್ತಿನಂಗ ಐತಿ
ಇದು ದೇವಾಲಯ ಚಕ್ರವರ್ತಿ ಇಟಗಿಯ ಊರು ಐತಿ
ಅಂಜನಿ ಪುತ್ರನ ಆಂಜನಾದ್ರಿಯ ನಾಡು ಐತಿ....

ಕೊಪ್ಪಳ ಗವಿ ಮಠದ ಸೊಬಗು ಐತಿ
ಸಗ್ಗವ ಮಾಳ್ಪನು ಈ ನೆಲ ಅಭಿನವ ಗವಿ ಶ್ರೀ ಪಾದ ಐತಿ.
ಉಧೋ ಎಂದರೆ ಸದಾ ಹರಸುವ, ಹುಲಿಗಿ ಕ್ಷೇತ್ರದ
ಮಹಿಮೆ ಐತಿ.

ಎತ್ತ ನೋಡಿದರು,ಭತ್ತ ಬೆಳದ ಪೈರು ಐತಿ
ಸುತ್ತು ಸುತ್ತಲಿ ಸಾಲು ನಿಂತ ತೆಂಗಿನಮರ ಐತಿ
ರಂಗು ರಂಗಿನ ರಾಯರ ಬೃಂದಾವನ ಇರುವ ಊರು ಐತಿ
ಚಿಂತೆಗೀಡಾಗಿ ಚಂದನವನದಲ್ಲಿ ಸೀತಾರಾಮನ ಕಥೆಯ
ಚಿಂತಾಮಣಿ ಕಾನನ ಐತಿ
ವಾಲಿ ಸುಗ್ರೀವರ ಗುಹೆ ಇರುವ ಪುಣ್ಯ ಭೂಮಿ ಇದು ಐತಿ.

ಸದ್ಗುಣ ಚನ್ನಬಸವ ತಾತನ ಕೃಪೆ ಇಲ್ಲಿ ಎಲ್ಲರಿಗೂ ಐತಿ
ಶ್ರೀ ನೀಲಕಂಠನ ರೌದ್ರ ನರ್ತನ, ಶಾಂತ ಚಿತ್ತನ ಎರಡು
ಐತಿ.
ಕಣ್ಣು ನೋಡುವ ಕನಕಗಿರಿಯ ಬೇಡಗು ಬಿನ್ನಾಣ ಐತಿ
ಇಲಕಲ್ ಸೀರೆಯು ಸಾಂಸ್ಕೃತಿ, ಜಗಕೆ ಮೆರೆಸುತ್ತೈತಿ ...

ತುಂಗಭದ್ರೆಯ ಸಿಹಿ ನೀರು ಹರಿತಾ ಐತಿ
ಹಚ್ಚ ಹಸಿರು,ಬಿಚ್ಚು ಮನದ,ಸ್ವಚ್ಛ ಗಾಳಿ ಐತಿ
ಸರಿ ಕೇಳ್ ಸ್ವರ್ಗವ ಸುರಿದು,ಬಾನಿನಿಂದ..
ಭುವಿ ಬೆಟ್ಟವ ಸುತ್ತುವರಿದಿರುವ ಈ ನೆಲ ಐತಿ

ಸದಾ ನಗಿಸುವ ಆಧುನಿಕ ತೆನಾಲಿ ರಾಮನ ಹಾಸ್ಯ ಐತಿ.
ಗಂಗಾವತಿ ಬೀಚಿ ಪ್ರಾಣೇಶನ ಪ್ರಾಣ ನಮ್ಮೂರು ಐತಿ
ಕಲ್ಲು ಇದ್ದರೂ ಚಿತ್ರ ಕೆತ್ತುವ ವೆಂಕಣ್ಣ
ಚಿತ್ರಗಾರನ ಚಿತ್ತಾರ ಗಂಗಾವತಿ ಐತಿ

ಜಾಜಿ ದೇವೇಂದ್ರಪ್ಪ ಗುರುವಿನ ಜೇನು ಸಾಹಿತ್ಯ ಐತಿ
ರಮೇಶ ಗಬ್ಬೂರರ ಗೀತೆ–ಗಾಯನ ಐತಿ
ಜೀವನ್ ಸಾಬ್ ಬಿನ್ನಾಳರ ಜನ ಮನ ಜನಪದ ಗೀತೆ ಐತಿ
ಯಾವುದಾದರು ಬರಲಿ ಸರ್ಕಾರ,ಸೌಹಾರ್ದತೆಗೆ ಹೊಗ್ಗುವ
ಗುಣ ಐತಿ.

ಕೋಟಿ ಲಿಂಗವು ಪುರದ ಪುಣ್ಯ ಕಾಪಾಡುತ್ತೈತಿ
ಕಲ್ಲು ಬಂಡೆಯ ಮಧ್ಯ ಹಾದು ಹೋಗುವ ಹಾದಿಯಲ್ಲಿ..
ಕೋಲ್ಲಿ ನಾಗೇಶ್ವರ ರಾವ್ ವಿಧ್ಯಾ ಮಂದಿರ ಕೈಬೀಸಿ
ಕರೆಯುತ್ತೈತಿ

ಗತಕಾಲದಲ್ಲಿನ ಇತಿಹಾಸದ ಮೊರೆಯರ ಮನೆ ಐತಿ.
ಚಾರಣ ಹೋಗಲು ಇತಿಹಾಸ ಪ್ರಾಧ್ಯಾಪಕರ ತಂಡವು ಐತಿ.
ತೀಳಿಯದ ದಾರಿಯ ನಿಂತಿರುವ ನಿನಗೆ..ಶರಣಬಸಪ್ಪ
ಕೋಲ್ಕರರ ಹತ್ತಿರ ಇತಿಹಾಸದ ನೀಲ ನಕ್ಷೆ ಐತಿ.

ಇಲ್ಲಿ ಹುಡಿಕಿದರೆ ಎಲ್ಲಾ ಐತಿ
ಯುವ ಬರಹಗಾರರ ಬೆಳೆಸುವ ಸಕಲ ಕಲಾ ಸಂಸ್ಕೃತಿಯ
ವೇದಿಕೆಯು ಐತಿ
ಇಲ್ಲಿ ಹುಡಿಕಿದರೆ ಎಲ್ಲಾ ಐತಿ
ನನ್ನ ಹೆಮ್ಮೆಯ ಕೊಪ್ಪಳ ನನ್ನೂರು ಐತಿ



–ವಿಶ್ವನಾಥ ಹಕ್ಕಂಡಿ

## ಅಂಜಲಿ ಹನಿ

ಮಿಂಚುವ ಕಣ್ಣವಳೆ
ನೀನು ಹೂವಿನ ಮಳೆ
ಪಳ ಪಳ ಹೊಳೆಯುವ ಹೊಳೆ
ಕಸ್ತೂರಿ ಪರಿಮಳ ಬೀಸುವ ಹೊಂಬಾಳೆ
ನೀನು ಎಂದೆಂದಿಗೂ ನನ್ನವಳೇ

ಚಂದನದ ಗೊಂಬೆ
ಕೆಂಪಾದ ದಾಳಿಂಬೆ
ಮುದ್ದಾದ ಪೆದ್ದು ನಿಂಬೆ
ನೀ ನನ್ನ ಪ್ರೀತಿಯ ರಾಣಿ ರಂಬೆ

ಕೇದಿಗೆ ಯ ಕಣ್ ನೋಟ
ಅದರಲ್ಲಿದೆ ನನ್ನ ಸೆಳೆಯುವ ಮಾಟ
ನೀ ಒಂದು ಹೂ ತೋಟ
ಮಾಡು ಬಾರೆ ಪ್ರೀತಿಯ ಪಾಠ

–––ಕವಿ ಕಾವ್ಯ ಕಲ್ಪನೆ

ಕರುನಾಡ ಕಂದ
ಸಂಪುಟ–1 । ಸಂಚಿಕೆ–6
ದಿನಾಂಕ: 16–01–2022 । ಪುಟಗಳು: 20

# ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಿ: ನ್ಯಾಯಾದೀಶ ವಿಜಯಕುಮಾರ ಕನ್ನೂರು

ಯಲಬುಗಾ9 :ತಾಲೂಕಿನ ತಾಳಕೇರಿಯ ಸರಕಾರಿ ಪ್ರೌಢ ಶಾಲೆಗೆ ತಾಲ್ಲೂಕು ಕಾನೂನು ಸೇವಾ ಸಮಿತಿಯ ಆದ್ಯಕ್ಷರು ಹಾಗೂ ಹಿರಿಯ ಶ್ರೇಣಿಯ ನ್ಯಾಯಾಧೀಶರಾದ ಶ್ರೀ ವಿಜಯಕುಮಾರ್ ಕನ್ನೂರು ಮತ್ತು ನ್ಯಾಯಾಧೀಶರಾದ ಶ್ರೀ ಶ್ರೀಶೈಲ ಬಾಗಡಿ ಅವರು ಭೇಟಿ ನೀಡಿದರು.

ಶಾಲೆಯಲ್ಲಿ ಈ ಹಿಂದೆ ಆಯೋಜಿಸಲಾಗಿದ್ದ ಕಾನೂನು ಅರಿವು ಕಾರ್ಯಕ್ರಮದ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿಗಳು ಪಠ್ಯೇತರ ಕ್ರಿಯಾತ್ಮಕ ಚಟುವಟಿಕೆಗಳು. ನಾಟಕ ವೀಕ್ಷಿಸಿದ್ದ ನ್ಯಾಯಾಧೀಶರು ವಿದ್ಯಾರ್ಥಿಗಳಿಗೆ ವೈಯಕ್ತಿಕ ಬಹುಮಾನ ಘೋಷಿಸಿದ್ದರು.ಆದರಂತೆ ಶಾಲೆಗೆ ಆಗಮಿಸಿದ ಮಾನ್ಯ ನ್ಯಾಯಾಧೀಶರನ್ನು ವಿದ್ಯಾರ್ಥಿಗಳು ಶಿಕ್ಷಕರು ಆತ್ಮೀಯವಾಗಿ ಹೂಗುಚ್ಛ ನೀಡಿ ಸ್ವಾಗತಿಸಿದರು.

ಶಾಲೆಯಲ್ಲಿ ವಿದ್ಯಾರ್ಥಿಗಳಗೆ ಬಹುಮಾನ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು:

ಮಕ್ಕಳಿಗೆ ಬಹುಮಾನ ವಿತರಿಸಿ ಬಳಿಕ ನ್ಯಾಯಾಧೀಶರಾದ ಶ್ರೀ ವಿಜಯಕುಮಾರ್ ಕನ್ನೂರು ಮಾತನಾಡಿ ಭಾರತದ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯ ಬಗ್ಗೆ ಎಲ್ಲರೂ ತಿಳಿದುಕೊಳ್ಳಬೇಕು. ದೇಶವು ಸಂವಿಧಾನಾತ್ಮಕ ಆಡಳಿತ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ.ನ್ಯಾಯಾಂಗವನ್ನು ಹೊಂದಿದ್ದು. ದೇಶದ ಕಾಯ್ದೆ ಕಾನೂನುಗಳ ಬಗ್ಗೆ ತಿಳಿದುಕೊಂಡು ಅವುಗಳನ್ನು ಪಾಲಿಸುವುದು ಪ್ರತಿಯೊಬ್ಬ ನಾಗರಿಕರ ಕತ9ವ್ಯ ಎಂದು ಹೇಳಿದರು.



ನ್ಯಾಯಾಧೀಶ ಶ್ರೀ ಶ್ರೀಶೈಲ ಬಾಗಡಿ ರವರು ಮಾತನಾಡಿ ಸರಕಾರವು ಅನೇಕ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುತ್ತದೆ. ವಿದ್ಯಾರ್ಥಿಗಳು ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು. ಯಲಬುರ್ಗಾ ತಾಲೂಕು ರಾಜ್ಯದಲ್ಲೇ ಅತಿ ಹೆಚ್ಚು ಅತ್ಯುತ್ತಮ ಗುಣಮಟ್ಟದ ಹೈಸ್ಕೂಲ್ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಿದ್ದು ವಿದ್ಯಾರ್ಥಿಗಳು ಸದುಪಯೋಗ ಪಡೆದು ತಾಲ್ಲೂಕಿನ ಕೀರ್ತಿಯನ್ನು ಹೆಚ್ಚಿಸಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ದೊಡ್ಡಬಸಪ್ಪ ನೀರಲಕೇರಿ ಅವರು ಮಾತನಾಡಿ ಸರಕಾರಿ ಶಾಲೆಗಳ ಎಸ್ ಎಸ್ ಎಲ್ ಸಿ ಫಲಿತಾಂಶ ಸುಧಾರಣೆಗೆ ಜಿಲ್ಲೆಯಲ್ಲಿ ಹತ್ತಾರು ನವನವೀನ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಾಬುಸಾಬ್ ಲೈನದಾರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ಶ್ರೇಣಿಯ ನ್ಯಾಯಾಧೀಶರಾದ ಶ್ರೀ ವಿಜಯಕುಮಾರ್ ಕನ್ನೂರು ಮತ್ತು ಶ್ರೀ ಶ್ರೀಶೈಲ ಬಾಗಡಿಯವರು ಭಾಗವಹಿಸಿದರು.ಅತಿಥಿಗಳಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಶ್ರೀ ದೊಡ್ಡಬಸಪ್ಪ ನೀರಲಕೇರಿ,ಯಲಬುರ್ಗಾ ತಾಲ್ಲೂಕಿನ ನ್ಯಾಯವಾದಿಗಳ ಸಂಘದ ಅಧ್ಯಕ್ಷರಾದ ಶ್ರೀ ಆನಂದಕುಮಾರ ಉಳ್ಳಾಗಡ್ಡಿ, ವಕೀಲರಾದ ಶ್ರೀ ಮಲ್ಲನಗೌಡ ಪಾಟೀಲ್, ಉಮೇಶ್ ಹಿರೇಮನಿ,ಅಮರೇಶ ಸಿಂಧೋಗಿ ವೇದಿಕೆಯಲ್ಲಿ ಉಪಸ್ಥಿತರಿದ್ದು.ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಗಳಾದ ಬಸವರಾಜ ಉಳ್ಳಾಗಡ್ಡಿ, ವೆಂಕಟಲಕ್ಷ್ಮಿ,ಶ್ರೀಮತಿ ಶೋಭಾ ಬಾಗೇವಾಡಿ, ತಿಮ್ಮಣ್ಣ ಜಗ್ಗಲ್, ರಮೇಶ್ ಎಚ್, ಕಭೇರಿ ಸಹಾಯಕಿ ಶಾರದಾ ಹರ್ಲಾಪೂರ, ಲಕ್ಷ್ಮಮ್ಮ ಗೌಡ್ರ ಮತ್ತಿತರರು ಉಪಸ್ಥಿತರಿದ್ದರು.

ವಿಜ್ಞಾನ ಶಿಕ್ಷಕ ದೇವೇಂದ್ರಪ್ಪ ಜರ್ಲಿ ಕಾರ್ಯಕ್ರಮ ನಿರೂಪಿಸಿದರೆ .ವಕೀಲ

– ಮಲ್ಲನಗೌಡ ಪಾಟೀಲ್ ವಂದಿಸಿದರು.

# ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ವೇದಿಕೆಯಾಗಲಿ : ಶಂಭುಲಿಂಗ ಸ್ವಾಮಿಗಳು

ಈಗ ಕಂಗೊಳಿಸುತ್ತಿದೆ. ಹಾಸಿಂಪೀರ ವಾಲೀಕಾರ ಅವರ ಅವಧಿಯಲ್ಲಿ ವಿಪುಲವಾಗಿ ಬೆಳೆದು ಸಹಸ್ರಾರು ಕವಿವರ್ಯರಿಗೆ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯಾಗಲಿ ಉತ್ತಮ ಸಮಾಜ ಪರಿವರ್ತನೆಯ ಕಾರ್ಯಕ್ರಮಗಳು ಸಂಘಟಿಸಿ ಸಮಾಜಮುಖಿಯಾಗಲಿ ಎಂದು ಶಿವಬಸವ ಆಶ್ರಮದ ಶಂಭುಲಿಂಗ ಸ್ವಾಮಿಗಳು ನುಡಿದರು. ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಹಮ್ಮಿಕೊಳ್ಳಲಾದ ಸಾಹಿತ್ಯ ಪರಿಷತ್ತು ಪ್ರವೇಶ ಹಾಗೂ ಪೂಜಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜಿಲ್ಲೆಯಲ್ಲಿ ಜಿಡ್ಡುಗಟ್ಟಿದ್ದ ಸಾಹಿತ್ಯ ಚಟುವಟಿಕೆಗಳನ್ನು ಕ್ರೀಯಾಶೀಲಗೊಳಿಸಿ ಸಾಹಿತ್ಯ ಶ್ರೀಮಂತವಾಗಬೇಕು ಐತಿಹ ಜಿಲ್ಲೆ ಸಾಹಿತ್ಯ ಸಂಪನ್ನ ಜಿಲ್ಲೆಯಾಗಬೇಕು. ಈ ನಿಟ್ಟಿನಲ್ಲಿ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಸರ್ವ ಸನ್ನದರಾಗಿದ್ದು, ಪ್ರತಿಯೊಬ್ಬ ಕನ್ನಡ ಮನಸ್ಸುಗಳು ಸಹಕಾರ ನೀಡಿ ಬೆಂಬಲಿಸೋಣ ಎಂದರು. ನಿವೃತ್ತ ಕ್ಷೇತ್ರಶಿಕ್ಷಣಾಧಿಕಾರಿ ಆರ್ ವೈ ಕೊಣ್ಣೂರ ಮಾತನಾಡಿದ ಸಾಹಿತ್ಯ ಚಟುವಟಿಕೆಗಳು ನಿಂತ ನೀರಿನಂತಾಗಿದ್ದವು. ಅವುಗಳಿಗೆ ಹೊಸ ರೂಪ ನೀಡಿ ಹೊಸ ಮನ್ವಂತರಕ್ಕೆ ನಾಂದಿ ಹಾಡಲು ಹಿರಿಯ ಸಾಹಿತಿಗಳು ಚಿಂತಕರು, ಸ್ವಾಮೀಜಿಗಳನ್ನು ಕರದುಕೊಂಡು ಉನ್ನತ ವಿಚಾರಗಳ ಮೂಲಕ ಹೊಸ ದಿಶೆಯತ್ತ ಸಾಗುವ ನಿಟ್ಟಿನಲ್ಲಿ ವಾಲೀಕಾರ ಕಾರ್ಯೋನ್ಮುಖರಾಗಿದ್ದಾರೆ.




ನಾವೆಲ್ಲರೂ ಪ್ರಾಂಜಲ ಮನಸ್ಸಿನಿಂದ ಸಹಕಾರ ನೀಡೋಣ ಎಂದರು. ಇನ್ನೋರ್ವ ಮುಖ್ಯ ಅತಿಥಿಗಳಾಗಿದ್ದ ಸಾಹಿತಿ ವಿದ್ಯಾವತಿ ಅಂಕಲಗಿ ಮಾತನಾಡಿ, ಸಾಹಿತ್ಯ ಪರಿಷತ್ತು ಕಟ್ಟುವಲ್ಲಿ ಹಿರಿಯರ ಶ್ರಮದಾನ ಬಹಳಷ್ಟಿದೆ. ಅದನ್ನು ಕಟ್ಟಿ ಬೆಳೆಸಲು ಪ್ರತಿಯೊಬ್ಬರು ಶ್ರಮಿಸೋಣ ಕನ್ನಡ ತಾಯಿ ಸೇವೆ ನಿಸ್ವಾರ್ಥದಿಂದ ಮಾಡೋಣ ಎಂದರು. ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಮಾತನಾಡಿ ವಿಜಯಪುರ ಜಿಲ್ಲೆ ಸಾಹಿತಿಗಳ ತವರೂರು, ನಾಡಿನ ಕೀರ್ತಿ ಬೆಳಗಿದ ಮಹನೀಯರ ಮದ್ಯ ಸಾಹಿತ್ಯ ಚಟುವಟಿಕೆಗಳಿಗೆ ಪ್ರಥಮಾದ್ಯತೆ ನೀಡಿ ಶ್ರೀಗಳ ನೇತೃತ್ವದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕನ್ನಡ ಕಟ್ಟುವ ಕಾಯಕಕ್ಕೆ ಕೈ ಜೋಡಿಸಬೇಕು. ಕೆಲಸ ಮಾಡುವವರಿಗೆ ಆದ್ಯತೆ ಕ್ರೀಯಾಶೀಲ ಕಾಯಕನಿಷ್ಠರಿಗೆ ಸಾಹಿತ್ಯ ಪರಿಷತ್ತು ಕೈ ಮಾಡಿ ಕರೆಯಲಿದೆ. ಎಲ್ಲರೂ ಕೂಡಿ ಸಾಹಿತ್ಯ ಪಸರಿಸುವ ಕಾರ್ಯ ಮಾಡೋಣ, ಕನ್ನಡ ತಾಯಿ ಭುವನೇಶ್ವರಿ ಸೇವೆ ಮಾಡುವ ಸದಾವಕಾಶ ದೊರಕಿದ್ದು, ಸದುಪಯೋಗ ಪಡೆಸಿಕೊಳ್ಳೋಣ. ನಿಮ್ಮ ಸಲಹೆ, ಸಹಕಾರ, ಮಾರ್ಗದರ್ಶನ ಸದಾ ನಮಗೆ ಸಿಗಲಿ ಎಂದು ಕೋರಿದರು.

ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿದ್ದ ಖ್ಯಾತ ನ್ಯಾಯವಾದಿ ಕೆ ಎಫ್ ಎಂಕಲಗಿ, ಅಕ್ಕಮಹಾದೇವಿ ಮಹಿಳಾ ವಿವಿಯ ಪ್ರಾಧ್ಯಾಪಕ ಡಾ. ಆನಂದ ಕುಲಕರ್ಣಿ ಮಾತನಾಡಿದರು. ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಎಲ್ ಬಿ ಶೇಖ ಪ್ರಾರ್ಥಿಸಿದರು. ಕಾರ್ಯಕ್ರಮದಲ್ಲಿ ಡಾ. ಡಿ ಆರ್ ನಿಡೋಣಿ, ಜೆಡಿಎಸ್ ಕಾರ್ಯಾಧ್ಯಕ್ಷ ದಿಲಾವರ್ ಖಾಜಿ, ಬಿಡಿಎ ಮಾಜಿ ಅಧ್ಯಕ್ಷ ವಿಜಕುಮಾರ ಘಾಟಗೆ, ಹೊನವಾಡ ಕಾಲೇಜಿನ ಪ್ರಾಚಾರ್ಯ ಎಸ್ ಜಿ ಲಕ್ಕುಂಡಿಮಠ, ಜಿಓಸಿಸಿ ಬ್ಯಾಂಕಿನ ನಿರ್ದೇಶಕರಾದ ಅರ್ಜುನ ಲಮಾಣಿ, ಹಣಮಂತ ಕೊಣದಿ, ಅಲ್ಲಾಬಕ್ಷ ವಾಲೀಕಾರ, ಬಶೀರಪಟೇಲ ಬುದ್ನೂರ, ರವಿ ಕಿತ್ತೂರ, ಸಾವಿತ್ರಿಬಾಯಿ ಪುಲೆ ಮಹಿಳಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಅಕ್ಕುಬಾಯಿ ನಾಯಿಕ, ಕೆ ಸುನಂದಾ, ಜಯಶ್ರೀ ಹಿರೇಮಠ, ಶಕುಂತಲಾ ಹಿರೇಮಠ, ಬಸವರಾಜ ರೆಬಿನಾಳ, ಬಸವರಾಜ ಬಿರಾದಾರ, ಮುರುಗೇಶ ಸಂಗಮ, ಶಂಕರಗೌಡ ಬಿರಾದಾರ, ಹುಸೇನ್ ಬಾಗಾಯತ್ ಸೇರಿದಂತೆ ಸಾಹಿತಿಗಳು, ಹಿತೈಸಿಗಳು ಅಭಿಮಾನಿಗಳು ಪಾಲ್ಗೊಂಡು ಶುಭ ಹರಿಸಿದರು. ಶಿಕ್ಷಕಸಾಹಿತಿ ಕಬೂಲ್ ಕೊಕಟನೂರ ಸ್ವಾಗತಿಸಿದರು. ಪ್ರೋ ಮಹಾದೇವ, ರೆಬಿನಾಳ ಕಾರ್ಯಕ್ರಮ ನಿರೂಪಿಸಿದರು. ಮಲ್ಲಿಕಾರ್ಜುನ ಅವಟಿ ವಂದಿಸಿದರು.

–ಶ್ರೀ ರಂಗ ಪುರಾಣಿಕ್

# "ದಾರಿಯುದ್ದಕ್ಕೂ"

ಮನೆಯಿಂದ ಹೊರಟು ಜೋರಾಗಿ ಬೀಸುತ್ತಿದ್ದ ಗಾಳಿಯನ್ನು ಶಪಿಸುತ್ತ ಹೊಲದೆಡೆಗೆ ಹೆಜ್ಜೆ ಹಾಕಿದಳು ಸೀತಾ.

ಹೊಲದ ದಾರಿಯುದ್ದಕ್ಕೂ ಅವಳಿಗೆ ನೆನಪಾದದ್ದು ಆ ಕರಾಳ ದಿನಗಳು.

ಶಂಕ್ರಣ್ಣ ಸೀತಾಳ ಗಂಡ, ಹೊಟ್ಟೆ ಪಾಡಿಗಾಗಿ ಊರ ಗೌಡರ ಹತ್ತಿರ ಜೀತಕ್ಕಿದ್ದನು, ದಿನಾಲು ದನಗಳಿಗೆ ಮೇಯಿಸುವುದು , ಹೊಲ ಗದ್ದೆ ನೋಡಿಕೊಳ್ಳವುದು ಈತನ ಕೆಲಸವಾಗಿತ್ತು, ಸೀತಾ ಕೂಡ ಗೌಡರ ತೋಟದಲ್ಲೆ ದಿನಗೂಲಿಯಂತೆ ಕೆಲಸ ಮಾಡುತ್ತಿದ್ದಳು .

ಶಂಕ್ರಣ್ಣ ಸೀತಾ ದಂಪತಿಗೆ ಎರಡು ಗಂಡು ಮತ್ತು ಒಂದು ಹೆಣ್ಣು ಮಗು ಇತ್ತು. ಮಕ್ಕಳು ಊರಲ್ಲೆ ಇದ್ದ ಸರಕಾರಿ ಶಾಲೆಗೆ ಹೋಗುತ್ತಿದ್ದರು.

ಗೌಡರು ತಮ್ಮ ತೋಟದ ಸುತ್ತಲೂ ಇದ್ದ ನಾಲ್ಕು ಎಕರೆ ಜಮೀನು ತಮ್ಮ ದನಗಳಿಗೆ ಮೇವು ಇರಲಿ ಎಂದು ಖರೀದಿಸಿದ್ದರು.

ಮಳೆಗಾಲ ಬರುತ್ತಿದ್ದಂತೆ ತೋಟದಲ್ಲಿ ಕೆಲಸ ಹೆಚ್ಚಾಗುತ್ತಿತ್ತು, ಜೋರಾಗಿ ಬೀಸುತ್ತಿದ್ದ ಗಾಳಿಗೆ ಬಾಳೆ ಗಿಡಗಳೆಲ್ಲ ಮರಿದು ಬೀಳುತ್ತಿದ್ದವು. ಅವುಗಳ ಸಹಾಯಕ್ಕೆ ಮರದ ಕೊಂಬೆಗಳನ್ನು ಇಡುವುದು ಮತ್ತು ಮಳೆ ಇರದಾಗ ನೀರು ಕಟ್ಟುವುದು ಇದೆಲ್ಲ ದೊಡ್ಡ ಸವಾಲಾಗೆ ಕಾಡುತ್ತಿತ್ತು, ಶಂಕ್ರಣ್ಣ ಇಂತಹ ದಿನಗಳಲ್ಲಿ ಕೆಲ ರಾತ್ರಿ ಮನೆಗೆ ಬರದೆ ತೋಟದ ಮನೆಯಲ್ಲೆ ಮಲಗುತ್ತಿದ್ದ .

ಮಳೆಗಾಲ ಮುಗಿಯೊವರೆಗು ತೋಟದ ಜೊತೆ ಸೆಣೆಸಾಡುವುದೆ ದೊಡ್ಡ ಕೆಲಸವಾಗುತ್ತಿತ್ತು ಮಳೆಗಾಲ ಮುಗಿಯುತ್ತಿದ್ದಂತೆ, ಕಡೆಯ ದಿನಗಳಲ್ಲಿ ಜೋರಾಗಿ ಗಾಳಿ ಮಳೆ ಬೀಸಿ ತೋಟದಲ್ಲಿದ್ದ ಬಾಳೆ ಗಿಡ ಮತ್ತು ಕಬ್ಬು ನೆಲಕ್ಕುರುಳಿ ದೊಡ್ಡ ನಷ್ಟವೆ ಉಂಟುಮಾಡಿತ್ತು.

ವಿಷಯ ತಿಳಿದ ಗೌಡರು ತೋಟಕ್ಕೆ ದೌಡಾಯಿಸಿದರು, ಅಲ್ಲಿ ಆಗಿದ್ದ ನಷ್ಟ ಕಂಡು ಗಾಬರಿಯಾಗಿದರು,

ಗೌಡರು ಅಲ್ಲಿದ್ದ ಶಂಕ್ರಣ್ಣನನ್ನು ಕರೆದು ಇದನ್ನೆಲ್ಲ ಸರಿ ಮಾಡಲು ಕೂಲಿ ಆಳುಗಳನ್ನ ಕರೆಸಿ ಸರಿಮಾಡಿಸು ಎಂದು ಹೇಳಿ ಹೊರಟರು

ಮಾರನೆ ದಿನ ಶಂಕ್ರಣ್ಣ ಕೂಲಿ ಆಳುಗಳನ್ನ ಕರೆಸಿ ಕೆಲಸಕ್ಕೆ ಹಚ್ಚಿ ದನಗಳಿಗೆ ನೀರು ಕುಡಿಸಿ , ಕಟ್ಟಿ ಹಾಕಿ , ಮೇವು ಹಾಕಿ ಕೆಲಸ ನೋಡಲು ಹೋದನು .

ಹೀಗೆ ಕೆಲಸ ಸುಮಾರು ದಿನಗಳವರೆಗೂ ನಡೆಯಿತು. ಬೇಸಿಗೆ ದಿನ ಬಂದೆ ಬಿಟ್ಟಿತು , ಮಧ್ಯಾಹ್ನವಂತು ನೆತ್ತಿ ಮೇಲೆ ಸುಡುವ ರಣ ಬಿಸಿಲು, ರಸ್ತೆಯುದ್ದಕ್ಕೂ ನಡೆದುಕೊಂಡು ಹೋಗುತ್ತಿದ್ದರೆ, ಮರದ ಮೇಲಿನ ಕರ್ಕಶ ಶಬ್ದ, ಎತ್ತ ನೋಡಿದರೂ ಒಣಗಿ ನಿಂತ ಗಿಡ–ಗಂಟಿ ಮತ್ತು ಜಾಲಿ ಮುಳ್ಳುಗಳು, ಎಲ್ಲವೂ ಒಟ್ಟುಗೂಡಿ ಹೆದರಿಸಲು ಸಜ್ಜಾಗಿವೆ ಎಂದೆನಿಸುತಿತ್ತು.

ಇಂತಹ ದಿನಗಳಲ್ಲಿ ಸಾಯಂಕಾಲ ಶಂಕ್ರಣ್ಣ ತೋಟಕ್ಕೆ ನೀರು ಬಿಡಲೆಂದು ಹೋಗಿದ್ದ.

ಒಂದೇ ಸಮನೆ, ಅಂದು ಸುಂಯಿ.... ಎಂದು ಗಾಳಿ ಬೀಸುತಿತ್ತು ,

ಆಗ ಶಂಕ್ರಣ್ಣ ಬೋರ್ ವೆಲ್ ನ ಬಟನ್ ಹಾಕಲು ಹೋಗಿದ್ದ, ಆ ಸಮಯದಲ್ಲಿ ತೋಟದ ಮೇಲಿಂದ ಹಾದು ಹೋಗಿದ್ದ ವೈರ್ ಗಳು ಸಡಿಲವಾಗಿ ಗಾಳಿಗೆ ಒಂದು ಇನ್ನೊಂದಕ್ಕೆ ತಾಗಿ , ಮೋಟಾರ್ ಸುಟ್ಟು ತೋಟಕ್ಕೆ ಬೆಂಕಿ ಹಾರಿತು.

ಬಾಳೆ ತೋಟದ ಸುತ್ತಲೂ ಇದ್ದ ಬೇಲಿ ಸುಟ್ಟು ಕಬ್ಬಿನ ತೋಟಕ್ಕೆ ಹಾಯಿತು, ಶಂಕ್ರಣ್ಣನು ಬೆಂಕಿ ಆರಿಸುವಲ್ಲಿ ವಿಫಲನಾದನು, ಗಾಳಿಯ ತಾಳಕ್ಕೆ ನರ್ತಿಸಿದ ಬೆಂಕಿಯೂ ಬಳೆದು ನಿಂತ ಕಬ್ಬಿನ ಗದ್ದೆಯೆಲ್ಲ ಸುಟ್ಟು ಬೂದಿಯಾಗಿತ್ತು. ಎತ್ತ ನೋಡಿದರೂ ಹಸಿರಾಗಿ ಕಾಣುತ್ತಿದ್ದ ತೋಟ ಬಾಳೆ ಗಿಡಗಳು ಬಿಟ್ಟರೆ ಎಲ್ಲವೂ ಕರಕಲವಾಗಿತ್ತು .

ಇದಕ್ಕೆಲ್ಲ ಶಂಕ್ರನೆ ಕಾರಣ ಎಂದು, ಮಾರನೆ ದಿನ ಗೌಡರು ಶಂಕ್ರಣ್ಣನ ಕರೆದು ಕಂಬಕ್ಕೆ ಕಟ್ಟಿ ಹಾಕಿ ಇಷ್ಟೆಲ್ಲ ನಿನ್ನಂದಾನೆ ಆಗಿದ್ದು ಎಂದು ಹೊಡೆದರು, ಸೀತಾ ಎಷ್ಟೇ ಗೋಗರೆದರು ಗೌಡರು ಕರಗಲಿಲ್ಲ.

ಈಗಾದ ನಷ್ಟಕ್ಕೆ ನೀನೆ ದಂಡ ಕಟ್ಟಬೇಕು ಎಂದು, ಎಂಟು ವರ್ಷ ವೇತನವಿಲ್ಲದೆ ದುಡಿದು ತೀರಿಸಬೇಕು ಎಂದು ಹೇಳಿದ್ದರು.

ಶಂಕ್ರಣ್ಣ ಮುಲಾಜಿಲ್ಲದೆ ಎಂಟು ವರ್ಷ ದುಡಿಬೇಕಾಯಿತು.

ಇದನ್ನೆಲ್ಲ ಸ್ಮರಿಸುತ್ತಾ ಸೀತಾ ಹೊಲ ತಲುಪಿಯೇ ಬಿಟ್ಟಳು, ಆದರೆ ಗಾಳಿ ಮಾತ್ರ ನಿಲ್ಲಲಿಲ್ಲ, ಇಷ್ಟೆಲ್ಲ ನೆನೆದ ಸೀತಾಳ ಮನದಲ್ಲಿ ಆತಂಕ ದುಗುಡ , ಭಯಕ್ಕೆ ಮನೆ ಮಾಡಿ , ಭಯದಲ್ಲೆ ಮನೆಕಡೆ ಹೆಜ್ಜೆ ಹಾಕಿದಳು .

ಸೀತಾಳ ನಿರೀಕ್ಷೆಯಲ್ಲಿದ್ದ ಶಂಕ್ರಣ್ಣ ಮನೆಯ ಹೊಸ್ತಿಲಲ್ಲಿ ಕುಳಿತಿದ್ದ, ಇದನ್ನು ಕಂಡ ಸೀತಾಳ ಕಣ್ಣುಗಳು ತುಂಬಿ ಬಂದವು.

**– ಆನಂದಿ ರಾಜಶೇಖರ ನೀಮಾಹೊಸಳ್ಳಿ**

ಕರುನಾಡ ಕಂದ
ಸಂಪುಟ–1 । ಸಂಚಿಕೆ–6
ದಿನಾಂಕ: 16–01–2022 । ಪುಟಗಳು: 20

# ಬಾಗಲಕೋಟೆ: ಎಮ್ ಇ ಎಸ್ ಪುಡಾರಿಗಳನ್ನು ಬಂಧಿಸಿ ಮತ್ತು ಸಂಘಟನೆಯನ್ನು ರದ್ದುಗೋಳಿಸುವ ಕುರಿತು ಜಯ ಕರ್ನಾಟಕ ಸಂಘಟನೆಯ ಪ್ರತಿಭಟನೆ

ಕರ್ನಾಟಕ ರಾಜ್ಯದಲ್ಲಿ ಕನ್ನಡಿಗರೇ ಸಾರ್ವಭೌಮರು ರಾಜ್ಯದಲ್ಲಿ ಅದರಲ್ಲಿಯೂ ಮೇಲಾಗಿ ಉತ್ತರ ಕರ್ನಾಟಕದ ಕೇಂದ್ರ ಬಿಂದು ಕರ್ನಾಟಕದ ಹೃದಯ ಭಾಗವಾಗಿರುವ ಬೆಳಗಾವಿಯಲ್ಲಿ ಮೇಲಿಂದ ಮೇಲೆ ಕನ್ನಡಿಗರ ಮೇಲೆ ನೂರಾರು ಪ್ರಕರಣಗಳು ಎಮ್ ಇ ಎಸ್ ಸಂಘಟನೆಯಿಂದ ಕನ್ನಡಿಗರನ್ನು ಅವಮಾನಿಸುವದು, ಮತ್ತು ಭಾಷೆ ದೌರ್ಜನ್ಯ ನಡೆಸುವದು, ರಾಜಕೀಯ, ಧಾರ್ಮಿಕ ಹೆಸರಿನಲ್ಲಿ ಮಂಡಾಟಿಕೆ ಮಾಡುವದು ಸಾಮಾನ್ಯವಾಗಿದೆ. ಕಾರಣ ಈ 2021 ರ ಬೆಳಗಾವಿ ಅಧೀವೇಶನದ ಸಂದರ್ಭದಲ್ಲಿ ಉದ್ದೇಶ ಪೂರ್ವಕವಾಗಿಯೇ ಕನ್ನಡಿಗರನ್ನು ಅವಮಾನ ಮಾಡಲೆಂದು ಎಮ್ ಇ ಎಸ್ ಮುಖಂಡರು ಈ ರೀತಿ ವರ್ತನೆ ಮಾಡಿರುವದು ನಾಡದ್ರೋಹಿ ಕೆಲಸವಲ್ಲದೇ ಮತ್ತೇನು ಅನ್ನಬೇಕು.

ಬಿಡಾಡಿ ನಾಯಿಗಳು ಕರೆದು ಕಟ್ಟೋರಿಲ್ಲ ತುರಿಸಿ ಮೇವು ಹಾಕುವ ರಾಜಕಾರಣಿಗಳಿಗೆ ತಮ್ಮ ಮನೆಗೆ ಬೆಂಕಿ ಹತ್ತಿದಾಗ ಯಾವ ರೀತಿ ಓಡಾಡುತ್ತಾರೆ. ಆದರೆ



ಈಗ ಕನ್ನಡ ಧ್ವಜವನ್ನು ಸುಟ್ಟು ಹಾಕಿದರೂ ಇವರು ಮೌನವಾಗಿರುವದು ನೋಡಿದರೆ ರಾಜಕೀಯ ಹಿನ್ನೆಲೆಯಉದ್ದೇಶ ಎದ್ದು ಕಾಣುತ್ತದೆ.

ಈಗಿನ ಬಿ ಜೆ ಪಿ ಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಕೂಡಲೇ ಅಧಿವೇಶನದಲ್ಲಿ ಧ್ವನಿಎತ್ತಿ ಕೂಡಲೇ ಎಮ್ ಇ ಎಸ್ ಸಂಘಟನೆಯನ್ನು ಬ್ಯಾನ ಮಾಡಿ ತಪ್ಪಿತರ ಮೇಲೆ ರೌಡಿ ಸಿಟರ್ ಕೇಸ್ ಓಪನ್ ಮಾಡಿ ಅವರನ್ನು ಈ ತತಕ್ಷಣದಿಂದಲೇ ಬಂಧಿಸಿ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಹದಗೆಡದಂತೆ ಸರ್ಕಾರ ಮುತುವರ್ಜಿ ವಹಿಸಿಕೊಳ್ಳಬೇಕು. ಒಂದು ವೇಳೆ ಸರ್ಕಾರ ಮೌನಕ್ಕೆ ಶರಣಾಗಿ ಕಾಟಾಚಾರಕ್ಕೆ ಸಣ್ಣ ಪ್ರಕರಣಗಳನ್ನು ದಾಖಲುಮಾಡಿಕೊಂಡಿದ್ದೇ ಆದರೆ ಕನ್ನಡಿಗರು ಮೌನವಾಗಿರುತ್ತಾರೆ ಎನ್ನುವ ಭಮೆ ಈಗೀನ ಬಿ ಜೆ ಪಿ ಸರ್ಕಾರಕ್ಕೆ ಇದ್ದರೆ ಮೂರ್ಖತನದ ಪರ್ಮಾವಧಿ ಅಂತಾನೇ ಭಾವಿಸಬೇಕು. ಮತ್ತು ಕನ್ನಡ ಭಾವುಟ ಪ್ರತಿ ಗ್ರಾಮ ಪಂಚಾಯತ ಮಟ್ಟದಲ್ಲಿ ಪ್ರತಿ ದಿನ ಹಾರಿಸುವಂತೆ ಒತ್ತಾಯಿಸಬೇಕು ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಹೆಸರನ್ನು ವಿಮಾನ ನಿಲ್ದಾನ ಮತ್ತು ಯುನಿವರ್ ಸೀಟಿಗಳಿಗೆ ನಾಮಕರಣ ಮಾಡಬೇಕು,ಕರ್ನಾಟಕ ರಾಜ್ಯದಲ್ಲಿ ಈಗಿನ ಬಿ ಜೆ ಪಿ ಸರ್ಕಾರ ಯಾವ ಓಣಿಗೂ ಮತ್ತು ಗ್ರಾಮಕ್ಕೂ ಬರದಂತೆ ಕರ್ನಾಟಕ ರಾಜ್ಯದ ಕನ್ನಡಿಗರ ಒತ್ತಾಸೆಯಂತೆ ಜಯ ಕರ್ನಾಟಕ ಸಂಘಟನೆ ಉಗ್ರ ಹೋರಾಟಕ್ಕೆ ಇಳಿಯಬೇಕಾಗುತ್ತದೆ. ಸರ್ಕಾರಕ್ಕೆ ಎಚ್ಚ–ರಿಕೆಯ ಸಂದೇಶ ನೀಡಿದೆ.ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಆರ್.ಡಿ.ಬಾಬು ಸೇರಿದಂತೆ ಜಯ ಕರ್ನಾಟಕ ಸಂಘಟನೆಯ ಕಾರ್ಯಕರ್ತರು ಭಾಗವಹಿಸಿದ್ದರು.

# ಮಹಿಳೆಯರ ಮತ್ತು ಮಕ್ಕಳ ಮೇಲಾಗುತ್ತಿರುವ ದೌರ್ಜನ್ಯ ತಡೆಗಟ್ಟಲು ಅರಿವು ಮೂಡಿಸುವುದು ಅಗತ್ಯವಾಗಿದೆ

ಮಹಿಳೆಯರ ಮತ್ತು ಮಕ್ಕಳ ಮೇಲಾಗುತ್ತಿರುವ ದೌರ್ಜನ್ಯ ತಡೆಗಟ್ಟಲು ಅರಿವು ಮೂಡಿಸುವುದು ಅಗತ್ಯವಾಗಿದೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಆರ್.ಪ್ರಮೀಳಾ ನಾಯ್ಡು ತಿಳಿಸಿದರು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಮಂಗಳವಾರ ಮಹಿಳಾ ಕಲ್ಯಾಣ ವಿಭಾಗದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪ್ರೌಢಶಾಲಾ ಮಟ್ಟದಿಂದ ಪಿಯುಸಿ ಹಂತದವರೆಗೆ ಮಕ್ಕಳಲ್ಲಿ ಬಾಲವ್ಯವಿವಾಹ, ವರದಕ್ಷಿಣೆ ನಿಷೇಧ, ಪೋಸ್ಕೋ ಸೇರಿದಂತೆ ಇತರೆ ಕಾಯ್ದೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ, ಪೊಲೀಸ್, ಶಿಕ್ಷಣ, ಆಯೋಗ್ಯ ಇಲಾಖೆ ಸಹಯೋಗದಲ್ಲಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ತಿಳಿಸಿದರು ಗಾರ್ಮೇಂಟ್ಸ್ ಕಂಪನಿಗಳಲ್ಲಿ ಹೆಚ್ಚಾಗಿ ಮಹಿಳೆಯರೆ ಹೆಚ್ಚಾಗಿ ಕೆಲಸ ಮಾಡುತ್ತಿರುವ ಹಿನ್ನಲೆಯಲ್ಲಿ ಬೀಳಗಿ ತಾಲೂಕಿನಲ್ಲಿರುವ ಗಾರ್ಮೇಂಟ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಮಹಿಳೆಯರ ಸುರಕ್ಷಿತ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸುವ ಕಾರ್ಯವಾಗಬೇಕು. ಬಾಗಲಕೋಟೆ ಜಿಲ್ಲೆಯಲ್ಲಿ ಕೌಟುಂಬಿಕ ದೌರ್ಜನ್ಯ, ವರದಕ್ಷಣೆ, ಹಣದ ವಂಚನೆ ಸೇರಿದಂತೆ ಇತರೆ ಪ್ರಕಟಣಗಳನ್ನು ಗಮನಿಸಿದಾಗ ಕಡಿಮೆ ಇರುವುದು ಕಂಡುಬಂದಿದೆ. ಬಾಲ್ಯವಿವಾಹಗಳು ಹೆಚ್ಚಾಗಿ ಕಂಡುಬಂದಿದ್ದು, ಜಿಲ್ಲಾ ಮತ್ತು ತಾಲೂಕಾ ಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಿದರು ಮಹಿಳೆಯರಿಗೆ ರಕ್ಷಣೆ ಒದಗಿಸುವಲ್ಲಿ ಆಯೋಗ ಬದ್ದವಾಗಿದ್ದು, ಕಾಯ್ದೆ ಉಲ್ಲಂಘನೆಯಾದಲ್ಲಿ ನಿರ್ದಾಕ್ಷಣ್ಯವಾಗಿ ಕ್ರಮವಹಿಸಲು ಅಧಿಕಾ–ರಿಗಳಿಗೆ ಪ್ರಮಿಳಾ ನಾಯ್ಡು ಸೂಚಿಸಿದರು. ಜಿ.ಪಂ ಸಿಇಓ ಟಿ.ಭೂಬಾಲನ್ ಮಾತನಾಡಿ ಪ್ರೌಢಶಾಲಾ ಹಂತದಲ್ಲಿ ಮಕ್ಕಳಿಗೆ ಅರಿವು ಕಾರ್ಯಕ್ರಮಕ್ಕಾಗಿ ಕ್ರಮಕೈಗೊಳ್ಳಲಾಗಿದೆ. ಬಾಲ್ಯವಿವಾಹ ತಡೆಗೆ ಎಲ್ಲ ರೀತಿಯ ಕ್ರಮವಹಿಸಲಾಗುತ್ತಿದೆ. ಇಂತಹ ಪ್ರಕರಣಗಳ ಬಗ್ಗೆ ಮಾಹಿತಿ ಬಂದಾಗ ತಡೆಯುವದರ ಜೊತೆಗೆ ಪ್ರಕರಣ ಸಹ ದಾಖಲಿಸಲಾಗಿದೆ ಎಂದರು ತಿಳಿಸಿದರು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಉಪ ನಿರ್ದೇಶಕಿ ಭಾರತಿ ಬಣಕಾರ ಮಾತನಾಡಿ ಕಾನೂನು ಸೇವಾ ಪ್ರಾಧಿಕಾರದಿಂದ ಪ್ರತಿ ತಾಲೂಕಿನ ಶಿಶು ಅಭಿವೃದ್ದಿ ಯೋಜನಾಧಿಕಾರಿಗಳ ಕಚೇ–ರಿಗಳಲ್ಲಿ ಕಾನೂನು ಸೇವೆ ಪಡೆಯಲಾಗುತ್ತಿದೆ.




ಕೌಟುಂಬಿಕ ಹಿಂಸೆಯಿಂದ ಜಿಲ್ಲೆಯಲ್ಲಿ ಒಟ್ಟು 194 ಪ್ರಕರಣಗಳ ಪೈಕಿ 27 ಇತ್ಯರ್ಥಗೊಂಡಿದ್ದು, 167 ಬಾಕಿ ಇರುತ್ತವೆ. ಜಿಲ್ಲಾ ಆಸ್ಪತ್ರೆಯಲ್ಲಿ ಸದ್ಯ ಸಖಿ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು, ನವನಗರದ ಸೆಕ್ಟರ ನಂ.25 ರಲ್ಲಿ ಸ್ವಂತ ಕಟ್ಟಡ ಪೂರ್ಣಗೊಳ್ಳುವ ಹಂತದಲ್ಲಿರುವುದಾಗಿ ತಿಳಿಸಿದರು ಜಿಲ್ಲೆಯಲ್ಲಿ 3 ಸ್ವಾಧಾರ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ನವೆಂಬರ ಅಂತ್ಯಕ್ಕೆ ಪುನರ್ವಸತಿ ಕಲ್ಪಿಸಿ 98 ಮಹಿಳೆಯರು ಹಾಗೂ 39 ಅವಲಂಬಿತ ಮಕ್ಕಳನ್ನು ಬಿಡುಗಡೆ ಮಾಡಲಾಗಿದೆ. ಸದ್ಯ 40 ಜನ ಮಹಿಳೆಯರು, 11 ಅವಲಂಬಿತ ಮಕ್ಕಳಿದ್ದಾರೆ. 4 ಸಾಂತ್ವನ ಕೇಂದ್ರಗಳು ಸಹ ಇದ್ದು, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಮಾಲೋಚನೆ, ನೆರವು, ವಿದ್ಯಾಬ್ಯಾಸ ಮುಂದುವರಿಸಲು ಆಸಕ್ತಿ ತೋರಿದಲ್ಲಿ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಲ್ಲಿ ಆಶ್ರಯ ಒದಗಿಸಿ ಕೆಲಸ ಮಾಡಲಾಗುತ್ತಿದೆ. ವರದಕ್ಷಿಣೆ ನಿಷೇಧ ಕಾಯ್ದೆಯಡಿ ಜಿಲ್ಲೆಯಲ್ಲಿ 13, ಐಪಿಸಿ ಅಡಿಯಲ್ಲಿ 22 ಸೇರಿ ಒಟ್ಟು 35 ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿರುವುದಾಗಿ ತಿಳಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಕ್ಯಾಪ್ಟನ್ ಡಾ.ಕೆ. ರಾಜೇಂದ್ರ, ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ, ಉಪವಿಭಾಗಾಧಿಕಾರಿ ಎಂ.ಗಂಗಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಅನಂತ.ದೇಸಾಯಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎಸ್.ಎಸ್.ಬಿರಾದಾರ ಸೇರಿದಂತೆ ಆಯಾ ತಾಲೂಕಿನ ತಹಶೀಲ್ದಾರ, ಶಿಶು ಅಭಿವೃದ್ದಿ ಯೋಜನಾಧಿಕಾರಿಗಳು ಉಪಸ್ಥಿತರಿದ್ದರು.

## ರೈತ

ಭೂಮಾತೆಯ
ಚೊಚ್ಚಲ ಮಗನಿವನು,
ಆಕೆಯ ಮಡಿಲಲ್ಲಿ
ತನ್ನ ಜಗವ ಕಾಣುವನು,
ಹಸಿರ ಉಸಿರಲ್ಲಿ ತನ್ನ
ಖುಷಿಯ ಕಂಡು ಸಂತೃಪ್ತಿ ಪಡುವನು,
ಲಾಭ ನಷ್ಟಗಳ ಎಣಿಸದೆ
ಹಗಲಿರುಳು ಶ್ರದ್ಧೆಯಿಂದ ದುಡಿವನು,
ಎಲೆಮರೆಯ ಕಾಯಿಯಂತೆ
ಸಲಹೋ ತಾಯಿಯಂತೆ ಜಗಕ್ಕೆ ಅನ್ನ
ನೀಡುವನು,
ನಿಷ್ಠೆಯಲಿ ಯೋಧನು
ಕಷ್ಟಕ್ಕೆ ಕಲ್ಲಾಗುವನು ಅವನೇ ನಮ್ಮ
ಅನ್ನದಾತನು.

## "ಒಲವಿನ ಓಲೆ"

ನಿನಗಾಗಿ ನಾ
ಬರೆದೆ ಒಂದು ಓಲೆ .
ನೀ ಓದುವೆಯ
ಒಮ್ಮೆ ನನ್ನ ನಲ್ಲೆ.

ತರುವೆ ನಾ ನಿನ್ನ
ಮುಡಿಗೆ ಘಮ್
ಎನ್ನುವ ಮಲ್ಲಿಗೆ .
ಬರುವೆಯಾ ನೀ ನನ್ನ
ಮನಸ್ಸಿನ ಸುಂದರ
ಕೋಣೆಗೆ.

ಜೊತೆಯಾಗಿ
ಸಾಗಿಸೋಣ ಸಂಸರ
ಎಂಬ ನೌಕೆ .
ಜನುಮ ಜನುಮದ
ಜೋಡಿ ನೀ ಎಂದಿಗೂ
ನನ್ನಾಕೆ.

–ರಾಧ ಅಪರಂಜಿ .

ಕರುನಾಡ ಕಂದ
ಸಂಪುಟ–1 । ಸಂಚಿಕೆ–6
ದಿನಾಂಕ: 16–01–2022 । ಪುಟಗಳು: 20

# ಮನೆ ಮನಕ್ಕೂ ಸಾಹಿತ್ಯ ಅಭಿಯಾನ




ಸಾಹಿತಿಗಳು ಸಮಾಜ ಸಮೃದ್ಧಿಗೊಳಿಸುವ ಶಾಸಕರು – ಸಾಹಿತಿ ಆರ್.ಮನೆ ಮನಕ್ಕೂ ಸಾಹಿತ್ಯ ಅಭಿಯಾನ

ಸಾಹಿತಿಗಳು ಸಮಾಜ ಸಮೃದ್ಧಿಗೊಳಿಸುವ ಶಾಸಕರು – ಸಾಹಿತಿ ಆರ್.ಎಸ್. ಪಟ್ಟಣಶೆಟ್ಟಿ ಅಭಿಮತ . ಪಟ್ಟಣಶೆಟ್ಟಿ ಅಭಿಮತ

ವಿಜಯಪುರ – ನಗರದ ಕೆ.ಸಿ. ನಗರ ಬಡಾವಣೆಯಲ್ಲಿ ಭಾರತ ಯುವವೇದಿಕೆ ಚಾರಿಟೇಬಲ್ ಫೌಂಡೇಶನ್ ಸಾಹಿತ್ಯ ಘಟಕದ ವತಿಯಿಂದ ದಿನಾಂಕ 15–12–2021ರಂದು ಸಾಯಂಕಾಲ 5–30ಗಂಟೆಗೆ ಬಸಪ್ಪ ಬ್ಯಾಲ್ಯಾಳ ಅವರ ನಿವಾಸದಲ್ಲಿ ಮನೆ ಮನಕ್ಕೂ ಸಾಹಿತ್ಯ ಅಭಿಯಾನ ಮತ್ತು ಗೌರವ ಸನ್ಮಾನ ಕಾರ್ಯಕ್ರಮ ಜರುಗಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸಪ್ಪ ಬ್ಯಾಲ್ಯಾಳ ವಹಿಸಿದ್ದರು. ಬಿ.ಜೆ. ಇಂಡಿ ಗುರುಗಳು ಸಸಿಗೆ ನೀರುಣಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವೇದಿಕೆಯು ಕೋವಿಡ್ ಸಂದರ್ಭದಲ್ಲಿ ಊಟ, ನೀರು ವ್ಯವಸ್ಥೆ ಮಾಡಿ ನಗರದ ಎಲ್ಲಾ ಆಸ್ಪತ್ರೆಗಳಿಗೆ ತಲುಪಿಸಿ ಸಮಾಜ ಸೇವೆ ಮಾಡಿದ್ದು ನೆನಪಿಸಿದರು. ಈಗ ಸಾಹಿತ್ಯದಲ್ಲಿ ಬೆಳೆವಣಿಗೆಯಾಗುತ್ತಿರುವುದು ಸಂತೋಷ. ಎಲೆಮರೆ ಕಾಯಿ ತರಹ ಇರುವ ಸಾಹಿತಿಗಳಿಗೂ ಹವ್ಯಾಸ ಬರಹಗಾರರಿಗು ಪ್ರತಿಭೆಯನ್ನು ಗುರ್ತಿಸಿ ವೇದಿಕೆ ಕಲ್ಪಿಸಿ. ಇದೇ ರೀತಿ ಕಾರ್ಯಗಳನ್ನು ಮಾಡುತ್ತಾ ಮುಂದುವರೆಯಲಿ ಎಂದು ಹೇಳಿದರು.

ಕಾರ್ಯಕ್ರಮದ ಉಪನ್ಯಾಸವನ್ನು ಸಾಹಿತಿಗಳಾದ ಆರ್.ಎಸ್. ಪಟ್ಟಣಶೆಟ್ಟಿ ಮಾತನಾಡುತ್ತಾ, ನೀರಿನಲ್ಲಿ ಫ್ಲೋರೈಡ್ ಅಂಶ ಇರುತ್ತೆ. ಅದನ್ನು ಹಾಗೆ ಕುಡಿದರೆ ಮಂಡಿ ನೋವು ಬರುತ್ತದೆ. ಅದಕ್ಕೆ ನಾವು ಆ ನೀರನ್ನು ಫಿಲ್ಟರ್ ಮಾಡಿ ಕುಡಿಯುತ್ತೇವೆ. ಹಾಗೆನೇ ಜಗತ್ತಿನಲ್ಲಿ ಕೆಟ್ಟ ವಿಚಾರಗಳನ್ನು ನೇರವಾಗಿ ತಲೆಯಲ್ಲಿ ಹಾಕಿಕೊಂಡರೆ ಮನಸ್ಸಿನ ನೋವು ಬರುತ್ತದೆ. ಅದಕ್ಕಾಗಿಯೇ ಮನೆ ಹಾಗೂ ಮನಸ್ಸು ಸುಂದರವಾಗಿಡಲು ಸಾಹಿತ್ಯವು ಬಹಳ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದರು.

ಇಂದಿನ ಆಧುನಿಕ ಪ್ರಪಂಚದಲ್ಲಿ ಜನರು ಅಲಂಕಾರಿಕ ಜೀವನ ನಡೆಸುತ್ತಿದ್ದಾರೆ. ಕೇವಲ ಬಾಹ್ಯ ಪ್ರಪಂಚಕ್ಕೆ ಒತ್ತು ಕೊಟ್ಟು ಆಂತರಿಕ ಪ್ರಪಂಚವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ಇರಬೇಕು ಹಿಂದಿನ ಕಾಲದಲ್ಲಿ ಮನುಷ್ಯನ ತಲೆ ತಂಪಾಗಿ ಕಾಲುಗಳು ಬೆಚ್ಚಗಿದ್ದವು. ಆದರೆ ಈಗ ತಲೆ ಬಿಸಿಯಾಗಿ ಕಾಲುಗಳು ತಂಪಾಗುತ್ತಿವೆ ಎಂದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳು ವ್ಹಿ.ಬಿ. ಕರ್ಕಿ, ಸತೀಶ ದೊಡಮನಿ, ಗೌರವ ಉಪಸ್ಥಿತಿ ಶಿವಾಜಿ ಮೋರೆ ಅಧ್ಯಕ್ಷರು ಸಾಹಿತ್ಯ ಘಟಕ ಭಾ.ಯು. ವೇ., ಇದೇ ಸಂದರ್ಭದಲ್ಲಿ ನಿವೃತ್ತ ಯೋಧರಾದ ಬಸಪ್ಪ ಬ್ಯಾಲ್ಯಾಳ ಅವರಿಗೆ ಸುನೀಲ ಜೈನಾಪುರ ಮತ್ತು ಶಿವಾಜಿ ಮೋರೆಯವರು ಗೌರವ ಸನ್ಮಾನ ಮಾಡಿದರು.ಈ ಕಾರ್ಯಕ್ರಮದಲ್ಲಿ ಕೆ.ಸಿ. ನಗರ ಮತ್ತು ಅಲಕುಂಟೆ ನಗರ ಬಡಾವಣೆಯ ಹಿರಿಯರು, ಗಣ್ಯ ಮಾನ್ಯ ವ್ಯಕ್ತಿಗಳು, ಸಹೋದರ ಸಹೋದ–ರಿಯರು ಮತ್ತು ಘಟಕ ಪದಾಧಿಕಾರಿಗಳಾದ ಆನಂದ ಬ್ಯಾಲ್ಯಾಳ, ಸಂತೋಷ ನಾಗಠಾಣ, ವಾಯ್.ಎಸ್. ಅರಬಿ, ಮಂಜುನಾಥ ಹೊನಕೇರಿ, ಚಂದ್ರಕಾಂತ ಹೊನಕೇರಿ, ಶಿವಶರಣ ಅಂಬಿಗೇರ, ಬೀರು ಗಾಡವೆ, ದತ್ತಾ ಉಕ್ಕಲಿ, ಉಮೇಶ ಗುಡಿಸಲಮನಿ, ಶಶಿ ಸಂಗಣ್ಣವರ, ಕಿರಣ ಅಲಕುಂಟೆ ಭಾಗವಹಿಸಿದ್ದರು.

–ಶ್ರೀರಂಗ ಪುರಾಣಿಕ್

# ಪರಿಸರ ರಕ್ಷಣೆಗೆ ಕಂಕಣ ಬದ್ಧರಾದ 'ನನ್ನ ಗಿಡ – ನನ್ನ ಭೂಮಿ ತಂಡ'

ಪ್ರತಿವರ್ಷವೂ ಸರ್ಕಾರ ಗಣೇಶ ಚತುರ್ಥಿಯಂದು ಪರಿಸರ ಸ್ನೇಹಿ ಮಣ್ಣಿನ ಗಣಪನನ್ನೂ ಪೂಜಿಸಿ ಪರಿಸರಕ್ಕೆ ಹಾನಿಯಾಗುವ , ಜಲಮಾಲಿನ್ಯಕರವಾದ ಪಿಓಪಿ ಗಣಪತಿಯನ್ನು ಕೂಡಿಸದಂತೆ ಹೇಳುತ್ತದೆ. ಮತ್ತು ಪತ್ರಿಕಾ ಜಾಹೀರಾತುಗಳನ್ನು ಕೊಡುತ್ತದೆ. ಆದರೆ ಇದು ಯಾರ ಮನಸ್ಸಿಗೂ ನಾಟುವುದಿಲ್ಲ, ಮಾರನೆಯ ದಿನ ರದ್ದಿ ಆ ಪೇಪರ್ ರದ್ದಿಗೆ ಸೇರಿಬೀಡುತ್ತದೆ. ಸರ್ಕಾರ ಹೇಳುವದೊಂದು ಮಾಡುವದೊಂದು ಪರಿಸರ ಸ್ನೇಹಿ ಮಣ್ಣಿನ ಗಣಪನನ್ನು ಕೂಡಿಸುವಂತೆ ಹೇಳುತ್ತದೆ ಆದರೆ, ಪಿಓಪಿ ಗಣಪತಿ ಮಾರಾಟಕ್ಕೆ ಅದೇ ಸರ್ಕಾರವೇ ಪರವಾನಗಿ ನೀಡುತ್ತದೆ. ಇದು ಜನರಲ್ಲಿ ಗೊಂದಲುಂಟು ಮಾಡಿ ಪಿಓಪಿಯಿಂದ ತಯಾರಿಸಲಾದ ಆಕರ್ಷಕ ಗಣಪತಿಳದತ್ತ ಮೊರೆಹೋಗುತ್ತಾರೆ. ಆದ್ದರಿಂದ ಸರ್ಕಾರ ಹೇಳಿಕೆಗಳು ಗೌಣವಾಗಿ ಜನಮಾನಸದಲ್ಲಿ ಪರಿಸರ ಸ್ನೇಹಿ ಮಣ್ಣಿನ ಗಪಪನನ್ನು ಪೂಜಬೇಕಂಬುವದು ಮನದಟ್ಟಾಗುವುದಲ್ಲ ,ಮನದದಟ್ಟುಮಾಡುವ ಕೆಲವನ್ನು ಸರ್ಕಾರವೂ ಮಾಡೋಲ್ಲ.

ಇನ್ನೂ ಕೆಲ ಪರಿಸರ ಹೋರಾಟಗಾರು ಹೇಳಿಕೆ ಸೀಮಿತವಾಗಿ ಒಂದಿಷ್ಟು ಪ್ರಚಾರ ಪಡೆದುಕೊಂಡು ಸುಮ್ಮನಾಗುತ್ತಾರೆ ಹೊರತು, ಮಣ್ಣಿನ ಗಣಪತಿ ಕೂಡಿಸುವಂತೆ ಪರಿಸರ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಮುಂದಾಗುವುದಿಲ್ಲ..

'ನನ್ನ ಗಿಡ ನನ್ನ ಗಿಡ'

ವಿಜಯಪುರದ 'ನನ್ನ ಗಿಡ ನನ್ನ ಭೂಮಿ' ತಂಡ ಈ ನಿಟ್ಟಿನಲ್ಲಿ ಯಾವ ಪ್ರಚಾರವನ್ನು ಬಯಸದೇ ತನ್ನ ಪಾಡಿಗೆ ತಾನು ತನ್ನ ಕೆಲಸದಲ್ಲಿ ಕಾರ್ಯಪ್ರವೃತ್ತವಾಗಿದೆ. ಈಗಾಗಲೇ ಆರುವರೆ ಸಾವಿರಕ್ಕೂ ಹೆಚ್ಚು ಸಸಿಗಳನ್ನು ನಗರದಾದ್ಯಂತ ಹಚ್ಚಿರುವ ತಂಡ ಬಿಸಿಲು ನಗರಿ ವಿಜಯಪುರವನ್ನು ಹಸಿರು ನಗರಿ ಮಾಡಹೊರಟಿದೆ.

'ಮನೆಮನೆಗೂ ಮಣ್ಣಿನ ಗಣಪ'

ಇದೇ 'ನನ್ನ ಗಿಡ ನನ್ನ ಭೂಮಿ' ತಂಡದಿ,ದ ಮೂರುವರ್ಷದ ಹಿಂದೆ 'ಮನೆಮನೆಗೂ ಮಣ್ಣಿನ ಗಣಪ' ಅಭಿಯಾನ ಪರಿಸರ ಸ್ನೇಹಿ ಮಣ್ಣಿನ ಗಣಪನನ್ನು ಪೂಜಿಸುವಂತೆ ಮತ್ತು ಪಿಓಪಿ ಗಣಪತಿ ಮೂರ್ತಿಗಳನ್ನು ಕೊಳ್ಳದಂತೆ ಹಾಗೂ ಅದ–ರಿಂದಾಗುವ ಪರಿಸರ ಹಾನಿಯನ್ನು ಜನರಿಗೆ ಮನದಟ್ಟು ಮಾಡುವಲ್ಲಿ ಪ್ರಾರಂಭವಾಯಿತು. ಇದನ್ನು ಉದ್ಘಾಟನೆ ಮಾಡಿ ಆಶೀರ್ವದಿಸಿದವರು ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಗಳು. ಮತ್ತು ಕಳೆಮೂರುವರ್ಷಗಳಿಂದ ಈ ತಂಡ ಮಣ್ಣಿನ ಗಣಪ ಪೂಜಿಸುವಂತೆ ಜನಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ..

ನಂಬಲಿಕ್ಕಿಲ್ಲ ಕಳೆದ ಮೂರುವರ್ಷಗಳಿಂದ ಈ ತಂಡದ ಪ್ರಯತ್ನದಿಂದ ಈಗ ನಗರದಲ್ಲಿ ಅತಿಹೆಚ್ಚು ಜನರು ಮಣ್ಣಿನ ಗಣಪನನ್ನು ಕೊಂಡ್ಯೊಯಿದು ಪೂಜಿಸುತ್ತಿದ್ದಾರೆ. ಮಣ್ಣಿನ ಗಣಪತಿ ಮೂರ್ತಿಗಳ ಮಾರಾಟ ವ್ಯವಸ್ಥೆಯನ್ನು ತಂಡ ಮೂರುವರ್ಷಗಳಿಂದ ಮಾಡುತ್ತಿದ್ದೆ. ಹಾಗೇ ಮಣ್ಣಿನ ಗಣಪನನ್ನು ತಯಾರಿಸುವ ಕಲಾವಿದರನ್ನು ತಮ್ಮ ಕಾರ್ಯಕ್ರಮಗಳಿಗೆ ಆಹ್ವಾನಿಸಿ ಸನ್ಮಾನ ಮಾಡುತ್ತಾರೆ. ಮುಂದಿನ ದಿನಮಾನಗಳಲ್ಲಿ ಈ ಸಂಖ್ಯೆ ಇನ್ನಷ್ಟು ಹೆಚ್ಚಲಿದೆ ಎಂದು 'ನನ್ನ ಗಿಡ ನನ್ನ ಭೂಮಿಯ ಸದಸ್ಯರು' ಸಂತಸದಿಂದ ಹೇಳುತ್ತಾರೆ.

ಸರ್ಕಾರ ಮಾಡಬೇಕಾದ ಕೆಲವನ್ನು 'ನನ್ನ ಗಿಡ ನನ್ನ ಭೂಮಿ ತಂಡ' ಮಾಡುತ್ತಿದೆ. ಸದಸ್ಯರೇ ತಮ್ಮ ಮಾತಿಗೆ ಬದ್ಧರಾಗಿ ಅದನ್ನು ಅನುಸರಿಸುವ ಮೂಲಕ ಜನಜಾಗೃತಿ ಮೂಡಿಸುತ್ತಿದ್ದಾರೆ. ಅಲ್ಲದೆ ಕಾರ್ಯಕ್ರಮಗಳ ಮೂಲಕ, ಕಾರ್ಯಕ್ರಮಗಳಲ್ಲಿ ಪರಿಸರ ಸೇವೆಮಾಡುವರನ್ನು ಪರಿಚಯಿಸಿ ಸನ್ಮಾನಗಳ ಮೂಲಕ ಜನರಲ್ಲಿ ಪರಿಸರ ಬಗ್ಗೆ ಕಾಳಜಿವಹಿಸುವಂತೆ ಉತ್ತೇಜನ ನೀಡುತ್ತಿದ್ದಾರೆ.

ತಂಡದ ಸದಸ್ಯರು ಇಷ್ಟಾದರೂ ಪರಿಸರ ಸೇವೆ ಮಾಡಿದರೂ ಪ್ರಚಾರ ಬಳಸುವುದಿಲ್ಲ...

– ಶ್ರೀರಂಗ ಪುರಾಣಿಕ




KARUNADA KANDA, Fortnightly, Published and Owned by Karibasappa Baligar, At & Post: Gunnal-583237, Tq: Yalaburga, Dist: Koppal. Printed at Manohar printery , Azad road CBT HUBLI, Dist. Dharwad -580 020 email-karunadakanda33@gmail.com, Ph:9986366909, 9742776385. KARKAN/2021/27600. Editor: Basavaraj Baligar.